● www.prajavani.net

prajavani.net | prajavani | prajavani | prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಆರ್‌ಆರ್‌ಬಿಯಲ್ಲಿ ವಿವಿಧ ಹುದ್ದೆಗಳ ಆಯ್ಕೆ ಪ್ರಕ್ರಿಯೆ, ಪಠ್ಯಕ್ರಮಗಳ ಸಮಗ್ರ ಮಾಹಿತಿ ಇಲ್ಲಿದೆ.

ಲಿಂಗತ್ವ ಸಮಾನತೆ: 127ನೇ ಸ್ಥಾನಕ್ಕೆ ಭಾರತ 7

ಮಣಿಪುರ ಸಂಘರ್ಷ: 24ಕ್ಕೆ ಸರ್ವಪಕ್ಷಗಳ ಸಭೆ 3B

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
63,523 ▲	18,856 ▲	₹60,750 (ಬೆಂಗಳೂರು) ▼	₹72,500 (ಬೆಂಗಳೂರು) ▼	82.01 ▲

ದಶಪಥದಲ್ಲಿ ಪ್ರತಿ ಹಳ್ಳಿಗೂ ಸ್ಕೈವಾಕ್

● ಎಂ.ಎನ್.ಯೋಗೇಶ್

ಮಂಡ್ಯ: ಬೆಂಗಳೂರು– ಮೈಸೂರು ದಶಪಥದಲ್ಲಿ ಸ್ಥಳೀಯರು ರಸ್ತೆ ದಾಟಲು ಅನುಕೂಲವಾಗುವಂತೆ ಪ್ರತಿ ಹಳ್ಳಿಗೂ ಒಂದು ಸ್ಕೈವಾಕ್ ನಿರ್ಮಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನಿರ್ಧರಿಸಿದೆ.

118 ಕಿ.ಮೀ ಉದ್ದದ ಎಕ್ಸ್‌ಪ್ರೆಸ್‌ವೇ ದಕ್ಷಿಣ ಭಾರತದ ಮೊದಲ ಪ್ರವೇಶ–ನಿರ್ಗಮನ ನಿರ್ಬಂಧಿತ ಹೆದ್ದಾರಿ. ರಸ್ತೆಯ ಎರಡೂ ಕಡೆ ಬೇಲಿ ನಿರ್ಮಿಸಿ, ರಸ್ತೆ ದಾಟುವುದನ್ನು ಸಂಪೂರ್ಣವಾಗಿ ತಡೆಗಟ್ಟಲಾಗಿದೆ. ಆದರೆ, ಸ್ಥಳೀಯರು ಬೇಲಿಗಳನ್ನು ಮುರಿದು ರಸ್ತೆ ದಾಟುತ್ತಿದ್ದಾರೆ. ಅದೇ ಕಾರಣಕ್ಕೆ ಅಪಘಾತಗಳಲ್ಲಿ ಹಲವರು ಮೃತಪಟ್ಟಿದ್ದಾರೆ.

‘ಸ್ಕೈವಾಕ್ ನಿರ್ಮಿಸಲು ಜಿಲ್ಲಾ ವ್ಯಾಪ್ತಿಯ 55 ಕಿ.ಮೀ ಉದ್ದದ ಹೆದ್ದಾರಿಯಲ್ಲಿ 18 ಕಡೆ, ಮೈಸೂರು, ರಾಮನಗರ, ಬೆಂಗಳೂರು ಗ್ರಾಮಾಂತರ ವ್ಯಾಪ್ತಿಯಲ್ಲಿ 21 ಕಡೆ ಜಾಗ ಗುರುತಿಸಲಾಗಿದೆ. ಭೂಸ್ವಾಧೀನಕ್ಕಾಗಿ ಅಧಿಸೂಚನೆ ಹೊರಡಿಸಲಾಗಿದೆ’ ಎಂದು ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದರು.

6ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಅಕ್ಕಿ ಪೂರೈಕೆಗೆ ಒಪ್ಪದ ರಾಜ್ಯಗಳು ● ಯೋಜನೆ ಚಾಲನೆಗೆ ತೊಡಕು

ಆಗಸ್ಟ್‌ಗೆ ಅನ್ನಭಾಗ್ಯ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅನ್ನ ಭಾಗ್ಯ’ ಯೋಜನೆಯಡಿ ಹತ್ತು ಕೆ.ಜಿಯಂತೆ ಅಕ್ಕಿ ವಿತರಿಸುವ ‘ಗ್ಯಾರಂಟಿ’ ಅನುಷ್ಠಾನಕ್ಕೆ ಅಕ್ಕಿ ಹೊಂದಿಸಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಯೋಜನೆಯನ್ನು ಜುಲೈ ಬದಲಿಗೆ ಆಗಸ್ಟ್‌ನಿಂದ ಚಾಲನೆ ನೀಡುವ ಸಾಧ್ಯತೆ ದಟ್ಟವಾಗಿದೆ.

ಬೇರೆ ರಾಜ್ಯಗಳಿಂದ ಅಕ್ಕಿ ಖರೀದಿಸುವ ಮತ್ತು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿ ಭಾರತ ಆಹಾರ ನಿಗಮದ ಮೂಲಕ ಅಕ್ಕಿ ಪಡೆಯುವ ರಾಜ್ಯ ಸರ್ಕಾರದ ಪ್ರಯತ್ನಗಳಿಗೆ ಯಶಸ್ಸು ಸಿಕ್ಕಿಲ್ಲ. ಕೇಂದ್ರ ಸರ್ಕಾರದ ಅಸಹಕಾರದಿಂದ ಇಕ್ಕಟ್ಟಿಗೆ ಸಿಲುಕಿರುವ ರಾಜ್ಯ ಸರ್ಕಾರ, ಯೋಜನೆ ಅನುಷ್ಠಾನವನ್ನು ತಿಂಗಳ ಮಟ್ಟಿಗೆ ಮುಂದೂಡುವ ತೀರ್ಮಾನಕ್ಕೆ ಬಂದಿದೆ.

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ವ್ಯಾಪ್ತಿಯಲ್ಲಿರುವ ಪಡಿತರ ಚೀಟಿಗಳ ಎಲ್ಲ ಫಲಾನುಭವಿಗಳಿಗೂ ತಲಾ 5 ಕೆ.ಜಿ. ಅಕ್ಕಿಯನ್ನು ಕೇಂದ್ರ ಸರ್ಕಾರ ಉಚಿತವಾಗಿ ಪೂರೈಸುತ್ತಿದೆ. ಈಗ ತಲಾ 5 ಕೆ.ಜಿ.ಯಷ್ಟು ಅಕ್ಕಿಯನ್ನು ಹೆಚ್ಚುವರಿಯಾಗಿ ರಾಜ್ಯ ಸರ್ಕಾರ ಹೊಂದಿಸಬೇಕಿದೆ. ಯಾವ ರಾಜ್ಯ ಸರ್ಕಾರವೂ ಅಕ್ಕಿ ಒದಗಿಸುವ ಭರವಸೆಯನ್ನು ಈವರೆಗೂ ನೀಡಿಲ್ಲ.

ಅನ್ನ ಭಾಗ್ಯ ‘ಗ್ಯಾರಂಟಿ’ ಅನುಷ್ಠಾನಕ್ಕೆ ಜುಲೈ 1ರಂದೇ ಚಾಲನೆ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿತ್ತು. ಭಾರತ ಆಹಾರ ನಿಗಮದ (ಎಫ್‌ಸಿಐ) ಮುಕ್ತ ಮಾರುಕಟ್ಟೆ ವ್ಯಾಪಾರ ಯೋಜನೆ (ಒಎಂಎಸ್‌ಎಸ್) ಅಡಿಯಲ್ಲಿ ಈ ಯೋಜನೆಗೆ ಬೇಕಾಗುವಷ್ಟು ಅಕ್ಕಿಯನ್ನು ಖರೀದಿಸಲು ತೀರ್ಮಾನಿಸಲಾಗಿತ್ತು. ಎಫ್‌ಸಿಐ ಬಳಿ 7 ಲಕ್ಷ ಟನ್ ಅಕ್ಕಿಯ ದಾಸ್ತಾನು ಇರುವುದರಿಂದ ಯೋಜನೆ ಅನುಷ್ಠಾನಕ್ಕೆ ತೊಡಕು ಎದುರಾಗದು ಎಂಬ ವಿಶ್ವಾಸ ರಾಜ್ಯ ಸರ್ಕಾರದಲ್ಲಿತ್ತು.

6ನೇ ಪುಟ ನೋಡಿ

ಅನ್ನ ಭಾಗ್ಯ

10.90 ಲಕ್ಷ — ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿಗಳು

1.17 ಕೋಟಿ — ಆದ್ಯತಾ (ಬಿಪಿಎಲ್) ಕುಟುಂಬ ಪಡಿತರ ಚೀಟಿಗಳು

1.28 ಕೋಟಿ — ಅನ್ನ ಭಾಗ್ಯ ಯೋಜನೆಯಡಿ ಬರುವ ಒಟ್ಟು ಪಡಿತರ ಚೀಟಿಗಳು

4.42 ಕೋಟಿ — ಒಟ್ಟು ಫಲಾನುಭವಿಗಳ ಸಂಖ್ಯೆ

2.17 ಲಕ್ಷ ಟನ್ — ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಕೇಂದ್ರದಿಂದ ಪೂರೈಕೆಯಾಗುವ ಅಕ್ಕಿ

2.29 ಲಕ್ಷ ಟನ್ — ಅನ್ನ ಭಾಗ್ಯ ಯೋಜನೆಗೆ ಹೆಚ್ಚುವರಿಯಾಗಿ ಅಗತ್ಯವಿರುವ ಅಕ್ಕಿ

ಯೋಜನೆ ಅನುಷ್ಠಾನ ಸ್ವಲ್ಪ ವಿಳಂಬ: ಸಿದ್ದರಾಮಯ್ಯ

ನವದೆಹಲಿ: ‘ಅನ್ನ ಭಾಗ್ಯ ಯೋಜನೆಯಡಿ ಬಿಪಿಎಲ್ ಕುಟುಂಬದ ಪ್ರತಿ ವ್ಯಕ್ತಿಗೆ 10 ಕೆ.ಜಿ. ಅಕ್ಕಿ ನೀಡುವುದು ಸ್ವಲ್ಪ ವಿಳಂಬವಾಗಬಹುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚರಿಸಿದ್ದಾರೆ.

ನವದೆಹಲಿಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಬುಧವಾರ ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದರು. ‘ಕರ್ನಾಟಕದಲ್ಲಿ ನಮಗೆ ಬೇಕಾದಷ್ಟು ಅಕ್ಕಿ ಸಿಗುವುದಿಲ್ಲ. ನಾವು ಮುಕ್ತ ಮಾರುಕಟ್ಟೆಗೆ ಹೋಗಬೇಕಾಗುತ್ತದೆ. ಅದಕ್ಕೆ ಟೆಂಡರ್ ಕರೆಯಬೇಕು. ಅದಕ್ಕೆಲ್ಲ ಕನಿಷ್ಠ ಎರಡು ತಿಂಗಳು ಬೇಕಾಗುತ್ತದೆ’ ಎಂದರು.

‘ಭಾರತ ಸರ್ಕಾರದ ಅಧೀನದ ನ್ಯಾಷನಲ್ ಕೋ-ಆಪರೇಟಿವ್ ಕನ್ಸೂಮರ್ಸ್ ಫೆಡರೇಷನ್, ನ್ಯಾಷನಲ್ ಅಗ್ರಿಕಲ್ಚರಲ್ ಕೋ-ಆಪರೇಟಿವ್ ಮಾರ್ಕೆಟಿಂಗ್ ಫೆಡರೇಷನ್ (ನಾಫೆಡ್) ಹಾಗೂ ಕೇಂದ್ರೀಯ ಭಂಡಾರದಿಂದ ಅಕ್ಕಿ ಪಡೆಯಲು ದರಪಟ್ಟಿ ಕೇಳಲಾಗಿದೆ. ಗುರುವಾರ ದರ ಪಟ್ಟಿ ಸಿಗಲಿದೆ. ಆಗ ಸ್ಪಷ್ಟತೆ ಸಿಗಲಿದೆ’ ಎಂದರು. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದ ಸಿದ್ದರಾಮಯ್ಯ, ಅವರ ಜತೆಯೂ ಅಕ್ಕಿ ವಿಚಾರವನ್ನು ಪ್ರಸ್ತಾಪಿಸಿದರು.

ಘೋಷಿಸುವಾಗ ಮೆದುಳು ಇರಲಿಲ್ಲವೇ: ಶೋಭಾ ಪ್ರಶ್ನೆ

ಚಿಕ್ಕಮಗಳೂರು: ‘ಗ್ಯಾರಂಟಿಗಳ ಭರವಸೆ ನೀಡುವಾಗ ನಿಮ್ಮ ತಲೆಯಲ್ಲಿ ಮೆದುಳು ಇರಲಿಲ್ಲವೇ, ಸಗಣಿ ತುಂಬಿತ್ತೇ’ ಎಂದು ಕಾಂಗ್ರೆಸ್ ನಾಯಕರನ್ನು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಪ್ರಶ್ನಿಸಿದರು.

‘ಕೇಂದ್ರ ಸರ್ಕಾರ ಅಕ್ಕಿ ದಾಸ್ತಾನಿಟ್ಟುಕೊಂಡಿರುವುದು ತುರ್ತು ಸಂದರ್ಭಕ್ಕಾಗಿಯೇ ಹೊರತು ಕರ್ನಾಟಕಕ್ಕೆ ನೀಡಲು ಅಲ್ಲ. ಪ್ರವಾಹ, ಸಾಂಕ್ರಾಮಿಕ ರೋಗಗಳಂಥ ಆಪತ್ತಿನ ಸಂದರ್ಭ ನಿಭಾಯಿಲು ಅಕ್ಕಿ ದಾಸ್ತಾನಿಟ್ಟುಕೊಳ್ಳಲಾಗಿದೆ. ಬೇರೆ ರಾಜ್ಯ ಅಥವಾ ರಾಜ್ಯದ ರೈತರು ಬೇರೆ ರಾಜ್ಯಕ್ಕೆ ಮಾರಾಟ ಮಾಡುತ್ತಿರುವ ಅಕ್ಕಿ ಖರೀದಿಸಿ ಪಡಿತರದಾರರಿಗೆ ವಿತರಿಸಲಿ. ಒಂದೇ ತಿಂಗಳಲ್ಲಿ ರಾಜ್ಯದಲ್ಲಿ ಅರಾಜಕತೆ ಉಂಟಾಗಿದೆ. ಸಿದ್ದರಾಮಯ್ಯ ಅವರು ಬೇಜವಾಬ್ದಾರಿಯಿಂದ ಪ್ರಧಾನಿ ಕಡೆಗೆ ಬೊಟ್ಟು ಮಾಡುತ್ತಿದ್ದಾರೆ’ ಎಂದು ಟೀಕಿಸಿದರು.

‘ಹಾಲು: ₹5 ಏರಿಕೆಗೆ ಪ್ರಸ್ತಾವ’

ಬಜೆಟ್ ಅಧಿವೇಶನದ ಬಳಿಕ ನಿರ್ಧಾರ: ಸಚಿವ ರಾಜಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಂದಿನಿ ಹಾಲಿನ ಮಾರಾಟ ದರವನ್ನು ಪ್ರತಿ ಲೀಟರ್‌ಗೆ ₹5 ಹೆಚ್ಚಿಸಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ಉದ್ದೇಶಿಸಲಾಗಿದೆ’ ಎಂದು ಕೆಎಂಎಫ್ ನೂತನ ಅಧ್ಯಕ್ಷ ಭೀಮಾ ನಾಯ್ಕ ಬುಧವಾರ ತಿಳಿಸಿದರು.

ಕೆಎಂಎಫ್ ಕಚೇರಿಯಲ್ಲಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ರಾಜ್ಯದ ಎಲ್ಲ ಹಾಲು ಒಕ್ಕೂಟಗಳು ಹಾಲಿನ ದರವನ್ನು ಹೆಚ್ಚಿಸುವಂತೆ ಬಹುದಿನಗಳಿಂದ ಒತ್ತಾಯಿಸುತ್ತಿವೆ. ಈ ಸಂಬಂಧ ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು’ ಎಂದರು.

‘ರಾಸುಗಳಿಗೆ ಚರ್ಮಗಂಟು ರೋಗ ಬಂದ ನಂತರ ರಾಜ್ಯದಲ್ಲಿ ಹಾಲಿನ ಉತ್ಪಾದನೆ ಕುಸಿದಿತ್ತು. ಈಗ ಪರಿಸ್ಥಿತಿ ಸುಧಾರಿಸಿದ್ದು, ಹಾಲಿನ ಉತ್ಪಾದನೆ ಹೆಚ್ಚುತ್ತಿದೆ. ಎಸ್‌ಎನ್‌ಎಫ್ ಮಾನದಂಡಕ್ಕೆ ಅನುಗುಣವಾಗಿ ಇಲ್ಲದ ಹಾಲನ್ನು ಖಾಸಗಿ ಡೇರಿಯವರು ಖರೀದಿಸುತ್ತಿದ್ದಾರೆ. ರೈತರಿಗೆ ಮುಂದಿನ ದಿನಗಳಲ್ಲಿ ಖಾಸಗಿಯವರಿಗಿಂತ ಹೆಚ್ಚಿನ ದರ ಕೊಡುತ್ತೇವೆ’ ಎಂದು ತಿಳಿಸಿದರು.

ದರ ಹೆಚ್ಚಳ ಅನಿವಾರ್ಯ: ವೆಂಕಟೇಶ್

‘ಹಾಲು ಒಕ್ಕೂಟಗಳು ಕಷ್ಟದಲ್ಲಿವೆ ಮತ್ತು ನಷ್ಟದಲ್ಲಿವೆ. ಹೀಗಾಗಿ, ದರ ಹೆಚ್ಚಿಸುವುದು ಅನಿವಾರ್ಯ’ ಎಂದು ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ತಿಳಿಸಿದರು. ‘ಲಾಭ ಮಾಡುವ ಉದ್ದೇಶ ಕೆಎಂಎಫ್‌ಗೆ ಇಲ್ಲ. ಆದರೆ, ನಷ್ಟವೂ ಆಗಬಾರದು. ಸಂಸ್ಥೆ ಉಳಿಸುವ ಉದ್ದೇಶದಿಂದ ದರ ಹೆಚ್ಚಳವಾಗಬೇಕಾಗಿದೆ. ₹5 ರೂಪಾಯಿ ಹೆಚ್ಚಿಸಬೇಕು ಎನ್ನುವುದು ಒಕ್ಕೂಟಗಳ ಬೇಡಿಕೆಯಾಗಿದೆ. ಹೀಗಾಗಿ, ಗ್ರಾಹಕರು ಮತ್ತು ರೈತರ ಹಿತಾಸಕ್ತಿ ಗಮನದಲ್ಲಿರಿಸಿಕೊಂಡು ನಿರ್ಧಾರ ಕೈಗೊಳ್ಳಲಾಗುವುದು’ ಎಂದರು.

ಸಹಕಾರ ಸಚಿವ ಕೆ.ಎನ್. ರಾಜಣ್ಣ, ‘ಬಜೆಟ್ ಅಧಿವೇಶನದ ಬಳಿಕ ಹಾಲಿನ ದರ ಹೆಚ್ಚಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು. ಹಾಲಿನ ಮಾರಾಟ ದರದ ಜತೆಗೆ ಖರೀದಿ ದರವನ್ನೂ ಹೆಚ್ಚಿಸುವ ಅನಿವಾರ್ಯವೂ ಇದೆ. ದರ ಹೆಚ್ಚಳದ ಶೇ 90ರಷ್ಟು ಲಾಭಾಂಶವನ್ನು ರೈತರಿಗೆ ವರ್ಗಾಯಿಸಲಾಗುವುದು’ ಎಂದು ಭರವಸೆ ನೀಡಿದರು.

‘ನೀರಿಗೆ ಹಣ ನೀಡುತ್ತಿರುವಾಗ ಹಾಲಿಗೆ ಏಕೆ ಹಣ ನೀಡಬಾರದು. ಹಾಲು ಉತ್ಪಾದಕರ ಹಿತಾಸಕ್ತಿ ಕಾಪಾಡಲು ಬದ್ಧರಾಗಿದ್ದೇವೆ’ ಎಂದರು.

‘ರಾಜ್ಯದಲ್ಲಿ ದಿನಕ್ಕೆ ಸದ್ಯ ಸುಮಾರು 87 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಹಾಲಿನ ಖರೀದಿ ದರ ಲೀಟರ್‌ಗೆ ಸರಾಸರಿ ₹33 ಇದೆ. ಖಾಸಗಿ ಬ್ರ್ಯಾಂಡ್‌ಗಳ ಹಾಲು ಮತ್ತು ಉತ್ಪನ್ನಗಳ ಬೆಲೆಗೆ ಹೋಲಿಸಿದರೆ ನಂದಿನಿ ಹಾಲು ಹಾಗೂ ಉತ್ಪನ್ನಗಳ ಮಾರಾಟ ದರ ತುಂಬಾ ಕಡಿಮೆ ಇದೆ. ಜತೆಗೆ, ಪಶು ಆಹಾರ ದರವು ಹೆಚ್ಚಿದೆ. ಹೀಗಾಗಿ, ಹಾಲಿನ ದರ ಹೆಚ್ಚಿಸುವಂತೆ ಎಲ್ಲ ಹಾಲು ಒಕ್ಕೂಟಗಳು ಕಳೆದೊಂದು ವರ್ಷದಿಂದ ಒತ್ತಾಯ ಮಾಡುತ್ತಿವೆ’ ಎಂದು ಹೇಳಿದರು.

‘ಅಮುಲ್ ಜತೆ ಕೆಎಂಎಫ್ ವಿಲೀನ ಮಾಡುವಂತೆ ಹೇಳುವುದು ಹುಚ್ಚರ ಮಾತು. ಜನರಿಗೆ ಯಾವ ಹಾಲು ಇಷ್ಟವಾಗುತ್ತದೆಯೋ ಅದನ್ನು ಖರೀದಿಸುತ್ತಾರೆ’ ಎಂದರು.

‘ಸಮಸ್ಯೆ ಬಗೆಹರಿದಿದೆ, ಇನ್ನು ಬಿಲ್‌ನಲ್ಲಿ ವ್ಯತ್ಯಾಸವಿರದು’

ದರ ಹೆಚ್ಚಳದಿಂದ ಬಿಲ್ ವಿಳಂಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ದರ ಹೆಚ್ಚಳ, ಗೃಹ ಜ್ಯೋತಿ ಯೋಜನೆ ಅನುಷ್ಠಾನ ಪ್ರಕ್ರಿಯೆಯಿಂದ ಮೀಟರ್ ರೀಡಿಂಗ್ ಐದು ದಿನ ತಡವಾಗಿದೆ. ಸ್ಲ್ಯಾಬ್‌ಗಳ ಬದಲಾವಣೆ, ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ (ಎಫ್‌ಪಿಪಿಸಿಎ) ಶುಲ್ಕ ಹೆಚ್ಚಳದಿಂದ ಜೂನ್ ತಿಂಗಳ ಬಿಲ್‌ನಲ್ಲಿ ವ್ಯತ್ಯಾಸವಾಗಿದೆ ಎಂದು ಬೆಸ್ಕಾಂ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

‘ಬುಧವಾರ ಸಂಜೆಯೊಳಗೆ ಎಲ್ಲ ತಾಂತ್ರಿಕ ಸಮಸ್ಯೆ ಬಗೆಹರಿದಿದೆ. ಇನ್ನು ಮುಂದೆ ಮುದ್ರಣ ಮತ್ತು ಆನ್‌ಲೈನ್ ಬಿಲ್‌ನಲ್ಲಿ ವ್ಯತ್ಯಾಸ ಕಾಣಿಸುವುದಿಲ್ಲ. ತಾಂತ್ರಿಕ ಸಮಸ್ಯೆಯನ್ನು ಸರಿಪಡಿಸಲಾಗಿದ್ದು, ಎರಡೂ ಒಂದೇ ರೀತಿಯಲ್ಲಿರುತ್ತವೆ’ ಎಂದು ತಿಳಿಸಿದ್ದಾರೆ.

ಸಾಮಾನ್ಯವಾಗಿ ಸಿಬ್ಬಂದಿ ಪ್ರತಿ ತಿಂಗಳು 1ರಿಂದ 15ರವರೆಗೆ ಮೀಟರ್ ರೀಡಿಂಗ್ ಮಾಡುತ್ತಾರೆ. ಆದರೆ, ಗೃಹ ಜ್ಯೋತಿ ಯೋಜನೆ ಕುರಿತು ಈ ತಿಂಗಳ 5ರಂದು ಸರ್ಕಾರ ಆದೇಶ ಹೊರಡಿಸಿದ ಬಳಿಕ 6ನೇ ತಾರೀಕಿನಿಂದ ಮೀಟರ್ ರೀಡಿಂಗ್ ಕೈಗೊಳ್ಳಲಾಯಿತು. ಹೀಗಾಗಿ, ವಿಳಂಬವಾಯಿತು. ಜತೆಗೆ, ಐದು ದಿನಗಳ ಮೀಟರ್ ರೀಡಿಂಗ್ ಸಹ ಪಡೆದುಕೊಂಡಿದ್ದರಿಂದ ಬಿಲ್ ಮೊತ್ತದಲ್ಲಿ ಹೆಚ್ಚಳವಾಯಿತು. ಮುಂದಿನ ತಿಂಗಳ ಬಿಲ್‌ನಲ್ಲಿ ಐದು ದಿನಗಳ ಇಂಧನ ಬಳಕೆ ಶುಲ್ಕ ಕಡಿಮೆಯಾಗಲಿದೆ ಎಂದು ವಿವರಿಸಿದ್ದಾರೆ.

6ನೇ ಪುಟ ನೋಡಿ

INSIGHTSIAS
SIMPLIFYING IAS EXAM PREPARATION

2022ನೇ ಸಾಲಿನ
ಯುಪಿಎಸ್‌ಸಿ ಸಿಎಸ್‌ಇ ಪರೀಕ್ಷೆಯಲ್ಲಿ
ನಾವು ಅಸಾಧಾರಣ ಫಲಿತಾಂಶಗಳನ್ನು ನೀಡಿದ್ದೇವೆ.
ಇನ್‌ಸೈಟ್ಸ್ ಐಎಎಸ್ 220+ ವಿದ್ಯಾರ್ಥಿಗಳು
ಉನ್ನತ ರ್‍ಯಾಂಕ್‌ಗಳೊಂದಿಗೆ ಅರ್ಹತೆ ಪಡೆದಿದ್ದಾರೆ.
ಇನ್‌ಸೈಟ್ಸ್ ಐಎಎಸ್ ಸಂಸ್ಥಾಪಕರು ಹಾಗೂ ನಿರ್ದೇಶಕರಾದ ವಿನಯ್ ಕುಮಾರ್ ಜಿ.ಬಿ. ಅವರ ಸಾರಥ್ಯದಲ್ಲಿ

We take immense pride in sharing that out of
31 Toppers in Karnataka,
23 of them are students of InsightsIAS!

ಅಭಿನಂದನಾ ಸಮಾರಂಭದಲ್ಲಿ ವಿದ್ಯಾರ್ಥಿಗಳೊಂದಿಗೆ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು, ಸಿರಿಗೆರೆ ಬೃಹನ್ಮಠದ ಶ್ರೀಶ್ರೀಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಗಳು ಹಾಗೂ ಇನ್‌ಸೈಟ್ಸ್ ಐಎಎಸ್ ಸಂಸ್ಥಾಪಕರು ಹಾಗೂ ನಿರ್ದೇಶಕರಾದ ವಿನಯ್ ಕುಮಾರ್ ಜಿ.ಬಿ.

ಪ್ರವೇಶಾತಿಗಳು ಪ್ರಾರಂಭ
Integrated Foundation Program for Freshers:
OGP (Offline & Online Guidance Programs)
Batch 6 - Starts from 3rd July, 2023

Fee Structure
Online Classes — Rs. 1,12,000/- incl. taxes
Offline Classes — Rs. 1,25,000/- incl. taxes
Early Bird Offer — 10% discount till 22nd June, 2023

Subscribe Here
Scan for Timetable

INSIGHTS IAS - BENGALURU
Nanda Ashirwad, 3rd Floor, Village Hyper Market Complex, Chandra Layout Main Rd, 2nd Block, Dwaraka Nagar, Maruthi Nagar, Attiguppe, Bengaluru, Karnataka - 40.
TOLL FREE 080-69405205
support@insightsias.com Branches: Bengaluru | Delhi | Lucknow | Srinagar | Dharwad | Mysuru www.insightsonindia.com

bajajallianzlife.com
BAJAJ Allianz
LIFE GOALS. DONE.

ವಿಶೇಷವಾಗಿ ಡಯಾಬಿಟಿಕ್ಸ್‌ಗಾಗಿ[1] ಇರುವ ಇಂಡಿಯಾದ ಏಕೈಕ ಟರ್ಮ್ ಪ್ಲಾನ್

ಬಜಾಜ್ ಆಲಿಯಾನ್ಸ್ ಲೈಫ್ ಡಯಾಬಿಟಿಕ್ ಟರ್ಮ್ ಪ್ಲಾನ್ Sub 8 HbA1c
ಒಂದು ನಾನ್-ಲಿಂಕ್ಡ್, ನಾನ್-ಪಾರ್ಟಿಸಿಪೇಟಿಂಗ್, ಇಂಡಿವಿಜುವಲ್, ಪ್ಯೂರ್ ರಿಸ್ಕ್ ಪ್ರೀಮಿಯಮ್ ಲೈಫ್ ಇನ್ಶೂರನ್ಸ್ ಪ್ಲಾನ್ ಆಗಿದೆ

ಒಂದು ಆರೋಗ್ಯಕರ ಶೈಲಿಯನ್ನು ನಿಮ್ಮದಾಗಿಸಿದಾದ ನವೀಕರಣ ಪ್ರೀಮಿಯಮ್‌ನಲ್ಲಿ[3] ಕಡಿತ
80C[2] ಅಡಿಯಲ್ಲಿ ₹46,800ವರೆಗಿನ ತೆರಿಗೆ ಉಳಿತಾಯ
99.04% ಕ್ಲೇಮ್ ಸೆಟಲ್‌ಮೆಂಟ್ ರೇಶಿಯೊ
ಖರೀದಿಸಲು ಸ್ಕ್ಯಾನ್ ಮಾಡಿ

ಕರೆ ಮಾಡಿ: 1800 209 4040 | ನಿಮ್ಮ ವಿಮಾ ಸಲಹೆಗಾರರನ್ನು ಸಂಪರ್ಕಿಸಿ
ಇಲ್ಲಿಯೂ ಲಭ್ಯ policybazaar.com HAR FAMILY HOGI INSURED

ಬಜಾಜ್ ಆಲಿಯಾನ್ಸ್ ಲೈಫ್ ಇನ್ಶೂರನ್ಸ್ ಕಂ. ಲಿ.

BJAZ-O-PB-0021/08-Jun-23

ಸಿಸಿಎಸ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಗ್ರಿಕಲ್ಚರಲ್ ಮಾರ್ಕೆಟಿಂಗ್
(ಭಾರತ ಸರ್ಕಾರದ ಕೃಷಿ ಮತ್ತು ಕೃಷಿಕರ ಕ್ಷೇಮಾಭಿವೃದ್ಧಿ ಸಚಿವಾಲಯ ಅಡಿಯಲ್ಲಿನ ಒಂದು ಸ್ವಾಯತ್ತ ಸಂಸ್ಥೆ)
ಬಂಬಾಲ, ಟ್ಯಾಂಕ್ ರೋಡ್, ಜೈಪುರ–302033, ರಾಜಸ್ಥಾನ

ಆರ್‌ಕೆವಿವೈ – ರಫ್ತಾರ್ ಅಡಿಯಲ್ಲಿ ಸಿಸಿಎಸ್ ಎನ್‌ಐಎಎಂ ಅಗ್ರಿ ಇನ್ನೋವೇಶನ್ & ಇಂಕ್ಯುಬೇಶನ್ ಸೆಂಟರ್ ಪ್ರಾರಂಭಿಸುವ ಕೊಹರ್ಟ್–9

ಈ ಕೆಳಗಿನವುಗಳಿಗೆ ಅರ್ಜಿ ಆಹ್ವಾನಿಸಲಾಗಿದೆ

ಸ್ಟಾರ್ಟಪ್ ಅಗ್ರಿ–ಬಿಜಿನೆಸ್ ಇಂಕ್ಯುಬೇಶನ್ ಪ್ರೋಗ್ರಾಮ್: (ಎಂವಿಪಿ' ಗೆ ಪ್ರೊಟೊಟೈಪ್)
1. ಎರಡು ತಿಂಗಳು ಆನ್‌ಲೈನ್/ರೆಸಿಡೆನ್ಶಿಯಲ್ ತರಬೇತಿ
2. ರೂ. 25 ಲಕ್ಷವರೆಗೆ ಗ್ರ್ಯಾಂಟ್–ಇನ್–ಏಡ್

ಅಗ್ರಿಪ್ರಿನ್ಯೂರ್‌ಶಿಪ್ ಓರಿಯಂಟೇಶನ್ ಪ್ರೋಗ್ರಾಮ್: (ಪ್ರೊಟೊಟೈಪ್‌ಗೆ ಐಡಿಯಾ)
1. ಎರಡು ತಿಂಗಳು ಆನ್‌ಲೈನ್/ರೆಸಿಡೆನ್ಶಿಯಲ್ ತರಬೇತಿ
2. ರೂ. 5 ಲಕ್ಷವರೆಗೆ ಗ್ರ್ಯಾಂಟ್–ಇನ್–ಏಡ್

ಹೆಚ್ಚಿನ ವಿವರಗಳಿಗಾಗಿ ಭೇಟಿ ಕೊಡಿ: www.niam-nabi.com
ಇ–ಮೇಲ್: nabi@ccsniam.ac.in
ಮೊಬೈಲ್: +91 9167963551, +91 8275218220

CBC 01375/12/0001/2324

ಆರೋಪಿ ಬಂಧನ: ₹ 7 ಲಕ್ಷದ ವಾಹನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾಸಿಪಾಳ್ಯ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ವಾಹನ ಕಳವು ಪ್ರಕರಣದ ಆರೋಪಿಯನ್ನು ಬಂಧಿಸಿರುವ ಪೊಲೀಸರು, ₹7 ಲಕ್ಷ ಮೌಲ್ಯದ ವಾಹನಗಳನ್ನು ಜಪ್ತಿ ಪಡಿಸಿ-ಕೊಂಡಿದ್ದಾರೆ.

ಈತನಿಂದ ಆಟೊ ರಿಕ್ಷಾ ಹಾಗೂ 9 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಇದೇ ಆರೋಪಿ ವಿರುದ್ಧ ಕಲಾಸಿಪಾಳ್ಯ ಪೊಲೀಸ್ ಠಾಣೆಯಲ್ಲಿ ಎರಡು, ಮಹದೇವಪುರ, ತಿಲಕನಗರ, ನೆಲಮಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದವು. ರಸ್ತೆಯ ಬದಿಯಲ್ಲಿ ನಿಲುಗಡೆ ಮಾಡಿದ್ದ ಬೈಕ್ ಹಾಗೂ ಆಟೊಗಳನ್ನು ನಕಲಿ ಕೀ ಬಳಸಿ ಕಳವು ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಸರೋಜಿನಿ ಮಹಿಷಿ ವರದಿ ಜಾರಿಗೊಳಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಮತ್ತು ಸರ್ಕಾರಿ ರಂಗಗಳಲ್ಲಿ ಕನ್ನಡಿಗರ ಔದ್ಯೋಗಿಕ ನೆಲೆಗಟ್ಟನ್ನು ಗಟ್ಟಿಗೊಳಿಸಲು ಡಾ.ಸರೋಜಿನಿ ಮಹಿಷಿ ವರದಿಗೆ ಕಾನೂನು ಬಲ ನೀಡಬೇಕು ಎಂದು ಕನ್ನಡ ಅನುಷ್ಠಾನ ಮಂಡಳಿ ಆಗ್ರಹಿಸಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿ-ಯಲ್ಲಿ ಮಾತನಾಡಿದ ಮಂಡಳಿಯ ಅಧ್ಯಕ್ಷ ಆರ್.ಎ. ಪ್ರಸಾದ್, 'ಸಾಹಿತ್ಯ ಸಮ್ಮೇಳನ ಸಾಂಸ್ಕೃತಿಕ ಮೇಳಗಳಿಂದ ಕನ್ನಡ ಕನ್ನಡಿಗನ ಬದುಕು ಪೂರ್ಣ-ವಾಗುವುದಿಲ್ಲ. ಕನ್ನಡದ ಕ್ರಿಯಾತ್ಮಕ ಕಾರ್ಯ ಕನ್ನಡಿಗರ ಉದ್ಯೋಗದ ಹಕ್ಕಿನ ಕಾನೂನು ಜಾರಿಗೊಳಿಸಿದರೆ ಮಾತ್ರ ಕನ್ನಡಿಗರ ಅಭಿವೃದ್ಧಿ ಸಾಧ್ಯ. ಕೇವಲ ಜಾತ್ರೆ, ಜಯಂತಿ ಮತ್ತು ಉತ್ಸವಗಳ ಇಲಾಖೆಯಾಗಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಪ್ರತ್ಯೇಕಿಸಿ ಕನ್ನಡ ನಿರ್ದೇಶನಾಲಯ ಸ್ಥಾಪಿಸಲು ಬಜೆಟ್‌ನಲ್ಲಿ ₹100 ಕೋಟಿ ಮೀಸಲಿಡಬೇಕು' ಎಂದು ಒತ್ತಾಯಿಸಿದರು.

ಸಮಗ್ರ ಕನ್ನಡ ಅಭಿವೃದ್ಧಿ ಹಾಗೂ ಕನ್ನಡ ಅನುಷ್ಠಾನ ವಿಫಲಗೊಳಿಸುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು. ಕನ್ನಡ ಮತ್ತು ಕನ್ನಡಿಗರ ಸಮಗ್ರ ಅಭಿವೃದ್ಧಿಗೆ 2023ರ ಬಜೆಟ್‌ನಲ್ಲಿ ಪ್ರತ್ಯೇಕವಾಗಿ ₹100 ಕೋಟಿ ಮೀಸಲಿಡಬೇಕು ಎಂದು ಮನವಿ ಮಾಡಿದರು.

ಜಾಗೃತಿ ಟ್ರಸ್ಟ್‌ನ ಮುಖ್ಯಸ್ಥ ನಾಗೇಶ್, ಕರ್ನಾಟಕ ಆರ್ಯವೈಶ್ಯ ಮಹಾಮಂಡಳಿಯ ಕಾರ್ಯದರ್ಶಿ ಭಾರತಿ ಪ್ರಕಾಶ್ ಇದ್ದರು.

ನೀರಾನೆ ಮರಿ ಸಾವು

ಆನೇಕಲ್: ತಾಲ್ಲೂಕಿನ ಬನ್ನೇರುಘಟ್ಟ ಜೈವಿಕ ಉದ್ಯಾನದ ನೀರಾನೆ (ಹಿಪ್ಪೊಪೊಟಮಸ್) ದಶ್ಯಾಳಿಗೆ ಜನಿಸಿದ ಮರಿ ಉಳಿದ ನೀರಾನೆಗಳ ಕಾಲ್ತುಳಿತಕ್ಕೆ ಸಿಲುಕಿ ಮೃತಪಟ್ಟಿದೆ.

'ದಶ್ಯಾ ಬುಧವಾರ ಬೆಳಗಿನ ಜಾವ ಮರಿಗೆ ಜನ್ಮ ನೀಡಿದೆ. ಉಳಿದ ನೀರಾನೆಗಳ ಕಾಲ್ತುಳಿತಕ್ಕೆ ಸಿಲುಕಿ ಮರಿ ಮೃತಪಟ್ಟಿರುವ ಸಾಧ್ಯತೆ ಇದೆ' ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸುನೀಲ್ ಪನ್ವಾರ್ ತಿಳಿಸಿದರು.

ಇದುವರೆಗೆ ದಶ್ಯಾ ಆರು ಮರಿಗಳಿಗೆ ಜನ್ಮ ನೀಡಿದ್ದು, ನಾಲ್ಕು ಮರಿ ಮೃತಪಟ್ಟಿವೆ. ನಾಲ್ಕು ವರ್ಷದ ಅಲೋಕ ಮತ್ತು ಎರಡು ವರ್ಷದ ಸನ್ನಿ ತಾಯಿ ಜೊತೆ ಉದ್ಯಾನದ ಆಕರ್ಷಣೆಯಾಗಿವೆ.

'ಮೊಟ್ಟೆ ಸಂಖ್ಯೆ ಕಡಿತ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಮಕ್ಕಳಿಗೆ ಬಿಸಿಯೂಟ ಯೋಜನೆಯಡಿ ನೀಡುವ ಮೊಟ್ಟೆಗಳ ಸಂಖ್ಯೆಯನ್ನು ಕಡಿತಗೊಳಿಸುವ ಸರ್ಕಾರದ ನಿರ್ಧಾರವನ್ನು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್ (ಎಐಡಿಎಸ್ಒ)ಖಂಡಿಸಿದೆ.

'ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಣದ ಕೊರತೆಯ ಕಾರಣ ನೀಡಿ ಮಕ್ಕಳಿಗೆ ನೀಡುವ ಮೊಟ್ಟೆಗಳ ಸಂಖ್ಯೆಯನ್ನು ಎರಡರಿಂದ ಒಂದಕ್ಕೆ ಇಳಿಸುವ ಸುತ್ತೋಲೆಯನ್ನು ಕೂಡಲೇ ಹಿಂಪಡೆಯಬೇಕು. ವಿದ್ಯಾರ್ಥಿಗಳಲ್ಲಿ ಕಂಡುಬರುವ ಅಪೌಷ್ಟಿಕತೆ ನಿವಾರಣೆಗೆ ಮೊಟ್ಟೆಗಳನ್ನು ನೀಡಲಾಗುತ್ತಿತ್ತು. ಈಗ ಮೊಟ್ಟೆಗಳ ಸಂಖ್ಯೆ ಕಡಿತಗೊಳಿಸಿದರೆ ಮಕ್ಕಳ ಬೆಳವಣಿಗೆ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ' ಎಂದು ಎಐಡಿಎಸ್ಒ ಕಾರ್ಯದರ್ಶಿ ಅಜಯ್ ಕಾಮತ್ ಆತಂಕ ವ್ಯಕ್ತಪಡಿಸಿದ್ದಾರೆ.

'ರಾಜ್ಯ ಸರ್ಕಾರವು ಸುತ್ತೋಲೆಯನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಮತ್ತು ಶಿಕ್ಷಣ ತಜ್ಞರ ಶಿಫಾರಸಿನಂತೆ ಎರಡು ಮೊಟ್ಟೆಗಳನ್ನು ನೀಡಬೇಕು. ಕ್ಷೀರ ಭಾಗ್ಯ ಯೋಜನೆಯಡಿ ಶಾಲಾ ಮಕ್ಕಳಿಗೆ ನೀಡುವ ಹಾಲಿಗೂ ಕೊರತೆಯನ್ನು ಕಾಲಮಿತಿಯೊಳಗೆ ನಿವಾರಿಸಿ-ಕೊಳ್ಳಬೇಕು' ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಶಿಕ್ಷಕಿಯರಿಗೆ ಲೈಂಗಿಕ ಕಿರುಕುಳ: ದೂರು ಪರಿಶೀಲನೆಗೆ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿ-ಸುತ್ತಿರುವ ಮಹಿಳಾ ಅಧಿಕಾರಿ, ಸಿಬ್ಬಂದಿ, ಶಿಕ್ಷಕಿಯರ ಮೇಲಿನ ಲೈಂಗಿಕ ಕಿರುಕುಳ ದೂರುಗಳನ್ನು ಪರಿಶೀಲಿಸಲು ಇಲಾಖೆಯ ಜಂಟಿ ನಿರ್ದೇಶಕಿ ಡಾ.ಎಸ್.ರೂಪಶ್ರೀ ಅಧ್ಯಕ್ಷತೆಯಲ್ಲಿ 'ಆಂತರಿಕ ದೂರು ಸಮಿತಿ' ರಚಿಸಲಾಗಿದೆ.

ಹಿರಿಯ ಸಹಾಯಕ ನಿರ್ದೇಶಕರಾದ ಅಲ್ಮಾಸ್ ಪರ್ವಿನ್ ತಾಜ್, ಪ್ರಭಾ ಅಲೆಕ್ಸಾಂಡರ್, ಶೈಲಾ, ಸಹಾಯಕ ನಿರ್ದೇಶಕರಾದ ಶಾಂತಲಾ, ಆಯುಕ್ತರ ಕಚೇರಿ ಅಧೀಕ್ಷಕರಾದ ವೆಂಕಟರತ್ನಾ ಸದಸ್ಯರಾಗಿ ನೇಮಕವಾಗಿದ್ದಾರೆ.

ಶಿಕ್ಷಕಿಯರೂ ಸೇರಿದಂತೆ ಇಲಾಖೆಯ ಮಹಿಳಾ ಸಹೋದ್ಯೋಗಿಗಳಿಗೆ ನೀಡುವ ಕಿರುಕುಳ, ಅಸಭ್ಯ ವರ್ತನೆ, ಮಾನಸಿಕ ಹಿಂಸೆ, ಲೈಂಗಿಂಕ ದೌರ್ಜನ್ಯದ ದೂರುಗಳನ್ನು ಸಮಿತಿ ಪರಿಶೀಲಿಸಿ, ಕಾಲಮಿತಿಯ ಒಳಗೆ ಪರಿಹರಿಸಲಿದೆ ಎಂದು ಆಯುಕ್ತ ಆರ್.ವಿಶಾಲ್ ಮಾಹಿತಿ ನೀಡಿದರು.,

ಸುಧಾ ಓದಿರಿ

ನೈಋತ್ಯ ರೈಲ್ವೆ G20

ಟೆಂಡರ್ ಸೂಚನೆ ಸಂ. Repl_Overaged_PS_Stn_LC Dated: 15.06.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದ ಮೇಲೆ ನಿಲ್ದಾಣ ಮತ್ತು ಎಲ್‌ಸಿ ಗೇಟ್‌ನಲ್ಲಿ ಮಿತಿಮೀರಿದ ವಿದ್ಯುತ್ ಸರಬರಾಜು ವ್ಯವಸ್ಥೆಗಳನ್ನು ಬದಲಾಯಿಸುವುದು.	ರೂ. 41,84,162.88/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10–07–2023, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಾಂ ಇಂಜಿನಿಯರ್ ಬೆಂಗಳೂರು
PUB/188/AAV/PRB/SWR/2023-24
S.W.Railways SWRRLY SWRRLY

ನೈಋತ್ಯ ರೈಲ್ವೆ G20

ಟೆಂಡರ್ ಸೂಚನೆ ಸಂ. E-GSU-ELE-2023-24-OT-9 ದಿನಾಂಕ: 15.06.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಕೃಷ್ಣರಾಜಪುರಂ ಶೆಡ್‌ಗಾಗಿ ವಿದ್ಯುತ್ ವ್ಯವಸ್ಥೆಗಳು–80 ಹೆಚ್ಚುವರಿ ಎಲೆಕ್ಟ್ರಿಕಲ್ ಲೋಕೋಮೋಟಿವ್‌ಗಳನ್ನು ಇರಿಸಲು ಮೂಲಸೌಕರ್ಯಗಳ ರಚನೆ ಮತ್ತು ಟೆಸ್ಟ್ ಸೆಟ್ ಅಪ್.	ರೂ. 1,30,06,448.85

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07–07–2023, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ವಿದ್ಯುತ್ ಇಂಜಿನಿಯರ್ / ಜಿಎಸ್‌ಯು ಬೆಂಗಳೂರು
PUB/182/AAV/PRB/SWR/2023-24
S.W.Railways SWRRLY SWRRLY

ನೈಋತ್ಯ ರೈಲ್ವೆ G20

ಟೆಂಡರ್ ಸೂಚನೆ ಸಂ. CN/03/2023 ದಿನಾಂಕ: 15.06.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ವಸ್ತುಗಳ ಸರಬರಾಜಿಗಾಗಿ ಐಆರ್‌ಇಪಿಎಸ್ ಮುಖಾಂತರ ಮಾತ್ರ ಇ–ಟೆಂಡರ್ ಆಹ್ವಾನಿಸಿದ್ದಾರೆ.

ಸಂಕ್ಷಿಪ್ತ ವಿವರಣೆ: TI/SPC/OHE/CAT (CU-Cd)/0971 & STR: TI/STR/020 Rev 02 ಇತ್ಯಾದಿ ನಿರ್ದಿಷ್ಟತೆಯ ಪ್ರಕಾರ ಅನ್–ಇನ್ಸುಲೇಟೆಡ್ ಕ್ಯಾಡ್ಮಿಯಮ್ ಕಾಪರ್ ಕ್ಯಾಟೆನರಿ ವೈರ್ 65 ಚದರ ಮಿಮೀ (19/2.10 ಮಿಮೀ).
(ಟೆಂಡರ್ ಸಂಖ್ಯೆ: 95235280) (ಪ್ರಮಾಣ: 41000 ಮೀ.)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04–07–2023, 14:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಮುಖ್ಯ ಸಾಮಗ್ರಿಗಳ ಪ್ರಬಂಧಕರು / ನಿರ್ಮಾಣ ಬೆಂಗಳೂರು ಕಂಟೋನ್ಮೆಂಟ್
PUB/184/AAV/PRB/SWR/2023-24
S.W.Railways SWRRLY SWRRLY

ನೈಋತ್ಯ ರೈಲ್ವೆ G20

ಟೆಂಡರ್ ಸೂಚನೆ ಸಂ. B/TRD.2023-24/05 ದಿನಾಂಕ: 16.06.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
(i)ರಾಜಾನುಕುಂಟೆ ಮತ್ತು ದೊಡ್ಡಬಳ್ಳಾಪುರ ನಿಲ್ದಾಣಗಳ ನಡುವೆ ಕಿಮೀ.35/900–36/00 ನಲ್ಲಿ ಎನ್‌ಎಚ್‌ಎಐ ನ ಪ್ರಸ್ತಾವಿತ ಆರ್‌ಓಬಿ ಸಂ. 478ಎ ಕಾರಣದಿಂದಾಗಿ ಓಎಚ್‌ಇ ಮಾರ್ಪಾಡುಗಳು. (ii) ತೊಂಡೇಭಾವಿ ನಿಲ್ದಾಣದಲ್ಲಿ ರೋಡ್–3 ಎಸಿಸಿ/ಎಂಎಪಿಟಿ ಸೈಡಿಂಗ್‌ನಲ್ಲಿ ಹೊಸ ಐಸೋಲೇಟರ್ ಅನ್ನು ಒದಗಿಸುವುದು.	ರೂ. 13,64,610.75/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10–07–2023, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಟಿಆರ್‌ಡಿ ಬೆಂಗಳೂರು
PUB/187/AAV/PRB/SWR/2023-24
S.W.Railways SWRRLY SWRRLY

ನೈಋತ್ಯ ರೈಲ್ವೆ G20

ಟೆಂಡರ್ ಸೂಚನೆ ಸಂ. ECN-11-2023-RT

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
I. ಶಾಹಪುರ್, ಸಿರ್ವಾಲ್, ಬಿರಾಲ್ ಬುಜುರ್ಗ್ ಮತ್ತು ನಬೋ್ಲಿ ರೈಲು ನಿಲ್ದಾಣಗಳಲ್ಲಿ ಹೊಸ ನಿಲ್ದಾಣದ ಕಟ್ಟಡಗಳ ವಿದ್ಯುತ್ ಸರಬರಾಜು ವ್ಯವಸ್ಥೆಗಳು ಮತ್ತು ವಿದ್ಯುದೀಕರಣ. II. ಗದಗ – ವಾಡಿ ಹೊಸ ಬಿಜಿ ಲೈನ್ ನ ಶಹಪುರದಲ್ಲಿ ಓಆರ್‌ಎಚ್ & ಎಸ್‌ಆರ್‌ಎಚ್‌ನ ವಿದ್ಯುದೀಕರಣ.	ರೂ. 5,25,34,834/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07–07–2023, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ನಿರ್ಮಾಣ ಬೆಂಗಳೂರು ಕಂಟೋನ್ಮೆಂಟ್
PUB/181/AAV/PRB/SWR/2023-24
S.W.Railways SWRRLY SWRRLY

Form No. 18
Notice for appearance in Appeals Order 41 Rule 14 CPC, and Rules 1,2,4 and 11 of Chapter IV Karnataka. High Court Rules

IN THE HIGH COURT OF KARNATAKA AT BENGALURU

MFA No. 9627/2017 (MV/DB)
C/W
MFA NO. 9628/2017 (MV/DB)

Appellant (Common in both Appeals)
M/S RELIANCE GENERAL INSURANCE CO. LTD.
No. 28, Centenary Building, MG Road, Bangalore-560001 REP. By Its Manager Legal By Sri D. Vijaya Kumar, ADV.

VS

Respondents in MFA 9627/2017
SMT R. Lakshmi
W/o Late N. Rajendran, Aged About 23 Years, R/At No. 3-412/7, Kathripalli, Alur, Perandapalli, Krishagiri, Tamil Nadu-635109, And Others.

Respondents in MFA 9628/2017

SMT Lalitha
W/ Late N Sriniasan, Aged about 28 Years, Residing At N0.3-399, Kathripalli, Alur, Perandapalli, Krishnagiri, Tamil Nadu-635 109 And Others

Appeal From the Judgement /Award/Order passed on 07/10/2017 in M.V.C. Number 3200/2016 on the file of the XIII ADDL. Judge, Court Of Small Causes & Member, MACT, Bengaluru (SCCH-15).

To:R5 (Common In Both Appeals)

5 Sri Ravi Kumar M S/o Muniyappa No. 1188/1170/2, Attibele Circle, Anekal, Bengaluru-562106.

Whereas The Aforementioned Appeal preferred has been registered by this Court.

NOTICE IS HEREBY given to you to appear in this Court in person or through an Advocate duly instructed or through some one authorized by law to act for you in this case on 14/07/2023 at 10.30 a.m., in case you intend to contest the appeal. If you fail so to appear, the appeal will be dealt with, heard and decided in your absence.

Given under my hand and the seal of this court on 15th day of June 2023.

By Order of the Court
Assistant Registrar

ಭಾರತ ಸರ್ಕಾರ – ರೈಲ್ವೆ ಸಚಿವಾಲಯ
ಭಾರತೀಯ ಸಿಗ್ನಲ್ ಇಂಜಿನಿಯರಿಂಗ್ ಮತ್ತು ಟೆಲೆಕ್ಯಮುನಿಕೇಶನ್ಸ್ ರೈಲ್ವೆ ಸಂಸ್ಥೆ
ತಾರನಾಕ ರಸ್ತೆ, ಸಿಕಂದರಾಬಾದ್ – 500017 (ಭಾರತ)

ಇಒಐ ನೋಟಿಸ್ ನಂ. ಸಿಒಇ/ಐಆರ್‌ಐಎಸ್‌ಇಟಿ/02/23
ದಿನಾಂಕ : 16–06–2023

PUB/0673

ರೈಲ್ವೆ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸೆಂಟರ್ ಆಫ್ ಎಕ್ಸಲೆನ್ಸ್ (ಸಿಒಇ) / ಐಆರ್‌ಐಎಸ್‌ಇಟಿ ಇವರು "ನ್ಯಾಷನಲ್ ಎಟಿಪಿ ಸಿಸ್ಟಮ್ ಕವಚ್ ಜೊತೆಗೆ ಮೂವಿಂಗ್ ಬ್ಲಾಕ್ ಬಳಸಿಕೊಂಡು ಹೆಡ್‌ವೇ ಸುಧಾರಣೆಗಾಗಿ ಇಂಡಿಪೆಂಡೆಂಟ್ ಸೇಫ್ಟಿ ಅಸ್ಸೆಸ್ಸರ್ ಸರ್ಟಿಫಿಕೇಶನ್ ಹಾಗೂ ಫೀಲ್ಡ್ ಟ್ರಯಲ್‌ಗಳು ಸೇರಿದಂತೆ ಫಂಕ್ಷನಲ್ ರಿಕ್ವೈರ್‌ಮೆಂಟ್ ಸ್ಪೆಸಿಫಿಕೇಶನ್ (ಎಫ್‌ಆರ್‌ಎಸ್), ಟೆಕ್ನಿಕಲ್ ಸ್ಪೆಸಿಫಿಕೇಶನ್, ವಿನ್ಯಾಸ, ಪ್ರೊಡಕ್ಟ್ ಪ್ರೊಟೊಟೈಪ್ ಅಭಿವೃದ್ಧಿ"ಗಾಗಿ ಸಂಭಾವ್ಯ ಅಸೋಸಿಯೇಟ್‌ಗಳಿಂದ ಪ್ರತಿಕ್ರಿಯೆ ಕೋರಿದ್ದಾರೆ.

ಆಸಕ್ತಿಯುಳ್ಳ ಪಕ್ಷಗಾರರು ಮೇಲ್ಕಂಡ ಇಒಐ ನೋಟಿಸ್‌ಗೆ ಸಂಬಂಧಿತ ಹೆಚ್ಚಿನ ಅಪ್‌ಡೇಟ್‌ಗಳಿಗಾಗಿ ಕೆಳಕಂಡ ವೆಬ್‌ಸೈಟ್‌ನ್ನು ನಿಯಮಿತವಾಗಿ ಪರಿಶೀಲಿಸುತ್ತಿರಬೇಕೆಂದು ಸೂಚಿಸಲಾಗಿದೆ.

ವೆಬ್‌ಸೈಟ್: https:// iriset.indianrailways.gov.in and https://iriset.railnet.gov.in

A0948 ಒಎಸ್‌ಡಿ/ಸಿಒಇ/ಐಆರ್‌ಐಎಸ್‌ಇಟಿ

ಕರ್ನಾಟಕ ಸರ್ಕಾರ
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
Department of State Educational Research and Training
No.4, 100 FT Ring Road, Banashankari 3rd Stage, Bengaluru-560 085
Ph: 080-2698 0100, E-mail: dpi.dsert.ka@nic.in, Website: https://dsert.kar.nic.in

ಸಂಖ್ಯೆ: DSERT/OB4/CT/E-14591/2023-24 ದಿನಾಂಕ: 21–06–2023

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು, ಇವರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ supply of food and beverages to the trainees of DSERT Office ಸಂಬಂಧ ಅರ್ಹ ಬಿಡ್‌ದಾರರಿಂದ ಎರಡು ಬಿಡ್ ವಿಧಾನದಲ್ಲಿ ಟೆಂಡರ್ ಕರೆಯಲಾಗಿದೆ.

(1) ಟೆಂಡರ್‌ನ ಅಂದಾಜು ಮೊತ್ತ: ರೂ.15,00,000/–. (2) EMD ಮೊತ್ತ: ರೂ.37,500/–. (3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 05–07–2023 ಸಂಜೆ 5:00 ಗಂಟೆಯವರೆಗೆ. (4) ಟೆಂಡರ್‌ನ ಪ್ರೀ–ಬಿಡ್ ಸಭೆ ದಿನಾಂಕ: 27–06–2023 ರಂದು ಬೆಳಿಗ್ಗೆ : 11:30 ಕ್ಕೆ.

ಹೆಚ್ಚಿನ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/– ನಿರ್ದೇಶಕರು
ರಾಜ್ಯ ಶಿಕ್ಷಣ ತರಬೇತಿ ಮತ್ತು ಸಂಶೋಧನೆ ಇಲಾಖೆ, ಬೆಂಗಳೂರು–85.

DIPR/CP/RO336/AAPL/2023-24

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Teachers/ Professors

ENGLISH, SOCIAL, MATHS Teachers Wanted for Standard 5 to 7. Contact: CAMLIN ENGLISH SCHOOL, 6th 'C' Main, Hampinagar, Vijayanagar 2nd Stage, Bangalore. 080-23301363

APS EDUCATIONAL TRUST
N. R. Colony, Bengaluru-560 019.
APS COLLEGE OF ENGINEERING
(Approved by AICTE, Affiliated to VTU, Regd. By Government of Karnataka)
Somanahalli, Kanakapura Road, Bangalore – 560 082.
Contact : 9448452508 / 9845210944 website : www.apsce.ac.in
Invites applications for the following posts:
Post
1. Professors / Associate Professors / Assistant Professors.
Qualification & Experience
As per AICTE Norms.
2. Foreman / Instructor / Asst. Instructors / Attenders.
Qualification & Experience
As per Govt. Norms.
Department
CSE / CSE in Cyber Security / CSE in AI & ML / ISE / ECE
Interested candidates are informed to send their resume within seven days from the date of this advertisement to the Principal, APS College of Engineering through **Email : principal.apsce@gmail.com.**
Prof. K. P. Narasimha Murthy, President — Sri. A. R. Acharya, General Secretary

WANTED GRADUATE TEACHERS FOR MATHEMATICS, KANNADA and COMPUTERS WhatsApp your resumes 9353111888. A.B. ENGLISH HIGH SCHOOL Haines Road, Near Coles Park, Bangalore-51.

General

AMAZING OPPORTUNITY, Retired, VRS, Business/ Professionals, Senior Citizens, Earn Lakhs. International Recognition. SUPERB RETIRED LIFE CAREER. 97400-90431/ 97400-76517

RENTAL PROPERTIES

Accommodation Wanted

Commercial

LAND FOR PETROL STATION Required Land Lease For Petrol Pump Anywhere Banglore Contact: 9400103222

DH ಪ್ರಜಾವಾಣಿ
Book Your Classifieds Ads
Online Log in to dhclassifieds.com
Contact : 9886213331 : 9901641752 9845114560 : 9731810277 080 - 45557163 / 164

BUSINESS

Business Offers

Finance

NRI'S INVESTMENT And Finance Now funds are Available on Lowinterest against properties mortgage Land/Building, Land development/ projects Contract-7204995189

PERSONAL

Change of Name

WE, NARESH_S and RANI CATHERINE L.K R/a#873, 31st cross, LR.Ngar, Viveknagar, P.O.Bengaluru South, Bengaluru. Declare that our Minor Son's Name wrongly mentioned in his Birth Certificate as N_PRANAV Instead of N. PRANAV DANIEL (DOB:28.09.2019) vide affidavit dated 14.03.2023 before Notary K.Venkateshan, Bangalore

I, SRINIVASULU VOLIPI R/o#12K, #181,1st cross, Gangadharachari Layout, Basavanapura, K.R.Puram, Bengaluru-560036 have changed my Name to SREENIVASULU VOLIPI vide affidavit dated:20.6.2023 before Notary L.Puttaraju, Bangalore

WE CHITTARANJAN Barik & Sagarika Barik, R/o.#10, 6th Cross, Nagasandra, Yemalur, Bangalore-37, have changed our daughter's name from SAISIMRAN BARIK to SAI SIMRAN BARIK affidavit dated 17/06/2023, notary A.R.Muneer Ahmed, Bangalore.

I, CHAITRA #297/1,1st Main, Near Royan Circle, St.Mary's Convent, Bangalore-18. I, have changed my name to CHAITRA RAYAPPA, Vide affidavit, dated:19/06/2023 Sworn before Notary: L.Shankaranarayana Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಕ್ಲಾಸಿಫೈಡ್ಸ್
ADMISSION CORNER

VIVEKANANDA INSTITUTE OF TECHNOLOGY
AN INSTITUTE OF JANATHA EDUCATION SOCIETY®
Recognised by GOK, Affiliated to VTU & Approved by AICTE
CET CODE: E087 | ESTD.: 1997 | COMEDK CODE: E149
BE: Bachelor of Engineering
❖ Computer Science
❖ Information Science
❖ Artificial Intelligence & Machine Learning
❖ Electronics & Communication
❖ Mechanical ❖ Civil
Ph.D Program
CSE | E&C | MECH
Maths | Chemistry
Physics
VKIT
College of Pharmacy
D.Pharm
B.Pharm
M.Pharm
CET B060
Institute of Management
BCA | BCA - Hons.
BBA | BBA - Hons.
MBA | M.Com
PGCET B-323
College of Law
5 Yrs : BA - LLB | B.Com - LLB
3 Yrs : LLB

2023-24 Admissions Open
95139 53482
Admission Center: Dr.Rajkumar Road, Next to Orion Mall, Rajajinagar II Stage, Bengaluru-560055
VKIT Campus: Kumbalagodu, Kengeri, Bengaluru-560074

CHANGE OF NAME
I, CHANDRASHEKHAR S/o Bhaskara, R/at. # 2320, Prekasha, 2nd Cross, Tavaragere, Guthalu, Mandya - 571403 have changed my name to CHANDRASHEKARA vide affidavit dated 17/06/2023 before Notary G.B. Chandra, Mandya

I, V.R.VENUGOPAL S/o.Venkataramu R/o#4/2, 2nd Floor, 1st A Cross, Annipura, Sudhamanagar, Bangalore- 560027 Have Changed My Name to JOHN PAUL vide affidavit dated;21.6.2023 before Notary V.Rajashekhara, Bangalore

2nd PU Failed?
Don't be left behind!
A golden opportunity to study degree under any University this academic year and save one precious year of your life.
BE, MBBS, BSc, BBA, BCA
and other degrees
Limited seats. For admissions call:
2nd ಪಿಯುಸಿ ಅನುತ್ತೀರ್ಣವಾದ ವಿದ್ಯಾರ್ಥಿಗಳಿಗೆ ಒಂದು ಸುವರ್ಣ ಅವಕಾಶ. ಸಂಪರ್ಕಿಸಿ:
7846000222

ಕ್ಲಾಸಿಫೈಡ್ಸ್
CONNECT

Grand Flea Market Presents

ದ ಸೋಕ್ (ಮಾರ್ಕೆಟ್)
THE SOUQ (MARKET)
Art, Craft, Handlooms & Lifestyle Exhibition
Date : 16th June 2023 to 25th June 2023
Timings : 11:00 AM to 7:00 PM
10 DAYS EXHIBITION
Art & Crafts | Handicrafts | Clothings | Fashion Accessories | Home Decore & More
Entry Free! LED SHOW Live Performance Date: 24th June 2023 Timings: 5.45 PM to 7 PM Venue KARNATAKA CHITRAKALA PARISHATH KUMARA KRUPA ROAD BENGALURU
Entry Free! The Magic, Ventriloquist & Juggling Show 25th June 2023 5.45 to 7 PM Karnataka Chitrakala Parishath Kumara Krupa Road, Bengaluru-01
Organized By Grand Flea Market
For Details Contact 9036658774 / 6364685716
Karnataka Chitrakala Parishath
Kumara Krupa Road, Bengaluru
10 DAYS EXHIBITION | 100+ STALLS | LIVE PERFORMANCE | FREE ENTRY

ಕುಂದಲಹಳ್ಳಿ ಕೆರೆ: ಮೀನು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚರಂಡಿ ನೀರು ಕೆರೆಗಳಿಗೆ ಸೇರುತ್ತಿದ್ದಂತೆ ಮೀನುಗಳು ಸಾಯತೊಡಗಿವೆ. ಮಂಗಳವಾರ ಭಟ್ರಹಳ್ಳಿ ಕೆರೆಯಲ್ಲಿ ಮೀನುಗಳು ಸತ್ತು ಬಿದ್ದಿದ್ದರೆ, ಬುಧವಾರ ಕುಂದಲಹಳ್ಳಿ ಕೆರೆಯಲ್ಲಿ ಮೀನು ಸತ್ತು ತೇಲುತ್ತಿವೆ.

ನಗರದ ಚರಂಡಿ ನೀರು ಮಾತ್ರವಲ್ಲ, ಒಳಚರಂಡಿಯ ನೀರು ಕೂಡ ಸೇರಿರುವುದರಿಂದ ನೀರು ಕಲುಷಿತಗೊಂಡು ಮೀನುಗಳು ಸಾಯುತ್ತಿವೆ. ಕುಂದಲಹಳ್ಳಿ ಕೆರೆಯಲ್ಲಿ ಒಂದು ತಿಂಗಳ ಹಿಂದೆ ಇದೇ ರೀತಿ ಮೀನುಗಳು ಸತ್ತಿದ್ದವು.

‘ಕುಂದಲಹಳ್ಳಿ ಕೆರೆಗೆ ವಾಯು ವಿಹಾರಕ್ಕೆ ಹೋಗಿದ್ದೆ. ಆಗ ಮೀನು ಸತ್ತು ತೇಲುತ್ತಿರುವುದನ್ನು ಕಂಡೆ. ಕಾರಣ ಗೊತ್ತಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ನೀರು ಸ್ವಚ್ಛಗೊಳಿಸಲು ಕ್ರಮ ಕೈಗೊಳ್ಳಬೇಕು’ ಎಂದು ಸ್ಥಳೀಯರಾದ ಸುದರ್ಶನ್ ಹೇಳಿದರು.

ಬೆಂಗಳೂರು ಕುಂದಲಹಳ್ಳಿ ಕೆರೆಯಲ್ಲಿ ಮೀನು ಸತ್ತು ತೇಲುತ್ತಿರುವುದು ಬುಧವಾರ ಕಂಡು ಬಂದಿದೆ.

‘ಭಟ್ರಹಳ್ಳಿ ಕೆರೆಯಲ್ಲಿ ಮಂಗಳವಾರ ಮೀನುಗಳು ಸತ್ತುಬಿದ್ದಿದ್ದವು. ಇವತ್ತು ಅಧಿಕಾರಿಗಳು ಬಂದು ಮೀನುಗಳನ್ನು ತೆಗೆದು ಸ್ವಚ್ಛ ಮಾಡಿಸಿದ್ದಾರೆ. ಮೀನು ಸಾಯಬೇಕಿದ್ದರೆ ನೀರು ವಿಷ ಆಗಿರಬೇಕು. ಇದೇ ನೀರನ್ನು ಜನ ಬಳಸಿದರೆ ಮೀನಿಗೆ ಬಂದ ಸ್ಥಿತಿಯೇ ಮನುಷ್ಯರಿಗೂ ಬರಬಹುದು’ ಎಂದು ಭಟ್ರಹಳ್ಳಿ ಕೆರೆ ಸಮೀಪದ ವೀಣಣ್ಣ ಗೌಡ ಆತಂಕ ವ್ಯಕ್ತಪಡಿಸಿದರು.

ಕೆರೆಗಳಲ್ಲಿ ಮೀನು ಸಾಯುತ್ತಿರುವ ಬಗ್ಗೆ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಬಿಬಿಎಂಪಿ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಕೆರೆ ಕಲುಷಿತಗೊಳ್ಳುತ್ತಿರುವುದೇ ಇದಕ್ಕೆ ಕಾರಣ. ಹೀಗಾಗದಂತೆ ಶಾಶ್ವತ ಪರಿಹಾರವನ್ನು ಅಧಿಕಾರಿಗಳು ಕಂಡುಕೊಳ್ಳಬೇಕು ಎಂದು ಆಕ್ಷನ್ ಏಡ್ ಸಂಸ್ಥೆಯ ರಾಘವೇಂದ್ರ ಬಿ. ಪಚ್ಚಾಪುರ ಆಗ್ರಹಿಸಿದರು.

10 ಬಾರಿ ಮೀನು ಸಾವು

ಬಿಬಿಎಂಪಿ ವ್ಯಾಪ್ತಿಯಲ್ಲಿ 2022ರಲ್ಲಿ 23 ಕೆರೆಗಳಲ್ಲಿ 16 ಬಾರಿ ಮೀನುಗಳು ಸತ್ತಿದ್ದವು. ಈ ವರ್ಷ ಇಲ್ಲಿವರೆಗೆ 8 ಕೆರೆಗಳಲ್ಲಿ 10 ಬಾರಿ ಸಾವು ಕಂಡಿವೆ.

2023ರ ಫೆ.8 ಮತ್ತು ಏಪ್ರಿಲ್ 2ರಂದು ಕೊತ್ತನೂರು ಕೆರೆ, ಮಾರ್ಚ್ 30ರಂದು ಇಬ್ಲೂರು ಕೆರೆ, ಮೇ 5ರಂದು ಚೆಳೆಕೆರೆ, ಮೇ 25ರಂದು ಮಡಿವಾಳ ಕೆರೆ, ಜೂನ್ 18ರಂದು ದೊಡ್ಡಕಲ್ಲಸಂದ್ರ ಕೆರೆ, ಜೂನ್ 20ರಂದು ಭಟ್ರಹಳ್ಳಿ ಕೆರೆ, ಜೂನ್ 1 ಮತ್ತು 21ರಂದು ಕುಂದಲಹಳ್ಳಿ ಕೆರೆಯಲ್ಲಿ ಮೀನುಗಳು ಸತ್ತಿವೆ.

ಆಮ್ಲಜನಕದ ಕೊರತೆ : ಈ ಪ್ರದೇಶದಲ್ಲಿ ಕೈಗಾರಿಕೆಗಳಿಲ್ಲ. ಹೊಸತಾಗಿ 110 ಹಳ್ಳಿಗಳು ಸೇರಿರುವುದರಿಂದ ಚರಂಡಿ ನೀರು ಕೆರೆಗೆ ಸೇರಿ ಸಮಸ್ಯೆಯಾಗಿದೆ ಎಂದು ಮಾಲಿನ್ಯ ನಿಯಂತ್ರಣ ಮಂಡಳಿಯ ಮಹದೇವಪುರ ವಿಭಾಗದ ಕಾರ್ಯನಿರ್ವಾಹಕ ಅಧಿಕಾರಿ ಮಹೇಂದ್ರ ಮಾಹಿತಿ ನೀಡಿದರು.

‘ಮಳೆ ಬಂದಾಗ ಚರಂಡಿ ನೀರು ಕೆರೆಗೆ ಸೇರಿರುತ್ತದೆ. ಜತೆಗೆ ಒಳಚರಂಡಿಯ ನೀರೂ ಸೇರಿರುವ ಸಾಧ್ಯತೆಗಳಿವೆ. ನೀರಿನಲ್ಲಿ ಆಮ್ಲಜನಕದ ಪ್ರಮಾಣ ಒಮ್ಮೆಲೇ ಬದಲಾದಾಗ ಮೀನುಗಳು ಸತ್ತಿವೆ. ಮಳೆ ಬರುವ ಮೊದಲೇ ಚರಂಡಿಗಳನ್ನು ಸ್ವಚ್ಛಗೊಳಿಸಿದರೆ, ಒಳಚರಂಡಿ ನೀರು ಸೇರದಂತೆ ಕ್ರಮ ಕೈಗೊಂಡರೆ ಈ ರೀತಿ ಆಗುವುದಿಲ್ಲ. ಈ ಬಗ್ಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ, ಬಿಬಿಎಂಪಿ ಅಧಿಕಾರಿಗಳಿಗೆ ಪತ್ರ ಬರೆದಿದ್ದೇವೆ’ ಎಂದರು.

ಖಂಡನೆ

ಬೆಂಗಳೂರು: ಉಜಿರೆಯ ಎಸ್‌ಡಿಎಂ ಕಾಲೇಜಿನ ವಿದ್ಯಾರ್ಥಿನಿ ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಆರೋಪಿಗಳನ್ನು ಪತ್ತೆ ಹಚ್ಚುವಲ್ಲಿ ತನಿಖಾ ಸಂಸ್ಥೆಗಳು ವಿಫಲವಾಗಿವೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಆರೋಪಿಸಿದೆ.

ಸಂತೋಷ್ ರಾವ್‌ರನ್ನು ಆರೋಪ ಮುಕ್ತಗೊಳಿಸಿರುವುದು ಸ್ವಾಗತಾರ್ಹ. ಪ್ರಕರಣದ ನೈಜ ಆರೋಪಿಗಳನ್ನು ಪತ್ತೆ ಹಚ್ಚುವವರೆಗೆ ತನಿಖೆ ಮುಂದುವರಿಸಬೇಕು ಎಂದು ಸಂಘಟನೆಯ ಅಧ್ಯಕ್ಷರಾದ ಮೀನಾಕ್ಷಿ ಬಾಳಿ, ಪ್ರಧಾನ ಕಾರ್ಯದರ್ಶಿ ದೇವಿ ಆಗ್ರಹಿಸಿದ್ದಾರೆ.

ಪ್ರಜಾವಾಣಿ@75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

₹50 ಕೋಟಿ ಮೌಲ್ಯದ ಆಸ್ತಿ ಬಿಬಿಎಂಪಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೊಮ್ಮನಹಳ್ಳಿ ವಲಯದ ದೊಡ್ಡಕಲ್ಲಸಂದ್ರ ಗ್ರಾಮದಲ್ಲಿ ಸುಮಾರು ₹50 ಕೋಟಿ ಮೌಲ್ಯದ ಆಸ್ತಿಯನ್ನು ಬಿಬಿಎಂಪಿ ಬುಧವಾರ ವಶಪಡಿಸಿಕೊಂಡಿತು.

ಬೆಂಗಳೂರು ದಕ್ಷಿಣ ವಿಭಾಗದ ವಾರ್ಡ್ ನಂ.197ರ ವ್ಯಾಪ್ತಿಯ ನಾರಾಯಣ ನಗರ 1ನೇ ಹಂತದ ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂಬರ್ 79/5ಎ ರಲ್ಲಿ ಪ್ರದೇಶವನ್ನು ಆಟದ ಮೈದಾನಕ್ಕೆಂದು ಮೀಸಲಿಡಲಾಗಿತ್ತು. ಈ ಜಾಗದ ಬಗ್ಗೆ ಜಗದಾಂಬ ಮತ್ತು ಇತರರು ದಾಖಲಿಸಿದ್ದ ಪ್ರಕರಣವನ್ನು ಸಿಟಿ ಸಿವಿಲ್ ನ್ಯಾಯಾಲಯ ಏ.17ರಂದು ವಜಾಗೊಳಿಸಿತ್ತು.

ಬೊಮ್ಮನಹಳ್ಳಿ ವಲಯದ ದೊಡ್ಡಕಲ್ಲಸಂದ್ರ ಗ್ರಾಮದಲ್ಲಿ ಸುಮಾರು ₹50 ಕೋಟಿ ಮೌಲ್ಯದ ಆಸ್ತಿಯನ್ನು ಬಿಬಿಎಂಪಿ ಬುಧವಾರ ವಶಪಡಿಸಿಕೊಂಡಿತು.

ಹೀಗಾಗಿ, ಜೂನ್ 21ರಂದು ಬಿಬಿಎಂಪಿ ವತಿಯಿಂದ ವಲಯ ಆಯುಕ್ತರಾ ಡಾ. ಹರೀಶ್ ಕುಮಾರ್ ಹಾಗೂ ಜಂಟಿ ಆಯುಕ್ತ ಕೃಷ್ಣಮೂರ್ತಿ ನೇತೃತ್ವದಲ್ಲಿ ತೆರವು ಕಾರ್ಯಾಚರಣೆ ನಡೆಸಲಾಯಿತು. ಸುಮಾರು 50 ಸಾವಿರ ಚದರ ಅಡಿ ಸ್ವತ್ತನ್ನು ವಶಪಡಿಸಲಾಯಿತು ಎಂದು ಉತ್ತರಹಳ್ಳಿ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ತಿಳಿಸಿದ್ದಾರೆ.

ನಗರದಲ್ಲಿ ಇಂದು

60ನೇ ಅಂತರವರ್ಗೀಯ ಕನ್ನಡ ನಾಟಕ ಸ್ಪರ್ಧೆ-2022–23: ಉದ್ಘಾಟನೆ: ಅರುಣ್ ಸಾಗರ್, ಅಧ್ಯಕ್ಷತೆ: ಎಚ್.ಎನ್. ಸುಬ್ರಮಣ್ಯ, ಅತಿಥಿಗಳು: ವೈ.ಜಿ. ಮಧುಸೂದನ್, ವಿ. ವೆಂಕಟಶಿವಾರೆಡ್ಡಿ, ಬಿ.ಎಸ್. ಅರುಣ್ ಕುಮಾರ್, ತಲ್ಲಂ ಆರ್. ದ್ವಾರಕಾನಾಥ್, ವಿ. ಮಂಜುನಾಥ್, ಸುಧಾಕರ್ ಇಸ್ಥೂರಿ, ರಾಮ್ ಮೋಹನ್ ಕೆ.ಎನ್., ಆಯೋಜನೆ ಮತ್ತು ಸ್ಥಳ: ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 4

‘ವೈಶಂಪಾಯನ ತೀರ’ ನಾಟಕ ಪ್ರದರ್ಶನ: ರಚನೆ: ಎಲ್.ಎನ್. ಮುಕುಂದರಾಜ್, ನಿರ್ದೇಶನ: ಸವಿತ ಪ್ರಸನ್ನ, ರಂಗಸಜ್ಜಿಕೆ: ಮಂಜು ಬಿ.ಎಂ., ಸಂಗೀತ: ಶಂಕರ್ ಬಾಳ್ಕುದ್ರು, ಬೆಳಕು: ರವಿಶಂಕರ್, ಆಯೋಜನೆ: ಸಾಫಲ್ಯ, ಸ್ಥಳ: ರಂಗಶಂಕರ, ಸಂಜೆ 7.30

ಹರಿದಾಸ ಝೇಂಕಾರ: ಗಾಯನ: ಅನುಕೃಪ ರೌಡೂರ್, ಮನಸ್ವಿ ಕಶ್ಯಪ್, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಪ್ರಮೋದ್ ಗಬ್ಬೂರ್, ಆಯೋಜನೆ, ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಗಳ ಮಠ, ಜಯನಗರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ nagara dalli_indu@prajavani.co.in

ಬಸ್‌ನಲ್ಲಿ ಬಿಎಂಟಿಸಿ ಎಂಡಿ ಪ್ರಯಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಕ್ತಿ ಯೋಜನೆ ಜಾರಿಯಾದ ಮೇಲೆ ಪ್ರಯಾಣಿಕರ ಜೊತೆಗೆ ಚಾಲಕರು, ನಿರ್ವಾಹಕರು ಹೇಗೆ ವರ್ತಿಸುತ್ತಿದ್ದಾರೆ ಎಂದು ಪರಿಶೀಲಿಸಲು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ. ಸತ್ಯವತಿ ಅವರು ಬುಧವಾರ ಬಸ್‌ಗಳಲ್ಲಿ ಸಂಚರಿಸಿದರು.

ಶಾಂತಿನಗರದಿಂದ ಲಾಲ್ ಬಾಗ್, ಆಶ್ರಮ, ಗಣೇಶ್ ಭವನ, ಸೀತಾ ಸರ್ಕಲ್, ಹೊಸಕೆರೆಹಳ್ಳಿ ಕ್ರಾಸ್, ನಾಯಂಡಹಳ್ಳಿ ಮಾರ್ಗವಾಗಿ ದೀಪಾಂಜಲಿ ನಗರದವರೆಗೆ ಬಿಎಂಟಿಸಿಯ ವಿವಿಧ ಬಸ್‌ಗಳಲ್ಲಿ ಸಂಚರಿಸಿದರು. ಮಹಿಳಾ ಪ್ರಯಾಣಿಕರಿಗೆ ಟಿಕೆಟ್ ಹೇಗೆ ನೀಡುತ್ತಿದ್ದಾರೆ? ಪ್ರಯಾಣಿಕರ ಜತೆಗೆ ಸೌಜನ್ಯಯುತವಾಗಿ ನಡೆದುಕೊಳ್ಳುತ್ತಿದ್ದಾರೆಯೇ? ಬಸ್ ಸ್ವಚ್ಛವಾಗಿ ಇಟ್ಟುಕೊಂಡಿದ್ದಾರೆಯೇ ಎಂಬುದನ್ನೆಲ್ಲ ಪರಿಶೀಲಿಸಿದರು.

ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ. ಸತ್ಯವತಿ ಅವರು ಬುಧವಾರ ಬಿಎಂಟಿಸಿ ಬಸ್‌ನಲ್ಲಿ ಸಂಚರಿಸಿದರು.

‘ನಾನು ಬುಧವಾರ ಬೆಳಿಗ್ಗೆ ಮನೆಯಿಂದ ಕಚೇರಿಗೆ ಹೊರಟಿದ್ದೆ. ಬಸ್‌ಗಳಲ್ಲಿ ಹೇಗಿದೆ ಸ್ಥಿತಿ ಎಂದು ನೋಡೋಣ ಎಂದನ್ನಿಸಿದ್ದರಿಂದ ಮಾಸ್ಕ್ ಹಾಕಿಕೊಂಡು ಬಸ್ ಹತ್ತಿದೆ. ಮುಂದಿನ ನಿಲ್ದಾಣದಲ್ಲಿ ಇಳಿದೆ. ಅಲ್ಲಿಂದ ಮತ್ತೊಂದು ಬಸ್ ಹತ್ತಿದೆ. ಹೀಗೆ ಹಲವು ಬಸ್‌ಗಳಲ್ಲಿ ತೆರಳಿದೆ. ಎಲ್ಲೂ ಸಮಸ್ಯೆಗಳು ಕಂಡು ಬರಲಿಲ್ಲ. ನಿರ್ವಾಹಕರು ಸೌಜನ್ಯಯುತವಾಗಿಯೇ ವರ್ತಿಸುತ್ತಿರುವುದು ಕಂಡು ಬಂತು. ಒಂದೆರಡು ಕಡೆಗಳಲ್ಲಿ ಭಾರಿ ಜನಸಂದಣಿ ಇತ್ತು. ಅಲ್ಲಿ ಟಿಕೆಟ್ ನೀಡಲು ನಿರ್ವಾಹಕರು ಕಷ್ಟಪಡುತ್ತಿದ್ದರು’ ಎಂದು ಜಿ. ಸತ್ಯವತಿ ‘ಪ್ರಜಾವಾಣಿ’ ಜತೆ ಅನುಭವ ಹಂಚಿಕೊಂಡರು.

‘ಬಿಎಂಟಿಸಿಯಲ್ಲಿ ದುರ್ವರ್ತನೆ ತೋರಿರುವ ಬಗ್ಗೆ ಇಲ್ಲಿವರೆಗೆ ದೂರುಗಳೇನು ಬಂದಿರಲಿಲ್ಲ. ಬೇರೆ ಕಡೆ ಅಂಥ ದೂರುಗಳು ಇದ್ದಿದ್ದರಿಂದ ಪರಿಶೀಲಿಸಿದೆ. ಪ್ರಯಾಣಿಕರ ಸಂಖ್ಯೆ ಅಧಿಕ ಇರುವಾಗ ಆಧಾರ್ ಕಾರ್ಡ್ ಪರಿಶೀಲಿಸಿ ಟಿಕೆಟ್ ನೀಡುವ ಕಷ್ಟ. ಇದನ್ನು ತಪ್ಪಿಸಲು ಸ್ಮಾರ್ಟ್‌ಕಾರ್ಡ್ ಅಗತ್ಯ ಇದೆ’ ಎಂದು ತಿಳಿಸಿದರು.

‘ದೀಪಾಂಜಲಿಯಲ್ಲಿ ಇಳಿದು ನಮ್ಮ ಸಿಬ್ಬಂದಿ ಜತೆಗೆ ಮಾತನಾಡಿದೆ. ಅವರೂ ಅನುಭವ ಹಂಚಿಕೊಂಡರು. ಬಸ್ಸಲ್ಲಿ ಮುಂದಕ್ಕೆ ಹೋಗಲೂ ಜಾಗ ಇಲ್ಲದೇ ಇರುವಾಗ ಟಿಕೆಟ್ ನೀಡುವ ಒತ್ತಡ ಒಂದು ಬಿಟ್ಟು ಬೇರೇನೂ ಸಮಸ್ಯೆ ಇಲ್ಲ ಎಂದು ಸಿಬ್ಬಂದಿ ತಿಳಿಸಿದರು’ ಎಂದು ಸತ್ಯವತಿ ಹೇಳಿದರು.

ಬ್ರ್ಯಾಂಡ್ ಬೆಂಗಳೂರು: ಸಲಹೆಗೆ ಆನ್‌ಲೈನ್ ಪೋರ್ಟಲ್

ಬೆಂಗಳೂರು: ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ಸಾರ್ವಜನಿಕರಿಂದ ಸಲಹೆಗಳನ್ನು ಸ್ವೀಕರಿಸಲು ಬಿಬಿಎಂಪಿ www.brandbengluru.karnataka.gov.in ಎಂಬ ಹೊಸ ಆನ್‌ಲೈನ್ ಪೋರ್ಟಲ್ ಆರಂಭಿಸಿದೆ.

ಬೆಂಗಳೂರು ಅಭಿವೃದ್ಧಿ ಖಾತೆ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನೂತನ ಪೋರ್ಟಲ್‌ಗೆ ಗುರುವಾರ ಚಾಲನೆ ನೀಡಿದರು. ಸಂಚಾರಯುಕ್ತ, ಹಸಿರು, ಸ್ವಚ್ಛ, ಜನಹಿತ, ಆರೋಗ್ಯಕರ, ತಾಂತ್ರಿಕ ಮತ್ತು ಜಲ ಸುರಕ್ಷಿತ ಬೆಂಗಳೂರು ನಿರ್ಮಾಣಕ್ಕೆ ಪೂರಕವಾಗಿ ಈ ಪೋರ್ಟಲ್ ಮೂಲಕ ಸಲಹೆ ನೀಡಲು 15 ದಿನಗಳ ಕಾಲಾವಕಾಶ ನೀಡಲಾಗಿದೆ.

ಪೋರ್ಟಲ್‌ಗೆ ಚಾಲನೆ ನೀಡಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಶಿವಕುಮಾರ್, ‘ಬೆಂಗಳೂರು ಅಭಿವೃದ್ಧಿಗೆ ಸಂಬಂಧಿಸಿದಂತೆ ಆನ್ಲೈನ್ ಪೋರ್ಟಲ್ ಬಳಸಿಕೊಂಡು ಯಾರು ಬೇಕಿದ್ದರೂ ಸಲಹೆ ನೀಡಬಹುದು’ ಎಂದರು.

ಪೊಲೀಸರ ಜತೆಗೂ ಸಭೆ: ನಗರದಲ್ಲಿ ಸಂಚಾರ ದಟ್ಟಣೆ ನಿಯಂತ್ರಣ ದೊಡ್ಡ ಸವಾಲು. ಈ ಕುರಿತು ಅರಿಯಲು ಬೆಂಗಳೂರು ಸಂಚಾರ ಪೊಲೀಸ್ ವಿಭಾಗದ ಎಲ್ಲ ಅಧಿಕಾರಿಗಳ ಜತೆ ವಿಶೇಷ ಸಭೆ ನಡೆಸಲಾಗುವುದು. ಅವರ ಅಭಿಪ್ರಾಯ ಆಧರಿಸಿ ಯೋಜನೆಗಳನ್ನು ರೂಪಿಸಲಾಗುವುದು ಎಂದರು. ಘನ ತ್ಯಾಜ್ಯ ನಿರ್ವಹಣೆಯಲ್ಲಿ ಸಮಗ್ರ ಸುಧಾರಣೆ ಆಗಬೇಕಿದೆ. ಪಾದಚಾರಿ ಮಾರ್ಗಗಳ ಅತಿಕ್ರಮಣ, ಅಲ್ಲಿ ವಹಿವಾಟು ನಡೆಸುವುದನ್ನು ತಡೆಯ ಬೇಕಿದೆ. ರಸ್ತೆ ಗುಂಡಿ ಮುಚ್ಚಲು ಪ್ರತ್ಯೇಕ ಯೋಜನೆ ರೂಪಿಸಬೇಕಿದೆ’ ಎಂದರು. ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಉಪಸ್ಥಿತರಿದ್ದರು.

ಸಂಸ್ಕೃತಿ ಇಲಾಖೆ ದುಪ್ಪಟ್ಟು ಬಾಡಿಗೆ ಪಾವತಿಸಿರುವ ಆರೋಪ • ಕುರ್ಚಿಗೆ ತಲಾ ₹100, ಟೇಬಲ್‌ಗೆ ₹750 ಬಾಡಿಗೆ ಪಾವತಿ

‘ಬೆಂಗಳೂರು ಹಬ್ಬಕ್ಕೆ ₹5.59 ಕೋಟಿ ವೆಚ್ಚ’

• ವರುಣ ಹೆಗಡೆ

ನಮ್ಮ ಬೆಂಗಳೂರು ಹಬ್ಬದಲ್ಲಿ ಜಾನಪದ ಕಲಾವಿದರು ನೀಡಿದ ಪ್ರದರ್ಶನ

ಪ್ರಜಾವಾಣಿ ವಿಶೇಷ

ಬೆಂಗಳೂರು: ವಿಧಾನಸಭೆ ಚುನಾವಣೆ ಹೊಸ್ತಿಲಲ್ಲಿ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ನಡೆಸಿದ್ದ ‘ನಮ್ಮ ಬೆಂಗಳೂರು ಹಬ್ಬ’ದಲ್ಲಿ ಅವ್ಯವಹಾರ ನಡೆದಿದೆಯೆಂಬ ಆರೋಪಗಳು ಕೇಳಿ ಬಂದಿದ್ದು, ಎರಡು ದಿನಗಳ ಉತ್ಸವಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ₹ 5.59 ಕೋಟಿ ಹಣ ಪಾವತಿಸಿದೆ.

ಸರಳವಾಗಿ ‘ನಮ್ಮ ಬೆಂಗಳೂರು ಹಬ್ಬ’ ಆಚರಿಸುವುದಾಗಿ ಹೇಳಿದ್ದ ಸರ್ಕಾರ, 2023ರ ಮಾರ್ಚ್ 25 ಮತ್ತು 26ರಂದು ಇದನ್ನು ಹಮ್ಮಿಕೊಂಡಿತ್ತು. ಕಬ್ಬನ್ ಉದ್ಯಾನ ಹಾಗೂ ವಿಧಾನಸೌಧದ ಆವರಣದಲ್ಲಿ ಈ ಹಬ್ಬ ನಡೆದಿತ್ತು. ಬೆಂಗಳೂರಿನ ಸಂಸ್ಕೃತಿ, ಕಲೆ ಹಾಗೂ ಪರಂಪರೆಯನ್ನು ಇಲ್ಲಿ ನೆಲೆಸಿರುವವರಿಗೆ ಪರಿಚಯಿಸುವುದು ಈ ಹಬ್ಬದ ಮುಖ್ಯ ಉದ್ದೇಶವಾಗಿತ್ತು. ಈ ಹಬ್ಬದ ನಿರ್ವಹಣೆಯನ್ನು ಇಲಾಖೆ ಸಂಸ್ಥೆಯೊಂದಕ್ಕೆ ನೀಡಿತ್ತು. ಇದರಿಂದಾಗಿ ಕುರ್ಚಿ, ಟೇಬಲ್ ಸೇರಿ ಹಬ್ಬಕ್ಕೆ ಬೇಕಾದ ವಸ್ತುಗಳಿಗೆ ದುಪ್ಪಟ್ಟು ಹಣ ಪಾವತಿಸಲಾಗಿದೆ ಎಂದು ಕಲಾವಿದರು ಆರೋಪಿಸಿದ್ದಾರೆ.

‘ನಮ್ಮ ಬೆಂಗಳೂರು ಹಬ್ಬ’ಕ್ಕೆ ಸಂಬಂಧಿಸಿದಂತೆ ಇಲಾಖೆಯು ‘ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ & ಅಡ್ವರ್ಟೈಸಿಂಗ್ ಲಿಮಿಟೆಡ್’ಗೆ ಹಣ ಪಾವತಿಸಿದೆ. ಪ್ಲಾಸ್ಟಿಕ್ ಕುರ್ಚಿಗಳಿಗೆ ತಲಾ ₹ 75ರಿಂದ ₹ 100 ಬಾಡಿಗೆ ಪಾವತಿಸಿದರೆ, ಟೇಬಲ್‌ಗಳಿಗೆ ತಲಾ ₹ 750 ಸಂದಾಯವಾಗಿದೆ. ಬೆಂಗಳೂರು ಮಾರುಕಟ್ಟೆಯಲ್ಲಿ ಸದ್ಯ ಪ್ಲಾಸ್ಟಿಕ್ ಕುರ್ಚಿಗಳು ತಲಾ ₹ 8ರಿಂದ ₹10ಗೆ ಬಾಡಿಗೆಗೆ ದೊರೆಯುತ್ತಿವೆ. ಅದೇ ರೀತಿ, ಟೇಬಲ್‌ಗಳು ₹ 80ರಿಂದ ₹100ಗೆ ಲಭ್ಯವಾಗುತ್ತಿವೆ.

ವಿಧಾನಸೌಧದಲ್ಲಿ ನಡೆದ ಮುಖ್ಯ ಕಾರ್ಯಕ್ರಮದಲ್ಲಿ ಅತಿ ಗಣ್ಯರಿಗಾಗಿ ಹಾಕಲಾಗಿದ್ದ 50 ಸೋಫಾಗಳಿಗೆ ₹ 2.50 ಲಕ್ಷ ಪಾವತಿಸಲಾಗಿದೆ. ಪ್ರತಿ ಸೋಫಾಗೆ ₹ 5 ಸಾವಿರ ಬಾಡಿಗೆ ನೀಡಿದಂತಾಗಿದೆ. ಬ್ಯಾಂಕ್ವೆಟ್ ಕುರ್ಚಿಗಳಿಗೆ ತಲಾ ₹200 ಬಾಡಿಗೆ ಪಾವತಿಸಲಾಗಿದೆ. ಹಬ್ಬದ ಎರಡು ಪ್ರವೇಶ ಕಮಾನು ಹಾಗೂ ವೇದಿಕೆಯ ಹಿಂದಿನ ಪರದೆಗೆ ₹ 32.50 ಲಕ್ಷ ಹಣ ಬಿಲ್ ಮಾಡಲಾಗಿದೆ.

ತಾರತಮ್ಯ ಆರೋಪ: ಇಲಾಖೆಯು ಟೆಂಡರ್ ಕರೆಯದೆ ಸಂಸ್ಥೆಯೊಂದಕ್ಕೆ ಕಾರ್ಯಕ್ರಮ ನಿರ್ವಹಣೆಯ ಅವಕಾಶ ನೀಡಿ, ಹಣ ಪಾವತಿಸಿರುವುದಕ್ಕೂ ಸಾಂಸ್ಕೃತಿಕ ವಲಯದಲ್ಲಿ ಆಕ್ಷೇಪ ವ್ಯಕ್ತವಾಗಿದೆ. ಚಲನಚಿತ್ರ ಗಾಯಕರ ಬ್ಯಾಂಡ್‌ಗಳು ಹಾಗೂ ಜಾನಪದ ಸೇರಿ ವಿವಿಧ ಸಾಂಪ್ರದಾಯಿಕ ಕಲಾ ಪ್ರಕಾರಗಳ ತಂಡಗಳಿಗೆ ಪಾವತಿಸಿದ ಗೌರವಧನದಲ್ಲಿ ತಾರತಮ್ಯ ಮಾಡಲಾಗಿದೆ ಎಂಬ ಆರೋಪವೂ ಕೇಳಿ ಬಂದಿದೆ. ಅನನ್ಯಾ ಭಟ್, ನವೀನ್ ಸಜ್ಜು ಅವರ ಬ್ಯಾಂಡ್ ಹಾಗೂ ರಿಯಾಲಿಟಿ ಶೋಗಳ ಗಾಯಕರಿಗೆ ಒಟ್ಟು ₹ 41.50 ಲಕ್ಷ ಪಾವತಿಸಿದರೆ, ಇಲಾಖೆ ವತಿಯಿಂದ ಎರಡು ದಿನ ಪ್ರದರ್ಶನ ನೀಡಿದ ಕಲಾ ತಂಡಗಳು ಹಾಗೂ ಕಲಾವಿದರಿಗೆ ಒಟ್ಟು ₹ 25 ಲಕ್ಷ ನೀಡಲಾಗಿದೆ.

‘ನಿಯಮಿತವಾಗಿ ಸಾಂಸ್ಕೃತಿಕ ಕಾರ್ಯಕ್ರಮ ನೀಡುತ್ತಿರುವ ಸಂಘ–ಸಂಸ್ಥೆಗಳಿಗೆ ಧನಸಹಾಯ ನೀಡದ ಇಲಾಖೆ, ಬೆಂಗಳೂರು ಹಬ್ಬದ ಹೆಸರಿನಲ್ಲಿ ಕೋಟ್ಯಂತರ ರೂಪಾಯಿ ವೆಚ್ಚ ಮಾಡಿದೆ. ಜಾನಪದ ಸೇರಿ ವಿವಿಧ ಸಾಂಪ್ರದಾಯಿಕ ಕಲೆಗಳನ್ನು ಕಡೆಗಣಿಸಿ, ಚಲನಚಿತ್ರದ ಗಾಯಕರಿಗೆ ಮಣೆ ಹಾಕಲಾಗಿತ್ತು’ ಎಂದು ಕಲಾವಿದ ಜಯಸಿಂಹ ಎಸ್. ಅವರು ಅಸಮಾಧಾನ ವ್ಯಕ್ತಪಡಿಸಿದರು.

ಜಾಲತಾಣ ಅಭಿಯಾನಕ್ಕೆ ₹25 ಲಕ್ಷ

‘ನಮ್ಮ ಬೆಂಗಳೂರು ಹಬ್ಬ’ದ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅಭಿಯಾನ ನಡೆಸಿರುವುದಕ್ಕೆ ₹ 25 ಲಕ್ಷ ಪಾವತಿಸಲಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಹಬ್ಬದ ಒಟ್ಟು 18 ವಿಡಿಯೊ ಪೋಸ್ಟ್ ಮಾಡಲಾಗಿದೆ. 2 ಸಾವಿರ ಆಮಂತ್ರಣ ಪತ್ರಿಕೆಗಳಿಗೆ ₹ 3 ಲಕ್ಷ ಪಾವತಿಸಲಾಗಿದೆ. ಇದೇ ರೀತಿ, ಕನ್ನಡಿ, ವಿದ್ಯುತ್ ದೀಪಗಳು ಸೇರಿ ವಿವಿಧ ವಸ್ತುಗಳು ಹಾಗೂ ಉಪಕರಣಗಳಿಗೆ ಹೆಚ್ಚಿನ ಬಾಡಿಗೆ ಪಾವತಿಸಲಾಗಿದೆ ಎಂದು ಆಕ್ಷೇಪ ವ್ಯಕ್ತವಾಗಿದೆ.

ಕಳೆದ ಸರ್ಕಾರದ ಅವಧಿಯಲ್ಲಿ ನಡೆದ ಬೆಂಗಳೂರು ಹಬ್ಬಕ್ಕೆ ಮಾಡಲಾದ ವೆಚ್ಚದ ಬಗ್ಗೆ ಮಾಹಿತಿಯಿಲ್ಲ. ಏನಾಗಿದೆ ಎಂದು ಪರಿಶೀಲಿಸಲಾಗುವುದು.

ಶಿವರಾಜ್ ತಂಗಡಗಿ,
ಕನ್ನಡ ಮತ್ತು ಸಂಸ್ಕೃತಿ ಸಚಿವ

ಸುದ್ದಿ 2 ನಿಮಿಷ

ಬೈಕ್ ನಿಲುಗಡೆ ವಿಚಾರಕ್ಕೆ ಹಲ್ಲೆ: ನಾಲ್ವರ ಬಂಧನ

ಬೆಂಗಳೂರು: ಬೈಕ್ ನಿಲುಗಡೆ ವಿಚಾರಕ್ಕೆ ನಡೆದ ಗಲಾಟೆಯ ವೇಳೆ ಹಲ್ಲೆ ನಡೆಸಿದ್ದ ನಾಲ್ವರು ಆರೋಪಿಗಳನ್ನು ಬನಶಂಕರಿ ಠಾಣೆ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ರೌಡಿಶೀಟರ್ ಸಂದೀಪ್, ಆತನ ಸ್ನೇಹಿತರಾದ ಶಶಾಂಕ್, ಕಿರಣ್, ಶ್ರೀಧರ್ ಬಂಧಿತರು. ಉಳಿದ ಮೂವರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಪದ್ಮನಾಭ ನಗರದ ರಾಘವೇಂದ್ರ ಕಾಲೊನಿಯಲ್ಲಿ ಈ ಘಟನೆ ನಡೆದಿತ್ತು.

ಪ್ರದೀಪ್ ಎಂಬಾತನ ಮೇಲೆ ಆರೋಪಿಗಳು ಹಲ್ಲೆ ನಡೆಸಿದ್ದರು. ಪ್ರದೀಪ್ ಅವರ ಬೈಕ್ ಪಕ್ಕವೇ ಮತ್ತೊಂದು ಬೈಕ್ ಅನ್ನು ನಿಲುಗಡೆ ಮಾಡಲಾಗಿತ್ತು. ಆಗ ಪ್ರದೀಪ್ ಅವರು ತಾವು ಮನೆಗೆ ತೆರಳಬೇಕು. ಬೈಕ್ ಅನ್ನು ಪಕ್ಕಕ್ಕೆ ತೆಗೆದುಕೊಳ್ಳಬೇಕೆಂದು ಕೋರಿದ್ದರು. ಅಷ್ಟಕ್ಕೆ ಸಿಟ್ಟಿಗೆದ್ದ ಪ್ರತಾಪ್ ಶೆಟ್ಟಿ ಎಂಬಾತ ನಿಂದಿಸಿದ್ದ. ಸ್ನೇಹಿತರನ್ನು ಕರೆಸಿ ಮಾರಕಾಸ್ತ್ರಗಳಿಂದ ಬೆದರಿಸಿ ಹಲ್ಲೆ ನಡೆಸಿದ್ದ. ಹಲ್ಲೆಯ ದೃಶ್ಯಗಳು ಸಿಸಿ ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದವು. ಅದನ್ನು ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಗಾಂಧಿಬಜಾರ್ ರಸ್ತೆ ಸಮಸ್ಯೆಗೆ ಪರಿಹಾರ: ಡಿಸಿಎಂ ಭರವಸೆ

ಬೆಂಗಳೂರು: ಗಾಂಧಿಬಜಾರ್ ರಸ್ತೆಯ ಬಹುದಿನಗಳ ಸಮಸ್ಯೆಯನ್ನು ಬಗೆಹರಿಸುವುದಾಗಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ಗಾಂಧಿಬಜಾರ್ ವರ್ತಕರು ಶಂಕರ್ ಗುಹಾ ನೇತೃತ್ವದಲ್ಲಿ ಮನವಿ ಸಲ್ಲಿಸಿದಾಗ ಡಿ.ಕೆ. ಶಿವಕುಮಾರ್, ‘ಅಧಿಕಾರಿಗಳೊಂದಿಗೆ ಚರ್ಚಿಸಿ ಸಮಸ್ಯೆಯನ್ನು ಆದಷ್ಟು ಬೇಗ ಬಗೆಹರಿಸಲಾಗುವುದು’ ಎಂದು ತಿಳಿಸಿದರು.

ಬೆಂಗಳೂರು ದಕ್ಷಿಣ ವಲಯದ ಬಸವನಗುಡಿಯ ಗಾಂಧಿಬಜಾರ್ ಮುಖ್ಯ ರಸ್ತೆಯ ಪುನರ್ ಅಭಿವೃದ್ಧಿಯ ನೆಪದಲ್ಲಿ ಹಿಂದಿನ ಸರ್ಕಾರದ ಅವಧಿಯಲ್ಲಿ ಅವೈಜ್ಞಾನಿಕವಾಗಿ ಕಾಮಗಾರಿಯನ್ನು ಪ್ರಾರಂಭಿಸಲಾಗಿತ್ತು. ಇದನ್ನು ವಿರೋಧಿಸಿ ಸ್ಥಳೀಯ ನಿವಾಸಿಗಳು, ನೂರಾರು ವ್ಯಾಪಾರಿಗಳು ಅಂಗಡಿಗಳನ್ನು ಮುಚ್ಚಿ ಪ್ರತಿಭಟನೆ ನಡೆಸಿದರೂ ಪ್ರಯೋಜನವಾಗಿರಲಿಲ್ಲ. ಎಲ್ಲ ಕಡೆ ರಸ್ತೆ ಅಗೆದು ಹಾಕಿದ್ದರಿಂದ ವ್ಯಾಪಾರವಿಲ್ಲದಂತಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ ಎಂದರು.

ನಗರದ ಹಲವೆಡೆ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಬುಧವಾರ ರಾತ್ರಿ ಸಾಧಾರಣ ಮಳೆಯಾಗಿದೆ. ದಿನವಿಡೀ ಭಾಗಶಃ ಮೋಡ ಕವಿದ ವಾತಾವರಣವಿತ್ತು. ಸಂಜೆ ವೇಳೆಯಲ್ಲಿ ಅಲ್ಲಲ್ಲಿ ಜಿಟಿಜಿಟಿ ಮಳೆಯಾಯಿತು. ರಾತ್ರಿ 8 ಗಂಟೆ ಸುಮಾರಿಗೆ ಜೋರು ಮಳೆ ಸುರಿದಿದೆ.

ಕೆಂಗೇರಿ, ಕೋರಮಂಗಲ, ಚಾಮರಾಜಪೇಟೆ, ಅಶೋಕನಗರ, ಹಲಸೂರು, ದೊಡ್ಡಬೊಮ್ಮಸಂದ್ರ, ಕೆ.ಆರ್.ಮಾರುಕಟ್ಟೆ, ಚಿಕ್ಕಪೇಟೆ, ಗಾಂಧಿನಗರ, ದೀಪಾಂಜಲಿ ನಗರ, ಕಾಮಾಕ್ಷಿಪಾಳ್ಯ, ಮಲ್ಲೇಶ್ವರ ಭಾಗದಲ್ಲಿ ಮಳೆಯಾಗಿದೆ.

ಪೀಣ್ಯ, ಸುಂಕದಕಟ್ಟೆ, ಬ್ಯಾಡರಹಳ್ಳಿ, ಸುಮನಹಳ್ಳಿ, ಕೊಟ್ಟಿಗೆಪಾಳ್ಯ, ಹೇರೋಹಳ್ಳಿ, ವಿಜಯನಗರದ ಸುತ್ತಮುತ್ತ ಸಾಧಾರಣ ಮಳೆಯಾಗಿದೆ.

ಬೆಂಗಳೂರಿನಲ್ಲಿ ಬುಧವಾರ ಸುರಿದ ಮಳೆಯಲ್ಲಿ ವಾಹನಗಳು ಸಾಗಿದವು – ಪ್ರಜಾವಾಣಿ ಚಿತ್ರ

ಕಾಂಗ್ರೆಸ್‌ನಿಂದ ಸಂತೋಷ್ ನಿಂದನೆ: ಬಿಜೆಪಿ ದೂರು

ಬೆಂಗಳೂರು: ಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರ ಬಗ್ಗೆ ಕಾಂಗ್ರೆಸ್ ಪಕ್ಷ ತನ್ನ ಅಧಿಕೃತ ಫೇಸ್‌ಬುಕ್ ಪೇಜ್‌ನಲ್ಲಿ ಅವಹೇಳನಕಾರಿ ಮತ್ತು ಏಕ ವಚನದಲ್ಲಿ ನಿಂದಿಸಿದೆ ಎಂದು ಬಿಜೆಪಿ ನಿಯೋಗ, ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ದೂರು ನೀಡಿದೆ.

‘ರಾಜಕೀಯದಲ್ಲಿ ಭಿನ್ನಾಭಿಪ್ರಾಯ ಸಹಜ. ಆದರೆ, ದ್ವೇಷದ ಕಾರಣಕ್ಕೆ ಕಾಂಗ್ರೆಸ್ ಪಕ್ಷದ ತೇಜೋವಧೆಗೆ ಮುಂದಾಗಿದೆ. ಸಂತೋಷ್ ವಿರುದ್ಧ ಬಹುತೇಕ ಸಂದರ್ಭಗಳಲ್ಲಿ ಅವರ ಜಾತಿಯನ್ನು ಮುಂದಿಟ್ಟು ಮತ್ತೊಂದು ಜಾತಿಯನ್ನು ಎತ್ತಿಕಟ್ಟಿ ಪದೇ ಪದೇ ಟೀಕಿಸುತ್ತಿದೆ’ ಎಂದು ದೂರಿನಲ್ಲಿ ತಿಳಿಸಿದೆ.

‘ಕಾಂಗ್ರೆಸ್ ಪಕ್ಷದ ಈ ರೋಗಗ್ರಸ್ತ ಮನಸ್ಥಿತಿಯು ಸಮಾಜದಲ್ಲಿ ಅಶಾಂತಿ ಸೃಷ್ಟಿಸಲು ಕಾರಣವಾಗುತ್ತಿದೆ. ಸುಳ್ಳು ಸುದ್ದಿ ಹರಡುವ ಮತ್ತು ಸಮಾಜದಲ್ಲಿ ಅಶಾಂತಿ ಸೃಷ್ಟಿಸುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷ ಮಾಡಿರುವ ಸಾಮಾಜಿಕ ಜಾಲತಾಣದ ಸುಳ್ಳು ಸಂಗತಿಗಳ ವಿವರವನ್ನು ನಿಮ್ಮ ಗಮನಕ್ಕೆ ತಂದಿದ್ದೇವೆ. ಕ್ರಮ ತೆಗೆದುಕೊಳ್ಳಬೇಕು’ ಎಂದಿದೆ.

‘ಕಾಂಗ್ರೆಸ್‌ನ ಮತ್ತೊಂದು ಟ್ವೀಟ್‌ನಲ್ಲಿ ಬರ ಪರಿಹಾರದಲ್ಲೂ, ನೆರೆ ಪರಿಹಾರದಲ್ಲೂ, ಜಿಎಸ್‌ಟಿ ಹಂಚಿಕೆಯಲ್ಲೂ ಮೋದಿ ಮೋಸ... ಹೀಗೆ ಸುಳ್ಳು ಮಾಹಿತಿಗಳನ್ನು ಹಬ್ಬಿಸುತ್ತಿದೆ’ ಎಂದು ದೂರಿದೆ.

ಶಾಸಕ ರವಿಸುಬ್ರಹ್ಮಣ್ಯ, ವಿಧಾನಪರಿಷತ್ ಸದಸ್ಯರಾದ ಎನ್.ರವಿಕುಮಾರ್, ಛಲವಾದಿ ನಾರಾಯಣಸ್ವಾಮಿ, ತೇಜಸ್ವಿನಿಗೌಡ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿದ್ದರಾಜು ನಿಯೋಗದಲ್ಲಿದ್ದರು.

ಪೊಲೀಸ್ ಠಾಣೆಗೆ ಭೇಟಿ ನೀಡಲು ಸೂಚನೆ

ಅಲೋಕ್ ಮೋಹನ್

ಬೆಂಗಳೂರು: ರಾಜ್ಯದ ಎಲ್ಲ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಬೆಂಗಳೂರು ವ್ಯಾಪ್ತಿಯ ಡಿಸಿಪಿಗಳು ಪ್ರತಿನಿತ್ಯ ತಮ್ಮ ವ್ಯಾಪ್ತಿಯ ಒಂದು ಪೊಲೀಸ್ ಠಾಣೆಗೆ ಭೇಟಿ ನೀಡಿ ಪರಿಶೀಲಿಸಬೇಕು ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಅಲೋಕ್ ಮೋಹನ್ ಸೂಚಿಸಿದ್ದಾರೆ.

‘ತಮ್ಮ ವ್ಯಾಪ್ತಿಗೆ ವಿವಿಐಪಿಗಳ ಭೇಟಿ ನೀಡುವ ದಿನಗಳನ್ನು ಹೊರತುಪಡಿಸಿ ಎಲ್ಲ ದಿನಗಳಲ್ಲೂ ಈ ಕರ್ತವ್ಯ ಮುಂದುವರಿಸಬೇಕು. ಠಾಣೆಗಳಲ್ಲಿ ಕರ್ತವ್ಯ ನಿರ್ವಹಣೆ ಪರಿಶೀಲಿಸಬೇಕು. ಪೊಲೀಸ್ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಳ್ಳಬೇಕು. ಹೆಡ್ ಕಾನ್‌ಸ್ಟೆಬಲ್, ಕಾನ್‌ಸ್ಟೆಬಲ್, ಠಾಣೆಗೆ ಬಂದವರನ್ನೂ ಮಾತನಾಡಿಸಬೇಕು’ ಎಂದರು.

‘ವಾರಕ್ಕೊಮ್ಮೆ ಡಿಸಿಪಿ ಹಾಗೂ ಎಸ್‌ಪಿಗಳು ತಮ್ಮ ವ್ಯಾಪ್ತಿಯಲ್ಲಿ ದಿಢೀರ್ ರಾತ್ರಿ ಸಂಚಾರ ನಡೆಸಬೇಕು. ರಾತ್ರಿಪಾಳಿ ಕರ್ತವ್ಯ ನಿರ್ವಹಣೆ ಹಾಗೂ ಇ–ಬೀಟ್ ಪದ್ಧತಿಯನ್ನು ಪರಿಶೀಲಿಸಬೇಕು’ ಎಂದು ಆದೇಶಿಸಿದ್ದಾರೆ.

ಅತ್ಯಾಚಾರ: ಇಬ್ಬರು ಪೊಲೀಸರ ಅಮಾನತು

ಬಿಕಾನೇರ್(ಪಿಟಿಐ): ರಾಜಸ್ಥಾನದ ಬಿಕಾನೇರ್ ಜಿಲ್ಲೆಯಲ್ಲಿ 20 ವರ್ಷದ ದಲಿತ ಮಹಿಳೆಯನ್ನು ಮೂವರು ಸಾಮೂಹಿಕ ಅತ್ಯಾಚಾರಗೈದು ಹತ್ಯೆ ಮಾಡಿದ್ದಾರೆ. ಘಟನೆಯಲ್ಲಿ ಇಬ್ಬರು ಪೊಲೀಸರೂ ಸೇರಿದ್ದಾರೆ ಎನ್ನಲಾಗಿದ್ದು ಅವರನ್ನು ಅಮಾನತುಗೊಳಿಸಲಾಗಿದೆ.

ಕಾಮಗಾರಿ ಪರಿಶೀಲಿಸದೇ ಬಿಲ್ ಪಾವತಿಸುವುದಿಲ್ಲ– ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯಲ್ಲಿ ಇತ್ತೀಚಿನ ಕೆಲವು ತಿಂಗಳುಗಳಲ್ಲಿ ಮಂಜೂರಾತಿ ನೀಡಿದ ಕಾಮಗಾರಿಗಳನ್ನು ಸಂಪೂರ್ಣವಾಗಿ ಪರಿಶೀಲಿಸುವವರೆಗೆ ಬಿಲ್‌ಗಳನ್ನು ಪಾವತಿಸುವುದಿಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಪ್ರತಿಕ್ರಿಯಿಸಿದ ಅವರು, ‘ಬಿಜೆಪಿ ಸರ್ಕಾರ ತರಾತುರಿಯಲ್ಲಿ ಮಂಜೂರು ಮಾಡುವ ಕಾಮಗಾರಿಗಳ ಗುತ್ತಿಗೆ ವಹಿಸಿಕೊಂಡರೆ ತೊಂದರೆ ಎದುರಿಸಬೇಕಾಗುತ್ತದೆ ಎಂದು ಚುನಾವಣೆಗೂ ಆರು ತಿಂಗಳ ಮೊದಲು ನಾನು ಸ್ಪಷ್ಟವಾಗಿ ಹೇಳಿದ್ದೆ. ಬಿಜೆಪಿ ನಾಯಕರು ಎಷ್ಟು ಜೋರಾಗಿ ಬೇಕಿದ್ದರೂ ಟೀಕೆ ಮಾಡಲಿ. ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ, ಅಂದಾಜು ಪಟ್ಟಿ ಮತ್ತು ಭೌತಿಕ ಪ್ರಗತಿ ಕುರಿತು ಸಮಗ್ರ ಪರಿಶೀಲನೆ ಆಗದೆ ಬಿಲ್ ಪಾವತಿಸಲು ಅವಕಶ ನೀಡುವುದಿಲ್ಲ’ ಎಂದರು.

‘ನಾನು ಬಿಜೆಪಿಯವರ ಸಲಹೆಯನ್ನೇ ಕೇಳುತ್ತಿದ್ದೇನೆ. ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಾಮಗಾರಿ ನಡೆಸದೇ ₹ 123 ಕೋಟಿ ಬಿಲ್ ಪಾವತಿಸಿರುವುದನ್ನು ಲೋಕಾಯುಕ್ತರು ಪತ್ತೆಹಚ್ಚಿದ್ದಾರೆ. ಬಿಡಿಎನಲ್ಲಿ ನಡೆದಿರುವ ಅಕ್ರಮಗಳ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಬೇಕಾದ ಪರಿಸ್ಥಿತಿ ಇದೆ. ಬಿಬಿಎಂಪಿಯಲ್ಲೂ ಅದೇ ಆಗಲಿದೆ. ಈ ಎಲ್ಲದರ ಬಗ್ಗೆಯೂ ಚರ್ಚೆ ಮಾಡೋಣ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಎಲ್ಲರ ವಿರುದ್ಧವೂ ಕ್ರಮ: ‘ಒತ್ತುವರಿ ತೆರವು ವಿಚಾರದಲ್ಲಿ ತಾರತಮ್ಯಕ್ಕೆ ಅವಕಾಶ ಇಲ್ಲ. ಬಡ ಜನ ಮಾಡಿದ್ದ ಒತ್ತುವರಿಗಳನ್ನು ಮಾತ್ರ ತೆರವು ಮಾಡಲಾಗುತ್ತಿದೆ ಎಂದು ಮಾಧ್ಯಮಗಳಲ್ಲಿ ನನ್ನ ವಿರುದ್ಧ ವಾಗ್ದಾಳಿ ನಡೆದಿತ್ತು. ಮಂಗಳವಾರ ಹೇಗೆ ಕಾರ್ಯಾಚರಣೆ ನಡೆದಿದೆ ಎಂಬುದನ್ನು ಎಲ್ಲರೂ ನೋಡಿದ್ದಾರೆ. ನಾನು ಸ್ಥಳಕ್ಕೆ ಹೋಗಿ ಗುರುತು ಮಾಡಲಿಲ್ಲ. ಕಂದಾಯ ಇಲಾಖೆ ಅಧಿಕಾರಿಗಳು ಮಾಡುತ್ತಾರೆ. ಅವರಿಗೆ ಸಂಪೂರ್ಣ ಅಧಿಕಾರ ನೀಡಲಾಗಿದೆ’ ಎಂದು ಶಿವಕುಮಾರ್ ಹೇಳಿದರು.

‘ಬೆಂಗಳೂರಿನಲ್ಲಿ ಕೇಬಲ್‌ಗಳ ಹಾವಳಿ ಮಿತಿ ಮೀರಿದೆ. ಹಿಂದೆ ಇಂಧನ ಸಚಿವನಾಗಿದ್ದ ಅವಧಿಯಲ್ಲೇ ಕೇಬಲ್‌ಗಳನ್ನು ತೆರವುಗೊಳಿಸುವ ಪ್ರಯತ್ನ ಮಾಡಿದ್ದೆ. ಈಗ ಮಾಧ್ಯಮಗಳು ಸಹಕಾರ ನೀಡಿದರೆ ಕೇಬಲ್ ತೆರವು ಮಾಡಲು ಸಿದ್ಧ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪುತ್ರ, ಸೊಸೆಯಿಂದ ಮಾನಸಿಕ ಕಿರುಕುಳ: ನಟಿ ಶ್ಯಾಮಲಾದೇವಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರ್ದೇಶಕ ಸಿದ್ದಲಿಂಗಯ್ಯ ಅವರ ಪತ್ನಿ, ನಟಿ ಶ್ಯಾಮಲಾದೇವಿ ಅವರು ಪುತ್ರ ಹಾಗೂ ಸೊಸೆಯ ವಿರುದ್ಧ ಬಸವನಗುಡಿ ಮಹಿಳಾ ಠಾಣೆಗೆ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿದೆ.

ಪುತ್ರ ನಿತಿನ್ ಹಾಗೂ ಸೊಸೆ ಸುಶ್ಮಿತಾ ಅವರು ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ‘ದೈಹಿಕವಾಗಿ ಹಲ್ಲೆ ನಡೆಸಿರುವ ಕುರಿತು ದೂರಿನಲ್ಲಿ ತಿಳಿಸಿದ್ದಾರೆ. ಆಸ್ತಿ ವಿಚಾರಕ್ಕೆ ಕಿರುಕುಳ ನೀಡುತ್ತಿದ್ದಾರೆಂದು ಹೇಳಿದ್ದು, ತನಿಖೆ ನಡೆಸಲಾಗುವುದು’ ಎಂದು ಪೊಲೀಸರು ಹೇಳಿದರು.

‘ಪುತ್ರನ ಮದುವೆ ಆಗುವವರೆಗೆ ಎಲ್ಲವೂ ಚೆನ್ನಾಗಿತ್ತು. ಪೊಲೀಸ್ ಅಧಿಕಾರಿಯೊಬ್ಬರ ಪುತ್ರಿಯೊಂದಿಗೆ ಮದುವೆ ಮಾಡಿದ್ದೆ. ಅದಾದ ಮೇಲೆ ಕಿರುಕುಳ ನೀಡಲು ಆರಂಭಿಸಿದ. ಮನೆಯನ್ನು ತಮ್ಮ ಹೆಸರಿಗೆ ಬರೆದು ಕೊಡುವಂತೆ ಒತ್ತಾಯಿಸುತ್ತಿದ್ದಾರೆ’ ಎಂದು ದೂರಿನಲ್ಲಿ ಹೇಳಿದ್ದಾರೆ.

‘ಪತ್ನಿಗೆ ಹೇಳಿ ವರದಕ್ಷಿಣೆ ಕಿರುಕುಳ ದೂರು ದಾಖಲಿಸುತ್ತೇನೆ ಎಂದು ಪುತ್ರ ಬೆದರಿಸುತ್ತಾನೆ. ಆಕೆಯೂ ಹಲ್ಲೆ ನಡೆಸಿ, ಅವ್ಯಾಚ್ಯ ಶಬ್ದಗಳಿಂದ ನಿಂದಿಸುತ್ತಾನೆ’ ಎಂದು ನಟಿ ಅಳಲು ತೋಡಿಕೊಂಡಿದ್ದಾರೆ.

‘ಹಿರಿಯ ನಾಗರಿಕರ ವೇದಿಕೆಗೆ ದೂರು ನೀಡಿದ್ದೆ. ಆಗ ಪುತ್ರ ಕ್ಷಮೆ ಕೇಳಿದ್ದ. ಮತ್ತೆ ಅದೇ ರೀತಿ ವರ್ತನೆ ಮುಂದವರಿದಿದೆ. ನನಗೆ ನ್ಯಾಯ ಕಲ್ಪಿಸಿ‘ ಎಂದು ಕೋರಿದ್ದಾರೆ. ಪೊಲೀಸ್ ಆಯುಕ್ತರಿಗೂ ಮನವಿ ಸಲ್ಲಿಸಿದ್ದಾರೆ.

ಬೀಗ ಒಡೆದು ಚರ್ಚ್‌ನಲ್ಲಿ ದಾಂದಲೆ

ಹೂವಿನ ಕುಂಡ, ವಿವಿಧ ವಸ್ತುಗಳಿಗೆ ಹಾನಿ: ಆರೋಪಿ ಮಾನಸಿಕ ಅಸ್ವಸ್ಥ?

ಪ್ರಜಾವಾಣಿ ವಾರ್ತೆ

ಟಾಮ್ ಮ್ಯಾಥ್ಯು

ಬೆಂಗಳೂರು: ಬಾಣಸವಾಡಿ ಪೊಲೀಸ್ ಠಾಣಾ ವ್ಯಾಪ್ತಿಯ ಕಮ್ಮನಹಳ್ಳಿ ಸಂತ ಹತ್ತನೇ ಭಕ್ತಿನಾಥ ಚರ್ಚ್‌ನ ಮುಖ್ಯದ್ವಾರದ ಬಾಗಿಲಿಗೆ ಹಾಕಿದ್ದ ಬೀಗವನ್ನು ಸುತ್ತಿಗೆಯಿಂದ ಒಡೆದು ಒಳನುಗ್ಗಿದ ಆರೋಪಿಯೊಬ್ಬ ಬಲಿಪೀಠ (ಗರ್ಭಗುಡಿ), ವಚನಾಸ್ತಂಭ, ಮೇಣದ ಬತ್ತಿ ಹಾಗೂ ಹೂವಿನ ಕುಂಡಗಳನ್ನು ಧ್ವಂಸಗೊಳಿಸಿದ್ದಾನೆ.

ಬುಧವಾರ ಬೆಳಿಗ್ಗೆ 4ರ ಸುಮಾರಿಗೆ ಈ ಘಟನೆ ನಡೆದಿದ್ದು ಕೆಲವೇ ಗಂಟೆಗಳಲ್ಲಿ ಕಮ್ಮನಹಳ್ಳಿಯ ಟಾಮ್ ಮ್ಯಾಥ್ಯು (28) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

‘ಇದೊಂದು ಸೂಕ್ಷ್ಮ ವಿಷಯವಾಗಿದ್ದು ಮಾಹಿತಿ ತಿಳಿದ ಕೆಲವೇ ಕ್ಷಣಗಳಲ್ಲಿ ಆರೋಪಿಯನ್ನು ವಶಕ್ಕೆ ಪಡೆದುಕೊಳ್ಳಲಾಯಿತು. ಈತ ಕಳೆದ 20 ವರ್ಷದಿಂದ ಕಮ್ಮನಹಳ್ಳಿ ಭಾಗದಲ್ಲಿ ನೆಲೆಸಿದ್ದ. ನಾಲ್ಕು ವರ್ಷದಿಂದ ಹಿಂದೆ ಈತನ ತಂದೆ ಮನೆ ಬಿಟ್ಟು ಹೋಗಿದ್ದರು. ಆ ವಿಷಯವನ್ನು ಆರೋಪಿ ಭಾವನಾತ್ಮಕವಾಗಿ ಹಂಚಿಕೊಂಡು ದುಃಖಿತನಾಗಿದ್ದ. ಅದೇ ಕೊರಗಿನಲ್ಲಿದ್ದ. ಆತನ ತಾಯಿ ಇದೇ ಚರ್ಚ್‌ಗೆ ಬಂದು ನಿತ್ಯ ಪ್ರಾರ್ಥನೆ ಸಲ್ಲಿಸುತ್ತಿದ್ದರು. ತಾಯಿ ಎದುರು ‘ನಾನೇ ದೇವರು..’ ಎಂದು ಹೇಳಿಕೊಳ್ಳುತ್ತಿದ್ದ. ವಾಸ ಮಾಡುತ್ತಿದ್ದ ಕೊಠಡಿಯಲ್ಲೂ ಮದ್ಯದ ಬಾಟಲಿಗಳು ದೊರೆತಿವೆ. ಆರೋಪಿಯನ್ನು ವಶಕ್ಕೆ ಪಡೆದು ಎಸಿಪಿ ನೇತೃತ್ವದ ತಂಡವು ವಿಚಾರಣೆ ನಡೆಸುತ್ತಿದೆ’ ಎಂದು ಪೂರ್ವ ವಿಭಾಗದ ಡಿಸಿಪಿ ಭೀಮಾ ಶಂಕರ್ ಗುಳೇದ ತಿಳಿಸಿದ್ದಾರೆ.

‘ಮೇಲ್ನೋಟಕ್ಕೆ ಈತ ಮಾನಸಿಕ ಅಸ್ವಸ್ಥ ಸ್ಥಿತಿಯಲ್ಲಿರುವುದು ಕಂಡುಬಂದಿದೆ. ಈತನನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ವರದಿ ಬಂದ ಬಳಿಕ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿದರು.

ಪ್ರೇಮ ವೈಫಲ್ಯ ಕಾರಣವೇ?: ‘ಪೊಲೀಸರು ವಿಚಾರಣೆ ವೇಳೆಯೂ ನಾನೇ ದೇವರು ಎಂದು ಹೇಳಿಕೊಂಡು ವಿಚಿತ್ರವಾಗಿ ವರ್ತಿಸಿದ್ದಾನೆ. ಕೆಲವು ವರ್ಷಗಳ ಹಿಂದೆ ಈತ ವಿದೇಶದಲ್ಲೂ ನೆಲೆಸಿದ್ದ. ಅಲ್ಲಿಂದ ವಾಪಸ್ಸಾದ ಮೇಲೆ ಯುವತಿಯನ್ನು ಪ್ರೀತಿಸುತ್ತಿದ್ದ. ಆಕೆ ದೂರವಾದ ಮೇಲೆ ಪ್ರೇಮ ವೈಫಲ್ಯದಿಂದಲೂ ಮಾನಸಿಕವಾಗಿ ಕುಗ್ಗಿದ್ದ’ ಎಂದು ಮೂಲಗಳು ಹೇಳಿವೆ.

‘ಪವಿತ್ರ ಸ್ಥಳವಾದ ಚರ್ಚ್‌ನಲ್ಲಿ ನಡೆದ ಕೃತ್ಯದಿಂದ ಭಕ್ತರು ನೊಂದಿದ್ದಾರೆ. ಇಂತಹ ಸವಾಲಿನ ಸಮಯದಲ್ಲಿ ಸಮುದಾಯವು ಚರ್ಚ್‌ನೊಂದಿಗೆ ನಿಲ್ಲಬೇಕು. ಹಿಂದಿನ ಸ್ಥಿತಿಗೆ ತರಲು ಎಲ್ಲರೂ ಕಾರ್ಯ ಪ್ರವೃತ್ತರಾಗಬೇಕು’ ಎಂದು ಧರ್ಮಗುರು ರೆವರೆಂಡ್ ಎಲ್. ಜಯಕರನ್ ಅವರು ಕೋರಿದ್ದಾರೆ.

ಮರ ಕಡಿದ ಆರೋಪ: ಡಿಸಿಎಫ್ ಅಮಾನತು

ಬೆಂಗಳೂರು: ಕೋಟ್ಯಂತರ ರೂಪಾಯಿ ಮೌಲ್ಯದ ಸಾಗುವಾನಿ ಮರಗಳನ್ನು ಕಾನೂನುಬಾಹಿರವಾಗಿ ಕಡಿದ ಆರೋಪದಲ್ಲಿ ವಿರಾಜಪೇಟೆ ಉಪ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದ (ಡಿಸಿಎಫ್), ಸದ್ಯ ಬೆಂಗಳೂರು ನಗರ ವಿಭಾಗದಲ್ಲಿ ಕರ್ತವ್ಯ ಸಲ್ಲಿಸುತ್ತಿರುವ ವೈ. ಚಕ್ರಪಾಣಿ ಅವರನ್ನು ರಾಜ್ಯ ಸರ್ಕಾರ ಅಮಾನತುಗೊಳಿಸಿದೆ.

ವಿರಾಜಪೇಟೆ ತಾಲ್ಲೂಕಿನ ಕುಟ್ಟ ಗ್ರಾಮದಲ್ಲಿರುವ ಎಂ.ಎನ್. ರಮೇಶ್ ಅವರ ಜಮೀನಿನಲ್ಲಿದ್ದ ಸಾಗುವಾನಿ ಮರಗಳನ್ನು ಕಡಿದ ಪ್ರಕರಣದಲ್ಲಿ ಕೆಲವು ಅಧಿಕಾರಿಗಳ ಜೊತೆ ಐಎಫ್‌ಎಸ್ ಅಧಿಕಾರಿಯಾಗಿರುವ ಚಕ್ರಪಾಣಿ ಕೂಡಾ ಭಾಗಿಯಾಗಿರುವುದು ಮೇಲ್ನೋಟಕ್ಕೆ ದೃಢಪಟ್ಟಿದೆ ಎಂದು ಅಮಾನತು ಆದೇಶದಲ್ಲಿ ವಿವರಿಸಲಾಗಿದೆ.

ತಮ್ಮ ಕಾಫಿ ಎಸ್ಟೇಟ್‌ನಲ್ಲಿದ್ದ, ಸರ್ಕಾರಕ್ಕೆ ಸೇರಿದ ಆರು ಮರಗಳನ್ನು ಕಡಿಯಲು ಅನುಮತಿ ನೀಡುವಂತೆ ರಮೇಶ್ ಅವರು ಅರಣ್ಯ ಇಲಾಖೆಗೆ ಮನವಿ ಸಲ್ಲಿಸಿದ್ದರು. ಆದರೆ, ಎಸ್ಟೇಟ್ ಮಾಲೀಕರ ನಕಲಿ ಸಹಿ ಮಾಡಿ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ಮತ್ತು ವಯನಾಡ್ ವನ್ಯಜೀವಿ ಅಭಯಾರಣ್ಯದಿಂದ ಕೇವಲ 10 ಮೀಟರ್ ದೂರದಲ್ಲಿ ಸರ್ಕಾರ ಭೂಮಿ ಅತಿಕ್ರಮಿಸಿದ ಪ್ರದೇಶದಲ್ಲಿದ್ದ ಬೃಹತ್ ಗಾತ್ರದ 66 ಮರಗಳನ್ನು ಕಡಿಯಲು ಅನುಮತಿ ಕೋರಿದ ಕಡತವನ್ನು ಸೃಷ್ಟಿಸಲಾಗಿತ್ತು. ಕಂದಾಯ ಮತ್ತು ಅರಣ್ಯ ಇಲಾಖೆಯ ಜಂಟಿ ಸಮೀಕ್ಷೆಯ ವರದಿ ಇಲ್ಲದೆ, ತಹಶೀಲ್ದಾರ್ ನೀಡಿದ್ದ ಬೋಗಸ್ ವರದಿಯ ಆಧರಿಸಿ ಮತ್ತು ಸ್ಥಳ ಪರಿಶೀಲನೆ ನಡೆಸದೆ ಮರಗಳನ್ನು ಕಡಿಯಲು ಚಕ್ರಪಾಣಿ ಅವರು ಅನುಮತಿ ನೀಡಿದ್ದರು ಎಂದು ಆರೋಪಿಸಲಾಗಿದೆ.

ಆರೋಪಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಜಾಗೃತ ದಳ) ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದರು.

ಅಪರಾಧ ಸುದ್ದಿ

ವ್ಯಕ್ತಿ ಆತ್ಮಹತ್ಯೆ

ಬೆಂಗಳೂರು: ನಗರದ ಮುದ್ದಿನ ಪಾಳ್ಯದಲ್ಲಿ ನೆಲೆಸಿದ್ದ ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರದ ನಾಗೇಶ್(30) ಬುಧವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಎಂ.ಜಿ.ರಸ್ತೆಲ್ಲಿರುವ ಲೈವ್‌ಬ್ಯಾಂಡ್‌ನಲ್ಲಿ ಪಾಲುದಾರರಾಗಿದ್ದ ನಾಗೇಶ್, ಪತ್ನಿ ಮತ್ತು ನಾಲ್ಕು ವರ್ಷದ ಮಗುವಿನ ಜತೆ ಮುದ್ದಿನಪಾಳ್ಯದಲ್ಲಿ ವಾಸವಾಗಿದ್ದರು. ತಮ್ಮ ಮನೆಯ ಕೊಠಡಿಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಘಟನೆಗೆ ಕಾರಣ ತಿಳಿದು ಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಅನ್ನಪೂರ್ಣೇಶ್ವರಿನಗರ ಪೊಲೀಸ್ ಠಾಣೆ ಪ್ರಕರಣ ದಾಖಲಾಗಿದೆ.

ವಿದ್ಯುತ್ ದರ ಏರಿಕೆ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ವಿದ್ಯುತ್ ದರ ಏರಿಕೆ ಖಂಡಿಸಿ ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಯಿತು.

ಬೆಂಗಳೂರು: ವಿದ್ಯುತ್ ದರ ಏರಿಕೆ ಖಂಡಿಸಿ ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಪಕ್ಷದ ಉತ್ತರ ವಲಯದ ಜಿಲ್ಲಾ ಕಾರ್ಯದರ್ಶಿ ವಿ.ಜ್ಞಾನಮೂರ್ತಿ ಮಾತನಾಡಿ, ಬೆಸ್ಕಾಂ ಸೇರಿದಂತೆ ಎಲ್ಲ ಎಸ್ಕಾಂಗಳಲ್ಲೂ ವಿದ್ಯುತ್ ದರ ಏರಿಕೆ ಮಾಡಲಾಗಿದೆ. ಮೊದಲೇ ಜನರು ಸಂಕಷ್ಟದಲ್ಲಿದ್ದರು. ಈ ದರ ಏರಿಕೆಯು ಮತ್ತಷ್ಟು ಸಂಕಷ್ಟಕ್ಕೆ ತಳ್ಳಲಿದೆ ಎಂದು ದೂರಿದರು.

ಅತಿಯಾಗಿ ದರ ಏರಿಕೆ ಮಾಡಿರುವುದು ಜನರನ್ನು ಸಂಕಷ್ಟಕ್ಕೆ ಸಿಲುಕಿಸಲಿದೆ. ವಿದ್ಯುತ್ ದರ ಏರಿಕೆಯನ್ನು ಹಿಂಪಡೆಯಬೇಕು ಎಂದು ದಕ್ಷಿಣ ವಲಯದ ಜಿಲ್ಲಾ ಕಾರ್ಯದರ್ಶಿ ಎಂ.ಎನ್.ಶ್ರೀರಾಮ್ ಆಗ್ರಹಿಸಿದರು. ಜಿಲ್ಲಾ ಸಮಿತಿಯ ಸದಸ್ಯರಾದ ಕೃಷ್ಣ ಇದ್ದರು.

ಪೊಲೀಸ್ ದೂರು ಪ್ರಾಧಿಕಾರಕ್ಕೆ ನೇಮಕ: ಅಂತಿಮ ಗಡುವು

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯ ಪೊಲೀಸ್ ದೂರು ಪ್ರಾಧಿಕಾರಕ್ಕೆ ಅಧ್ಯಕ್ಷ ಮತ್ತು ಇಬ್ಬರು ಸದಸ್ಯರನ್ನು ನೇಮಕ ಮಾಡುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳ ಅಂತಿಮ ವರದಿ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಅಂತಿಮವಾಗಿ ಮೂರು ವಾರಗಳ ಗಡುವು ನೀಡಿದೆ.

ಈ ಕುರಿತಂತೆ ವಕೀಲೆ ಸುಧಾ ಕಾಟ್ವಾ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, ‘ಪ್ರಾಧಿಕಾರಕ್ಕೆ ಅಧ್ಯಕ್ಷ ಮತ್ತು ಸದಸ್ಯರನ್ನು ನೇಮಕ ಮಾಡುವ ಸಂಬಂಧ 2023ರ ಮಾರ್ಚ್ 31ರಂದು ಸರ್ಕಾರ ನ್ಯಾಯಪೀಠಕ್ಕೆ ನೀಡಿರುವ ಹೇಳಿಕೆಯಂತೆ ಮುಂದಿನ ಕ್ರಮ ಕೈಗೊಳ್ಳಲು ಮೂರು ವಾರಗಳ ಕಾಲಾವಕಾಶ ನೀಡಬೇಕು‘ ಎಂದು ಮನವಿ ಮಾಡಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಅಂತಿಮವಾಗಿ ಮೂರು ವಾರಗಳ ಕಾಲಾವಕಾಶ ನೀಡಿ ವಿಚಾರಣೆ ಮುಂದೂಡಿತು. ಅರ್ಜಿದಾರರ ಪರ ವಕೀಲ ಎಸ್. ಉಮಾಪತಿ ವಾದ ಮಂಡಿಸಿದರು.

ಸರ್ಕಾರ ಏನು ಹೇಳಿತ್ತು?: ‘ರಾಜ್ಯ ಪೊಲೀಸ್ ದೂರು ಪ್ರಾಧಿಕಾರದ ಅಧ್ಯಕ್ಷ ಸ್ಥಾನಕ್ಕೆ ಮೂವರ ಹೆಸರಗಳಿದ್ದು ಅವರಲ್ಲಿ ಅಂತಿಮವಾಗಿ ಒಬ್ಬರನ್ನು ಆಯ್ಕೆ ಮಾಡಬೇಕಿದೆ. ಅಂತೆಯೇ, ಸದಸ್ಯ ಸ್ಥಾನಕ್ಕೆ 19 ಅರ್ಜಿ ಸಲ್ಲಿಕೆಯಾಗಿವೆ. ಆದರೆ, ರಾಜ್ಯ ವಿಧಾನಸಭೆ ಚುನಾವಣೆಗೆ ವೇಳಾಪಟ್ಟಿ ಘೋಷಣೆ ಆದ ಕಾರಣ ನೇಮಕಾತಿ ಪ್ರಕ್ರಿಯೆಗೆ ಒಂದಿಷ್ಟು ಕಾಲಾವಕಾಶ ಬೇಕು‘ ಎಂದು ರಾಜ್ಯ ಸರ್ಕಾರ 2023ರ ಮಾರ್ಚ್ 31 ರಂದು ಹೈಕೋರ್ಟ್‌ಗೆ ಮನವಿ ಮಾಡಿತ್ತು. ಇದನ್ನು ಮಾನ್ಯ ಮಾಡಿದ್ದ ಕೋರ್ಟ್ ಕಾಲಾವಕಾಶ ನೀಡಿತ್ತು.`

ಪಿಎಸ್‌ಐ ಅಕ್ರಮ: ಆದೇಶ ಹೊರಡಿಸಿದ ಡಿಜಿಪಿ ಕಮಲ್ ಪಂತ್

52 ಅಭ್ಯರ್ಥಿಗಳು ಶಾಶ್ವತ ಡಿಬಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 545 ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಸಿವಿಲ್) ಹುದ್ದೆಗಳ ಭರ್ತಿಗೆ 2021ರಲ್ಲಿ ನಡೆದಿದ್ದ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಯಲ್ಲಿ ಅಕ್ರಮ ಎಸಗಿ ಬಂಧನಕ್ಕೆ ಒಳಗಾಗಿರುವ 52 ಅಭ್ಯರ್ಥಿಗಳನ್ನು ಪೊಲೀಸ್ ಇಲಾಖೆ ನಡೆಸುವ ಎಲ್ಲ ಪರೀಕ್ಷೆಗಳಲ್ಲಿ ಭಾಗವಹಿಸದಂತೆ ಶಾಶ್ವತವಾಗಿ ಡಿಬಾರ್‌ಗೊಳಿಸಿ ನೇಮಕಾತಿ ವಿಭಾಗವು ಆದೇಶಿಸಿದೆ. ನೇಮಕಾತಿ ವಿಭಾಗದ ಡಿಜಿಪಿ ಕಮಲ್ ಪಂತ್ ಈ ಆದೇಶ ಹೊರಡಿಸಿದ್ದಾರೆ.

ಪಿಎಸ್‌ಐ ನೇಮಕಾತಿಗೆ ರಾಜ್ಯದ 7 ಜಿಲ್ಲೆಗಳ ಕೇಂದ್ರಗಳಲ್ಲಿ ಲಿಖಿತ ಪರೀಕ್ಷೆ ನಡೆಸಲಾಗಿತ್ತು. ಲಿಖಿತ ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ ಎಂಬ ದೂರು ಬಂದಿದ್ದರಿಂದ ಹಿಂದಿನ ಸರ್ಕಾರವು ಸಿಐಡಿ ತನಿಖೆಗೆ ಆದೇಶಿಸಿತ್ತು.

ಅಕ್ರಮದಲ್ಲಿ ಭಾಗಿಯಾದ ಆರೋಪದ ಮೇಲೆ ಸಿಐಡಿ ಅಧಿಕಾರಿಗಳು ಅಂದಿನ ನೇಮಕಾತಿ ವಿಭಾಗದ ಎಡಿಜಿಪಿ ಅಮ್ರಿತ್ ಪೌಲ್, ಹಲವು ಪೊಲೀಸ್ ಅಧಿಕಾರಿಗಳು ಹಾಗೂ ಅಭ್ಯರ್ಥಿಗಳನ್ನು ಬಂಧಿಸಿದ್ದರು.

ಪರೀಕ್ಷೆ ತೆಗೆದುಕೊಂಡಿದ್ದ 52 ಅಭ್ಯರ್ಥಿಗಳ ವಿರುದ್ಧ ಬೆಂಗಳೂರು ನಗರ, ಕಲಬುರಗಿ, ಹುಬ್ಬಳ್ಳಿ–ಧಾರವಾಡ, ತುಮಕೂರು ನಗರದ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದವು. ಆ ಅಭ್ಯರ್ಥಿಗಳನ್ನು ಡಿಬಾರ್ ಮಾಡಲಾಗಿದೆ. ಲಿಖಿತ ಪರೀಕ್ಷೆ ಪತ್ರಿಕೆ–1 ಬರೆಯುವಾಗ ಬ್ಲೂಟೂತ್ ಹಾಗೂ ಎಲೆಕ್ಟ್ರಾನಿಕ್ ಉಪಕರಣ ಬಳಸಿ ಅಕ್ರಮ ಎಸಗಿದ್ದರು. ಕೆಲವರು ಅಕ್ರಮ ಮಾರ್ಗದಿಂದ ಉತ್ತರ ಪತ್ರಿಕೆಯನ್ನೇ ತಿದ್ದುಪಡಿ ಮಾಡಿಸಿದ್ದನ್ನು ಸಿಐಡಿ ತನಿಖಾಧಿಕಾರಿಗಳು ಪತ್ತೆ ಮಾಡಿದ್ದರು. ಎಲ್ಲ ಅಭ್ಯರ್ಥಿಗಳಿಗೂ ನೋಟಿಸ್ ನೀಡಿ ವಿಚಾರಣೆ ಸಹ ನಡೆಸಲಾಗಿತ್ತು.

1977ರ ಕರ್ನಾಟಕ ನಾಗರಿಕ ಸೇವೆಗಳ (ಸಾಮಾನ್ಯ ನೇಮಕಾತಿ –ತಿದ್ದುಪಡಿ) ನಿಯಮ 20ರಲ್ಲಿ ಉಲ್ಲೇಖಿಸಿದಂತೆ 52 ಅಭ್ಯರ್ಥಿಗಳು ದುರ್ನಡತೆ ತೋರಿದ್ದಾರೆ. ನೇಮಕಾತಿ ಸಮಿತಿ ನೀಡಿರುವ ಸೂಚನೆಗಳನ್ನು ಪರೀಕ್ಷಾ ಕೊಠಡಿಯಲ್ಲಿ ಉಲ್ಲಂಘಿಸಿ ನಕಲು ಮಾಡಿರುವುದನ್ನು ದುರ್ನಡತೆ ಎಂದು ನಿರ್ಧರಿಸಲಾಗಿದೆ ಎಂದು ಆದೇಶದಲ್ಲಿ ಹೇಳಲಾಗಿದೆ. ಡಿಬಾರ್ ಆಗಿರುವ ಅಭ್ಯರ್ಥಿಗಳಲ್ಲಿ ಕೆಲವರು ಕಾನ್‌ಸ್ಟೆಬಲ್‌ಗಳಿದ್ದು ಅವರ ಕೆಲಸಕ್ಕೆ ಕುತ್ತು ಬಂದಿದೆ.

‘ಡಿಬಾರ್‌ಗೊಂಡವರು ಇಲಾಖೆ ನಡೆಸುವ ಎಲ್ಲ ವೃಂದದ ಪಿಎಸ್‌ಐ, ಕಾನ್‌ಸ್ಟೆಬಲ್, ಇತರೆ ಹುದ್ದೆಗಳ ನೇಮಕಾತಿಯಲ್ಲಿ ಭಾಗವಹಿಸಲು ಶಾಶ್ವತವಾಗಿ ನಿಷೇಧಿಸಲಾಗಿದೆ’ ಎಂದು ತಿಳಿಸಲಾಗಿದೆ.

ಡಿಬಾರ್ ಆದ ಅಭ್ಯರ್ಥಿಗಳು

ಎಸ್.ಜಾಗೃತ್, ಬಿ.ಗಜೇಂದ್ರ, ಸೋಮನಾಥ ಮಲ್ಲಿಕಾರ್ಜುನಯ್ಯ ಹಿರೇಮಠ, ಎಚ್.ಯು.ರಘುವೀರ್ ಎಂ.ಸಿ.ಚೇತನ್‌ಕುಮಾರ್, ಬಿ.ಸಿ.ವೆಂಕಟೇಶ್‌ಗೌಡ, ಎ.ಪಿ.ಮನೋಜ್, ಜಿ.ಆರ್.ಮಂಜುನಾಥ್, ಪಿ.ಸಿದ್ದಲಿಂಗಪ್ಪ, ಎಸ್. ಮಮತೇಶ್‌ಗೌಡ, ಎಚ್.ಯಶವಂತಗೌಡ, ಸಿ.ಎಂ.ನಾರಾಯಣ, ಸಿ.ಎಸ್. ನಾಗೇಶಗೌಡ, ಆರ್.ಮಧು, ಸಿ.ಯಶವಂತದೀಪ್, ಸಿ.ಕೆ.ದಿಲೀಪ್‌ಕುಮಾರ್, ರಚನಾ ಹಣಮಂತ, ಜಿ.ಶಿವರಾಜ್, ಸಿ.ಪ್ರವೀಣ್‌ಕುಮಾರ್, ಕೆ.ಸೂರ್ಯನಾರಾಯಣ, ಸಿ.ಎಂ.ನಾಗರಾಜ್, ಜಿ.ಸಿ.ರಾಘವೇಂದ್ರ, ಬೀರಪ್ಪ ಮೇತಿ, ಎಚ್.ಮೋಹನ್‌ಕುಮಾರ್, ಎನ್.ದಿಲೀಪ್‌ಕುಮಾರ್, ದರ್ಶನ್‌ಗೌಡ, ಲಕ್ಕಪ್ಪ ರಾವುತಪ್ಪ, ಎಚ್.ಬಿ.ಹರೀಶ್, ಜೆ.ಕುಶಾಲ್‌ಕುಮಾರ್, ವೀರೇಶ್, ಎನ್.ಚೇತನ್, ಕೆ.ಪ್ರವೀಣ್‌ಕುಮಾರ್, ಅರುಣ್‌ಕುಮಾರ್, ವಿಶಾಲ್, ಎಚ್. ವಿ.ಸುನೀಲ್, ಎಚ್.ಎನ್.ದೇಸಾಯಿ, ಶ್ರೀಧರ್, ಶಾಂತಿಬಾಯಿ, ಕಲ್ಲಪ್ಪ ಸಿದ್ದಪ್ಪ, ಅಲ್ಲಾಪುರ ಸುಪ್ರೀಯಾ ಹುಂಡೇಕರ್, ಪ್ರಭು ಇಟ್ಟಗರ್, ವಿಜಯಕುಮಾರ್ ಪೂಜಾರಿ, ಇಸ್ಮಾಯಿಲ್ ಖಾದಿರ್, ಯಶವಂತ್ ಮಾನೆ, ಎಸ್.ಶರಣಪ್ಪ ಪಾಟೀಲ್, ಬಿ.ಜೋಗೂರ್, ಸೋಮನಾಥ್, ಶ್ರೀಮಂತ ಸುತ್ತಾಪುರ್, ರವಿರಾಜ್ ವೀರಪ್ಪ, ಶ್ರೀಶೈಲಾ.

ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಬೆಂಗಳೂರಿನ ಕೆಂಗೇರಿಯ ಬಿಜಿಎಸ್ ಹೆಲ್ತ್ ಸಿಟಿಯಲ್ಲಿ ಬುಧವಾರ 5 ಸಾವಿರಕ್ಕೂ ಹೆಚ್ಚು ಜನರು ಯೋಗ ಮಾಡಿದರು



ಭಾರತೀಯ ವಾಯುಪಡೆ ಯೋಧರು ಬೆಂಗಳೂರು ಕೋಟೆಯಲ್ಲಿ ಯೋಗಾಸನ ಮಾಡಿದರು

ಆಯುಷ್ ಇಲಾಖೆ ಆಯೋಜಿಸಿದ್ದ ಯೋಗ ದಿನಾಚರಣೆಯಲ್ಲಿ ಜನರು ಯೋಗಾಸನ ಮಾಡಿದರು (ಎಡ ಚಿತ್ರ). ಸಿ.ಎಂ.ಆರ್ ತಾಂತ್ರಿಕ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಘಟಕದಿಂದ ಯೋಗಾಭ್ಯಾಸ ಮಾಡಲಾಯಿತು

ಅಂತರರಾಷ್ಟ್ರೀಯ ಯೋಗ ದಿನ ಆಚರಣೆ • ಗಮನ ಸೆಳೆದ ಯೋಗಪಟುಗಳು • ವಿವಿಧ ಭಂಗಿ ಪ್ರದರ್ಶನ

ನಗರದಲ್ಲಿ ಸಂಭ್ರಮದ ಯೋಗಾಭ್ಯಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೂರ್ಯ ರಶ್ಮಿ ನೆಲ ಮುಟ್ಟುವ ಮುನ್ನವೇ ಸಿಲಿಕಾನ್ ಸಿಟಿಯ ಹಲವೆಡೆ ಉತ್ತಮ ಆರೋಗ್ಯ ಕ್ಕಾಗಿ ಜನರು ಬುಧವಾರ ಯೋಗಾಭ್ಯಾಸ ಮಾಡಿದರು. ವಿವಿಧ ಆಸನಗಳನ್ನು ಮಾಡುವ ಮೂಲಕ ಸಂಭ್ರಮಿಸಿದರು.

ಅಂತರರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ವಿವಿಧ ಸಂಘ–ಸಂಸ್ಥೆಗಳು, ಯೋಗ ತರಬೇತಿ ಕೇಂದ್ರಗಳು, ಶಾಲಾ–ಕಾಲೇಜಿಗಳು ಸಾಮೂಹಿಕ ಯೋಗಾಸನ ಹಮ್ಮಿಕೊಂಡಿ ದ್ದವು. ಮುಂಜಾನೆಯೇ ಜನರು ಯೋಗ ಮ್ಯಾಟ್ ಹಿಡಿದು ಮೈದಾನ, ಉದ್ಯಾನ ಗಳಿಗೆ ತೆರಳಿ, ವಿವಿಧ ಆಸನ, ಸೂರ್ಯ ನಮಸ್ಕಾರ, ಪ್ರಾಣಾಯಾಮ ಮಾಡಿದರು. ಯೋಗಪಟುಗಳು ಸೂಕ್ತ ಮಾರ್ಗದರ್ಶನ ನೀಡಿದರು.

ಆಯುಷ್ ಇಲಾಖೆ ವಿಧಾನಸೌಧದ ಮುಂಭಾಗ ಸಾಮೂಹಿಕ ಯೋಗಾಸನ ಹಮ್ಮಿಕೊಂಡಿತ್ತು. ರಾಜ್ಯಪಾಲ ಥಾವರಚಂದ್ ಗೆಹಲೋತ್ ಉದ್ಘಾಟಿಸಿದರು. ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಶ್ವಾಸಗುರು ವಚನಾನಂದ ಸ್ವಾಮೀಜಿ, ಕ್ರೀಡಾಪಟು ಅಂಜು ಬಾಬಿ ಜಾರ್ಜ್, ಮಾಜಿ ಕ್ರಿಕೆಟಿಗ ವೆಂಕಟೇಶ್ ಪ್ರಸಾದ್, ಶಾಸಕ ರಿಜ್ವಾನ್ ಅರ್ಷದ್ ಸೇರಿ ಹಲವರು ಯೋಗಾಸನ ಮಾಡಿದರು.

ಸರ್ಕಾರದಿಂದ ಪೂರ್ಣ ಪ್ರೋತ್ಸಾಹ: ಕಾರ್ಯಕ್ರಮದಲ್ಲಿ ಮಾತನಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ‘ವಿಶ್ವಕ್ಕೆ ಯೋಗದ ಕೊಡುಗೆ ನಮ್ಮ ಹೆಮ್ಮೆ. ಯೋಗಾಭ್ಯಾಸದಿಂದ ಮನಸ್ಸು ಮತ್ತು ದೇಹ ಹತೋಟಿಯಲ್ಲಿರುತ್ತದೆ. ಆದ್ದ ರಿಂದ ರಾಜ್ಯ ಸರ್ಕಾರವು ಯೋಗಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಲಿದೆ’ ಎಂದು ಭರವಸೆ ನೀಡಿದರು.

ರಾಷ್ಟ್ರೋತ್ಥಾನ ಪರಿಷತ್ ವತಿ ಯಿಂದ ಜಯನಗರದ ಚಂದ್ರಗುಪ್ತ ಮೌರ್ಯ ಕ್ರೀಡಾಂಗಣದಲ್ಲಿ ಯೋಗ ದಿನ ಆಚರಿಸಲಾಯಿತು. ಬೆಂಗಳೂರು ವಿ.ವಿ ಯೋಗ ಕೇಂದ್ರದಿಂದ ಜ್ಞಾನಭಾರತಿ ಆವರಣದಲ್ಲಿ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಚಾಮರಾಜಪೇಟೆಯ ಕ್ಯಾಂಪಸ್‌ನಲ್ಲಿ, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಯೋಗಾಸನ ನಡೆಯಿತು. ಭಾರತೀಯ ವಾಯು ಪಡೆಯ ಯೋಧರು ಬೆಂಗಳೂರು ಕೋಟೆಯಲ್ಲಿ ಯೋಗಾಸನ ಮಾಡಿದರು.

ಪಿಇಎಸ್ ವಿ.ವಿ ತನ್ನ ಕ್ಯಾಂಪಸ್‌ನಲ್ಲಿ ಯೋಗ ದಿನ ಆಚರಿಸಿತು. ಕುಲಾಧಿಪತಿ ಎಂ.ಆರ್.ದೊರೆಸ್ವಾಮಿ, ‘6ನೇ ತರಗತಿ ಯಿಂದ ಸ್ನಾತಕೋತ್ತರ ಪದವಿಯವರೆಗೆ ಯೋಗವನ್ನು ಕಡ್ಡಾಯಗೊಳಿಸಿ, ಪಠ್ಯಕ್ರಮದ ಭಾಗವಾಗಿಸಬೇಕು’ ಎಂದು ಆಗ್ರಹಿಸಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ವಿಧಾನಸೌಧದ ಮುಂಭಾಗ ಯೋಗ ಮಾಡಿದರು

ಯೋಗ ಪಟುಗಳು ಯೋಗ ಪ್ರದರ್ಶನ ನೀಡಿದರು
–ಪ್ರಜಾವಾಣಿ ಚಿತ್ರ

ಸಿ.ಎಂ.ಆರ್ ತಾಂತ್ರಿಕ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಘಟಕವು ಮಹಾವತಾರ್ ಫೌಂಡೇಷನ್ ಸಹಯೋಗದಲ್ಲಿ ಯೋಗ ದಿನ ಆಚರಿಸಿತು. ಯೋಗ ಗುರು ಸಂತ ಸದಾನಂದ ಗಿರಿ ಮಹಾರಾಜ್ ಅವರು ವಿಶೇಷ ಅತಿಥಿಯಾಗಿ ಪಾಲ್ಗೊಂಡಿದ್ದರು.

ನಾನು ಸ್ವತಃ ಯೋಗ ಪಟುವಾಗಿದ್ದು, ಪ್ರತಿದಿನ ಯೋಗ ಮತ್ತು ಪ್ರಾಣಾಯಾಮ ಮಾಡುವ ಮೂಲಕ ಸಕಾರಾತ್ಮಕ ಪರಿಣಾಮಗಳನ್ನು ಅನುಭವಿಸಿದ್ದೇನೆ
ಥಾವರಚಂದ್ ಗೆಹಲೋತ್, ರಾಜ್ಯಪಾಲ

ವಿವಿಧ ರೀತಿಯ ಯೋಗಗಳು ವಿವಿಧ ಹೆಸರಿನಲ್ಲಿ ಚಾಲ್ತಿಯಲ್ಲಿವೆ. ಸರ್ಕಾರ ಈ ಬಗ್ಗೆ ಗಮನಹರಿಸಿ, ಮಾನ್ಯತೆ ಹೊಂದಿದ ಪಠ್ಯಪುಸ್ತಕದ ರೂಪ ನೀಡಬೇಕು
ಯು.ಟಿ. ಖಾದರ್, ವಿಧಾನಸಭಾಧ್ಯಕ್ಷ

‘ಯೋಗ ರತ್ನ’ ಪ್ರಶಸ್ತಿ

ಶ್ವಾಸ ಯೋಗ ಸಂಸ್ಥೆ ನಗರದಲ್ಲಿ ಹಮ್ಮಿಕೊಂಡ ಯೋಗ ದಿನಾಚರಣೆಯಲ್ಲಿ ಸಾಧಕರಿಗೆ ‘ಯೋಗ ರತ್ನ-2023’ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಹೃಷಿಕೇಶದ ಸ್ವಾಮಿ ರಾಮಸಾಧಕ ಗ್ರಾಮ ಆಶ್ರಮದ ಅಹಿಂಸಿನ್ ಸಂಸ್ಥೆ, ಇಂಡೋನೇಷಿಯಾದ ಗಾಂಧಿ ಆಶ್ರಮ, ಬಾಲಿಯ ಅಗಸ್ ಇಂದ್ರ ಉದಯನ್, ಚೀನಾದ ಬೀಜಿಂಗ್‌ನ ಯೋಗಿಯೋಗ ಸಂಸ್ಥೆಯ ಮನಮೋಹನ ಸಿಂಗ್ ಭಂಡಾರಿ, ಅರ್ಜೆಂಟೀನಾದ ಶ್ವಾಸಯೋಗಿ ವಿಕ್ಟರ್ ಟ್ರುವಿಯಾನೋ ಹಾಗೂ ಗುಳೇದಗುಡ್ಡದ ಕೃಷ್ಣ ಯೋಗಾಶ್ರಮದ ಗುರೂಜಿ ಬಸವ ರಾಜ ಹಡಗಲಿ ಅವರಿಗೆ ‘ಯೋಗ ರತ್ನ’ ಪ್ರಶಸ್ತಿ ಯನ್ನು ಮಾಜಿ ಮುಖ್ಯಮಂತ್ರಿ ಬೊಮ್ಮಾಯಿ, ಸಚಿವ ದಿನೇಶ್ ಗುಂಡೂರಾವ್ ಪ್ರದಾನ ಮಾಡಿದರು.

ಬಿಜಿಎಸ್ ಆವರಣದಲ್ಲಿ 5 ಸಾವಿರ ಜನರಿಂದ ಯೋಗ

ಬೆಂಗಳೂರು ಕೆಂಗೇರಿಯ ಬಿಜಿಎಸ್ ಹೆಲ್ತ್ ಸಿಟಿಯಲ್ಲಿ ನಡೆದ ಯೋಗ ದಿನಾಚರಣೆಯಲ್ಲಿ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಬಿಜಿಎಸ್ ಸಮೂಹ ಸಂಸ್ಥೆ ಮತ್ತು ಆಸ್ಪತ್ರೆಗಳ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶನಾಥ ಸ್ವಾಮೀಜಿ ಯೋಗ ಮಾಡಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಕೆಂಗೇರಿಯ ಬಿಜಿಎಸ್ ಹೆಲ್ತ್ ಸಿಟಿಯಲ್ಲಿ ಬುಧವಾರ 5 ಸಾವಿರಕ್ಕೂ ಅಧಿಕ ಜನರು ಏಕ ಕಾಲದಲ್ಲಿ ಯೋಗ ಮಾಡಿದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಚಾಲನೆ ನೀಡಿ ಮಾತನಾಡಿ, ‘ಯೋಗವು ಕೇವಲ ವ್ಯಾಯಾಮವಲ್ಲ. ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಯೋಗಕ್ಷೇಮ-ವನ್ನು ಹೆಚ್ಚಿಸುವ ಜೀವನ ವಿಧಾನ’ ಎಂದು ತಿಳಿಸಿದರು.

ಬಿಜಿಎಸ್ ಸಮೂಹ ಸಂಸ್ಥೆಗಳು ಮತ್ತು ಆಸ್ಪತ್ರೆಗಳ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶನಾಥ ಸ್ವಾಮೀಜಿ ಉಸಿರಾಟಕ್ಕೆ ಸಂಬಂಧಿಸಿದ ಅಭ್ಯಾಸ ಗಳನ್ನು ತಿಳಿಸಿದರು.

ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್, ಸಂಸದ ತೇಜಸ್ವಿ ಸೂರ್ಯ, ನಿವೃತ್ತ ಐಪಿಎಸ್ ಅಧಿಕಾರಿ ಬಿ.ಜಿ. ಜ್ಯೋತಿ ಪ್ರಕಾಶ್ ಮಿರ್ಜಿ, ನಿರ್ಮಾಪಕ ಉಮಾಪತಿ ಗೌಡ, ನಟಿಯರಾದ ರೂಪಾ ಅಯ್ಯರ್, ಸಾನಿಯಾ ಅಯ್ಯರ್, ರಾಧಿಕಾ ನಾರಾಯಣ್, ಅರ್ಚನಾ ಜೋಯಿಸ್ ಭಾಗವಹಿಸಿದ್ದರು.

ಮುಖ್ಯಾಂಶಗಳು
- ನಿರ್ಮಲಾನಂದನಾಥ ಸ್ವಾಮೀಜಿ ಚಾಲನೆ
- ‘ಯೋಗದಿಂದ ಆರೋಗ್ಯ’

ಬ್ಯಾಂಕ್ ಆಫ್ ಬರೋಡದ ಬೆಂಗಳೂರು ವಲಯವು ನಗರದಲ್ಲಿ ಅಂತರರಾಷ್ಟ್ರೀಯ ಯೋಗ ದಿನ ಆಚರಿಸಿತು. ಬೆಂಗಳೂರು ವಲಯದ ಮಹಾ ಪ್ರಬಂಧಕ ದೇಬಬ್ರತ ದಾಸ್, ಉಪ ಮಹಾ ಪ್ರಬಂಧಕ ವಿವೇಕ್ ಕುಮಾರ್ ಚೌಧರಿ, ವಲಯ ಮತ್ತು ಪ್ರಾದೇಶಿಕ ಮುಖ್ಯಸ್ಥರು ಹಾಗೂ ಸಿಬ್ಬಂದಿ ಭಾಗವಹಿಸಿದ್ದರು

ಮಣಿಪುರ ಸಂಘರ್ಷ: 24ಕ್ಕೆ ಸರ್ವಪಕ್ಷ ಸಭೆ

ನವದೆಹಲಿ (ಪಿಟಿಐ): ಮಣಿಪುರದ ಸದ್ಯದ ಸ್ಥಿತಿಗತಿ ಬಗ್ಗೆ ಚರ್ಚಿಸಿ ಪರಿಹಾರ ಹುಡುಕಲು ಜೂನ್ 24ರಂದು ಕೇಂದ್ರ ಗೃಹ ಸಚಿವ ಅಮಿತಾ ಶಾ ಅವರು, ಸರ್ವಪಕ್ಷಗಳ ಸಭೆ ಕರೆದಿದ್ದಾರೆ.

ದೆಹಲಿಯಲ್ಲಿ ಅಂದು ಮಧ್ಯಾಹ್ನ 3ಗಂಟೆಗೆ ಸಭೆ ನಡೆಯಲಿದೆ ಎಂದು ಗೃಹ ಸಚಿವಾಲಯದ ವಕ್ತಾರರು ಟ್ವೀಟ್ ಮಾಡಿದ್ದಾರೆ. ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮಾ ಅವರು ಅಮಿತ್ ಶಾ ಅವರನ್ನು ಭೇಟಿ ಮಾಡಿ ಚರ್ಚಿಸಿದ ಬಳಿಕ ಈ ಪ್ರಕಟಣೆ ಹೊರಬಿದ್ದಿದೆ.

ಮತ್ತೆ ಗುಂಡಿನ ದಾಳಿ: ಮಣಿಪುರ ಪೂರ್ವ ಭಾಗದ ತಂಗ್ಜಿಂಗ್, ಕಾಂಗ್ಚುಪ್ ಭಾಗಕ್ಕೆ ಸೇರಿದ ಗೆಲ್ಜಾಂಗ್ ಮತ್ತು ಸಿಂಗ್ಡಾ ಹಳ್ಳಿಗಳಲ್ಲಿ ಶಸ್ತ್ರಸಜ್ಜಿತ ದುಷ್ಕರ್ಮಿಗಳು ಮಂಗಳವಾರ ಮಧ್ಯರಾತ್ರಿ ಮತ್ತೆ ಗುಂಡಿನ ದಾಳಿ ನಡೆಸಿದ್ದಾರೆ. ಅಸ್ಸಾಂ ರೈಫಲ್ಸ್ ಪಡೆಯ ಯೋಧರು ಘಟನಾ ಸ್ಥಳಕ್ಕೆ ತೆರಳಿದ್ದು, ಅನಾಹುತಗಳ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೂವರಿಗೆ ಗಾಯ: ಬಿಷ್ಣುಪುರ ಜಿಲ್ಲೆಯ ಕ್ವಾಕ್ಟಾ ಪಟ್ಟಣದ ಮೋರಿ ಯೊಂದರ ಬಳಿ ನಿಲ್ಲಿಸಿದ್ದ ಕಾರಿನಲ್ಲಿದ್ದ ಬಾಂಬ್ ಸ್ಫೋಟಗೊಂಡು ಮೂವರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರೀಯ ಕೃಷಿ ಸಮ್ಮೇಳನಕ್ಕೆ ಇಂದು ಚಾಲನೆ

ಬೆಂಗಳೂರು: ‘ಸುಸ್ಥಿರ ಅಭಿವೃದ್ಧಿಗಾಗಿ ಕೃಷಿಯೆಡೆಗೆ ವಿಸ್ತರಣಾ ವಿಜ್ಞಾನದ ವಿಕಸನದ ಕುರಿತು ಜೂನ್ 22ರಿಂದ 24ರವರೆಗೆ ಮೂರು ದಿನಗಳ ದ್ವಿತೀಯ ರಾಷ್ಟ್ರೀಯ ಸಮ್ಮೇಳನ ನಡೆಯಲಿದೆ’ ಎಂದು ಬೆಂಗಳೂರು ಕೃಷಿ ವಿ.ವಿ ಕುಲಪತಿ ಎಸ್.ವಿ. ಸುರೇಶ್ ಮಾಹಿತಿ ನೀಡಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, ‘ಬೆಂಗಳೂರು ಕೃಷಿ ವಿಶ್ವವಿದ್ಯಾ ಲಯದ ಜಿಕೆವಿಕೆ ಆವರಣದಲ್ಲಿ ಈ ಸಮ್ಮೇಳನ ನಡೆಯಲಿದೆ. ದೇಶದ ವಿವಿಧ ರಾಜ್ಯಗಳ ವಿಜ್ಞಾನಿಗಳು ಮತ್ತು ಕ್ಷೇತ್ರ ವಿಸ್ತರಣಾ ಧಿಕಾರಿಗಳು ದ್ವಿತೀಯ ಕೃಷಿಗೆ ಸಂಬಂಧಿಸಿದ ಸಂಶೋಧನೆ ಮತ್ತು ಅಭಿವೃದ್ಧಿ ಉಪಕ್ರಮಗಳ ಕುರಿತು ಚರ್ಚಿಸಿದ್ದಾರೆ’ ಎಂದು ತಿಳಿಸಿದರು.

ವಿಸ್ತರಣಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿಜ್ಞಾನಿಗಳು, ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸಮ್ಮೇಳನ ವನ್ನು ಉದ್ಘಾಟಿಸಲಿದ್ದಾರೆ ಎಂದರು.

ಮಕ್ಕಳಿಗಿಲ್ಲ ಶಾಲಾಬ್ಯಾಗ್ ಹೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ಮಕ್ಕಳ ಬ್ಯಾಗ್ ಹೊರೆ ತಗ್ಗಿಸಲು ಮುಂದಾಗಿರುವ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, 1ರಿಂದ 10ನೇ ತರಗತಿಯ ಮಕ್ಕಳ ಬ್ಯಾಗ್ ತೂಕದ ಹೊರೆಯನ್ನು 1.5 ಕೆ.ಜಿ. ಯಿಂದ 5ಕೆ.ಜಿ.ವರೆಗೆ ನಿಗದಿ ಮಾಡಿ ಸುತ್ತೋಲೆ ಹೊರಡಿಸಿದೆ.

1993ರಲ್ಲಿ ನೇಮಿಸಿದ್ದ ಯಶಪಾಲ ವರ್ಮ ಸಮಿತಿಯ ‘ಹೊರೆ ಇಲ್ಲದ ಕಲಿಕೆ’ ವರದಿ, ಕೇಂದ್ರ ಸರ್ಕಾರದ ‘ಶಾಲಾ ಬ್ಯಾಗ್ ನೀತಿ–2020’ ಹಾಗೂ ಮಕ್ಕಳು ಮತ್ತು ಕಾನೂನು ಕೇಂದ್ರ, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ನಡೆಸಿದ ಅಧ್ಯಯನ ವರದಿ ಆಧಾರದಲ್ಲಿ ಉಲ್ಲೇಖಿಸಿದಂತೆ ಹಾಗೂ ಮೂಳೆ ತಜ್ಞರ ಶಿಫಾರಸಿನಂತೆ ಮಕ್ಕಳು ಅವರ ದೇಹದ ತೂಕದ ಶೇ 10ರಿಂದ 15ರಷ್ಟು ಭಾರ ಹೊರಬಹುದು ಎಂಬ ಅಂಶಗಳ ಆಧಾರದಲ್ಲಿ ಸುತ್ತೋಲೆ ಹೊರಡಿಸಲಾಗಿದೆ.

1ರಿಂದ 2ನೇ ತರಗತಿಯ ಮಕ್ಕಳಿಗೆ 1.5ರಿಂದ 2 ಕೆ.ಜಿ, 3ರಿಂದ 5ನೇ ತರಗತಿ 2ರಿಂದ 3 ಕೆ.ಜಿ, 6ರಿಂದ 8 ತರಗತಿ 3ರಿಂದ 4 ಕೆ.ಜಿ ಹಾಗೂ 9ರಿಂದ 10ನೇ ತರಗತಿಯ ಮಕ್ಕಳಿಗೆ 4ರಿಂದ 5 ಕೆ.ಜಿ.ವರೆಗೆ ಶಾಲಾ ಬ್ಯಾಗ್ ತೂಕ ನಿಗದಿ ಮಾಡಲಾಗಿದೆ.

ಶಾಲಾ ಶಿಕ್ಷಕರು ಅಗತ್ಯಕ್ಕೆ ತಕ್ಕಂತೆ ಅಂದಿನ ಪಠ್ಯಪುಸ್ತಕ ಹಾಗೂ ಇತರೆ ಕಲಿಕಾ ಸಾಮಗ್ರಿಗಳನ್ನು ಮಾತ್ರ ತರುವಂತೆ ನೋಡಿಕೊಳ್ಳಬೇಕು. 200 ಪುಟ ಮೀರದ ನೋಟ್‌ಬುಕ್ ಬಳಸಲು ಸೂಚಿಸಬೇಕು. ಶಾಲೆಗಳಲ್ಲೇ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಶಾಲಾ ಬ್ಯಾಗ್ ಹೊರೆಯಿಂದ ಆಗುವ ದುಷ್ಪ ರಿಣಾಮಗಳನ್ನು ಪೋಷಕರಿಗೆ ಮನವರಿಕೆ ಮಾಡಿಕೊಡಬೇಕು. ನಿಯಮ ಉಲ್ಲಂಘಿಸುವ ಶಿಕ್ಷಕರು, ಶಾಲೆಗಳ ವಿರುದ್ಧ ಕ್ರಮ ಕೈಗೊಳ್ಳ ಲಾಗುವುದು ಎಂದು ಎಚ್ಚರಿಸಲಾಗಿದೆ.

ಅರೆಬೆಂದ ಅರ್ಜಿ: ಹೈಕೋರ್ಟ್ ಗರಂ

ಬೆಂಗಳೂರು: ‘ಪ್ರಾಥಮಿಕ ಶಾಲಾ ಮಕ್ಕಳ ಬ್ಯಾಗ್ ತೂಕ ಇಳಿಕೆ ಮಾಡಲು ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಕೋರಲಾದ ಅರ್ಜಿಯಲ್ಲಿ ಯಾವುದೇ ಪುರಾವೆಗಳಿಲ್ಲ. ಇದೊಂದು ಅರೆಬೆಂದ ಅರ್ಜಿ’ ಎಂದು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ಎಲ್. ರಮೇಶ್ ನಾಯಕ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ಆಲಿಸಿದ ನ್ಯಾಯಪೀಠ, ‘ವಿಷಯವೇನೊ ಗಂಭೀರವಾಗಿದೆ. ಆದರೆ, ಅರ್ಜಿದಾರರು ಅಧಿಕಾರಿಗಳಿಗೆ ಇ-ಮೇಲ್ ಮೂಲಕ ಮನವಿ ಸಲ್ಲಿಸಿರುವುದನ್ನು ಬಿಟ್ಟರೆ ಬೇರಾವುದೇ ಪ್ರಯತ್ನ ಮಾಡಿಲ್ಲ. ಶಾಲೆಗಳಿಗೆ ಖುದ್ದು ಭೇಟಿ ಕೊಟ್ಟು ಸಮಸ್ಯೆ ಅರಿತಿದ್ದೇನೆ ಎಂಬ ಅವರ ವಾದಕ್ಕೆ ಪೂರಕವಾದ ಯಾವುದೇ ಪುರಾವೆಗಳು ಕಾಣಿಸುತ್ತಿಲ್ಲ. ಅಗತ್ಯ ಮಾಹಿತಿ ಕಲೆ ಹಾಕಿದ ನಂತರ ಕೋರ್ಟ್‌ಗೆ ಬರಬಹುದಿತ್ತು’ ಎಂಬ ಅಭಿಪ್ರಾಯ ವ್ಯಕ್ತಪಡಿಸಿತು. ಮೊದಲು ಅರ್ಜಿ ವಜಾಗೊಳಿಸಿದ ನ್ಯಾಯಪೀಠ, ಬಳಿಕ ಅರ್ಜಿದಾರರ ಮನವಿಯಂತೆ ಹೊಸದಾಗಿ ಅರ್ಜಿ ಸಲ್ಲಿಸಲು ಅನುಮತಿ ನೀಡಿ ವಿಲೇವಾರಿ ಮಾಡಿತು.

‘ಮಕ್ಕಳ ಬ್ಯಾಗ್ ತೂಕದ ಮಿತಿ ಇಷ್ಟೇ ಇರಬೇಕೆಂದು 2020ರಲ್ಲಿ ಕೇಂದ್ರ ಸರ್ಕಾರ ರೂಪಿಸಿರುವ ನಿಯಮ ಪಾಲನೆಯಾಗುತ್ತಿಲ್ಲ. ಆರೋಗ್ಯ ತಜ್ಞರ ಪ್ರಕಾರ ಭಾರಿ ತೂಕದ ಶಾಲಾ ಬ್ಯಾಗ್ ಮಕ್ಕಳ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಆದ್ದರಿಂದ, ಸಂವಿಧಾನದ 21ನೇ ವಿಧಿಯಡಿ ಸರ್ಕಾರಕ್ಕೆ ಸ್ಪಷ್ಟ ನಿರ್ದೇಶನ ನೀಡಬೇಕು’ ಎಂದು ಅರ್ಜಿಯಲ್ಲಿ ಕೋರಲಾಗಿತ್ತು.

ಹೊಂದಾಣಿಕೆ ರಾಜಕಾರಣ ನಿಜ: ಸಿ.ಪಿ.ಯೋಗೇಶ್ವರ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿಯ ಕೆಲವು ನಾಯಕರ ನಡುವೆ ಹೊಂದಾಣಿಕೆ ಆಗಿದ್ದು ನಿಜ. ಈಗ ಆ ವಿಚಾರ ಅಪ್ರಸ್ತುತ. ಈಗ ಅದನ್ನು ಹೇಳಲು ಹೋದರೆ ರಾಜ್ಯ ರಾಜಕಾರಣದಲ್ಲಿ ಬೆಂಕಿ ಹಚ್ಚಿದಂತೆ ಆಗುತ್ತದೆ’ ಎಂದು ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ ಹೇಳಿದರು.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಅವರನ್ನು ಬುಧವಾರ ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಸಚಿವ ಸಂಪುಟ ವಿಸ್ತರಣೆ ಮಾಡದೆ ಹೋಗಿದ್ದು, ಕಾಂಗ್ರೆಸ್‌ನ ಸುಳ್ಳು ಆರೋಪಗಳಿಗೆ ಉತ್ತರ ಕೊಡದೆ ಮೌನವಾಗಿದ್ದು ಬಿಜೆಪಿ ಸೋಲಿಗೆ ಪ್ರಮುಖ ಕಾರಣ. ಹಾಗಾಗಿ, ಕಾಂಗ್ರೆಸ್ ಸುಳ್ಳಿನಲ್ಲಿ ಗೆದ್ದಿದೆ’ ಎಂದರು.

‘ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಿಂದ ನಾನು ಸ್ಪರ್ಧೆ ಮಾಡುವ ಬಗ್ಗೆ ಚರ್ಚೆ ನಡೆದಿದೆ. ವರಿಷ್ಠರ ಸಲಹೆ ಮೇರೆಗೆ ನಿರ್ಧಾರ ಮಾಡುತ್ತೇನೆ. ಪಕ್ಷದ ಕಾರ್ಯ-ಕರ್ತನಾಗಿ ಸ್ಪರ್ಧೆ ಮಾಡಬೇಕಾಗುತ್ತದೆ. ಸ್ಪರ್ಧಿಸುತ್ತೇನೆ’ ಎಂದರು.

ಸಂಸದ ಡಿ.ಕೆ. ಸುರೇಶ್ ರಾಜಕೀಯ ವೈರಾಗ್ಯದ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಸುರೇಶ್ ಅವರು ರಾಜ್ಯದ ರಾಜಕೀಯ ಕಡೆ ಒತ್ತು ಕೊಡಲು ಯೋಜಿಸಿರಬಹುದು. ಆದರೆ, ಇಷ್ಟು ಬೇಗ ರಾಜಕೀಯ ವೈರಾಗ್ಯ ಪಡೆಯುತ್ತಾರೆ ಎಂದು ಅನ್ನಿಸುವುದಿಲ್ಲ’ ಎಂದರು.

ಲೋಕಸಭೆ ಚುನಾವಣೆಯಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಬಗ್ಗೆ ಪ್ರ-ತಿಕ್ರಿಯಿಸಿದ ಅವರು, ‘ಇಷ್ಟು ವರ್ಷ ಜೆಡಿಎಸ್ ವಿರುದ್ಧ ಹೋರಾಟ ಮಾಡುತ್ತಾ ಬಂದಿದ್ದೇವೆ. ಬಿಜೆಪಿ–ಜೆಡಿಎಸ್ ಹೋರಾಟದಿಂದ ಕಾಂಗ್ರೆಸ್‌ಗೆ ಲಾಭವಾಗಿದೆ. ಮೈತ್ರಿ ಕುರಿತು ನಮ್ಮ ನಾಯಕರು ತೀರ್ಮಾನ ತೆಗೆದು ಕೊಳ್ಳಲಿದ್ದಾರೆ’ ಎಂದರು.

ಕರಣ್ ಜೋಹರ್‌ಗೆ ಬ್ರಿಟನ್ ಸಂಸತ್ ಗೌರವ

ಲಂಡನ್ (ಪಿಟಿಐ): ಬಾಲಿವುಡ್ ಚಿತ್ರ ನಿರ್ದೇಶಕ ಕರಣ್ ಜೋಹರ್ ಅವರು ‘ಜಾಗತಿಕ ಮನರಂಜನಾ ಕ್ಷೇತ್ರ’ಕ್ಕೆ ನೀಡಿರುವ ಕೊಡುಗೆ ಹಾಗೂ ನಿರ್ದೇಶಕರಾಗಿ ಅವರು 25 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಬ್ರಿಟನ್ ಸಂಸತ್ತು ಅವರನ್ನು ಮಂಗಳವಾರ ಗೌರವಿಸಿದೆ.

ಬ್ರಿಟನ್ ಸಂಸತ್ತಿನ ‘ಹೌಸ್ ಆಫ್ ಲಾರ್ಡ್ಸ್’ ಸದಸ್ಯೆ, ಭಾರತ ಮೂಲದ ಬಾರೊನೆಸ್ ಸ್ಯಾಂಡಿ ವರ್ಮ ಅವರು ಕರಣ್ ಅವರಿಗೆ ಪ್ರಶಸ್ತಿ ಫಲಕವನ್ನು ನೀಡಿ ಗೌರವಿಸಿದರು.

ಈ ಮಾಹಿತಿಯನ್ನು ಕರಣ್ ತಮ್ಮ ಇನ್‌ಸ್ಟಗ್ರಾಂ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

‘ಉಚಿತ ಅಕ್ಕಿ: ಕಾಂಗ್ರೆಸ್‌ನಿಂದ ಸುಳ್ಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ 80 ಕೋಟಿ ಜನರಿಗೆ ಉಚಿತ ಅಕ್ಕಿ ಪೂರೈಸಲು ಮೋದಿ ಸರ್ಕಾರ ಜಾರಿಗೊಳಿಸಿದ ‘ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆ’ಯ ಯಶಸ್ಸು ಸಹಿಸಿ ಕೊಳ್ಳಲಾಗದೆ ಕಾಂಗ್ರೆಸ್ ಪಕ್ಷ ಸುಳ್ಳುಗಳನ್ನು ಹಬ್ಬಿಸುತ್ತಿದೆ ಎಂದು ಬಿಜೆಪಿ ಟೀಕಿಸಿದೆ.

'ಮೋದಿ ಕೊಡುವ 5 ಕೆ.ಜಿ ಉಚಿತ ಅಕ್ಕಿ ವಿತರಣೆ ನಿಲ್ಲುವುದಿಲ್ಲ. ಸಿದ್ದರಾಮಯ್ಯ ಭರವಸೆ ನೀಡಿದ 10 ಕೆ.ಜಿ ಅಕ್ಕಿ ಬರುವುದಿಲ್ಲ. ಇದು ಸತ್ಯ' ಎಂದು ಬಿಜೆಪಿ ಟ್ವೀಟ್‌ನಲ್ಲಿ ಹೇಳಿದೆ.

ರಾಜ್ಯದಲ್ಲಿ ಸುಳ್ಳು ಸುದ್ದಿ ಹರಡಿಸುವವರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ವೀರಾವೇಶ ವ್ಯಕ್ತಪಡಿ-ಸಿದ್ದು, ಅವರ ಕಾರ್ಯಾಚರಣೆ, ಅವರ ಪಕ್ಷದ ಕಚೇರಿಯಿಂದಲೇ ಆರಂಭಿಸಲಿ ಎಂದು ಕುಟುಕಿದೆ.

ನಟ ಶಿವರಾಜ್ ಕುಮಾರ್ ಮತ್ತು ಅವರ ಪತ್ನಿ ಗೀತಾ ಶಿವರಾಜ್ ಕುಮಾರ್ ಅವರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಸದಾಶಿವನಗರದ ನಿವಾಸದಲ್ಲಿ ಬುಧವಾರ ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು. ಉಷಾ ಶಿವಕುಮಾರ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಇದ್ದರು

‘ಪ್ರಜಾವಾಣಿ’, ‘ಡೆಕ್ಕನ್ ಹೆರಾಲ್ಡ್’ನಿಂದ ‘ಗೈಡಿಂಗ್ ಫೋರ್ಸ್’

‘ಗುರಿ ಸಾಧನೆಗೆ ಪರಿಶ್ರಮ ಸಾಧನ’

ಪ್ರಜಾವಾಣಿ ವಾರ್ತೆ

ಧಾರವಾಡ: ‘ಗೆಲ್ಲುವುದು ಗುರಿಯಾಗ ಬೇಕು. ಸಾಧನೆಗೆ ಅಸಾಧ್ಯ ವಾದದ್ದು ಯಾವುದೂ ಇಲ್ಲ ಎಂಬುದನ್ನು ಸಾಧಿಸಿ ತೋರಿಸಬೇಕು’ ಎಂದು ಪರಿಶ್ರಮ ನೀಟ್ ಅಕಾಡೆಮಿ ಸಂಸ್ಥಾಪಕ ನಿರ್ದೇಶಕರೂ ಆಗಿರುವ ಚಿಕ್ಕಬಳ್ಳಾ-ಪುರ ಶಾಸಕ ಪ್ರದೀಪ ಈಶ್ವರ ಸಲಹೆ ನೀಡಿದರು.

‘ಪ್ರಜಾವಾಣಿ’, ‘ಡೆಕ್ಕನ್ ಹೆರಾಲ್ಡ್’ ಹಾಗೂ ಐಎಎಸ್ ಬಾಬಾ ಸಂಸ್ಥೆ ವತಿಯಿಂದ ಸಿ.ಬಿ.ನಗರದ ಲಿಂಗಾಯತ ಭವನದಲ್ಲಿ ಬುಧವಾರ ಐಎಎಸ್ ಮತ್ತು ಕೆಎಎಸ್ ಆಕಾಂಕ್ಷಿಗಳಿಗೆ ಆಯೋಜಿಸಿದ್ದ ‘ಗೈಡಿಂಗ್ ಫೋರ್ಸ್’ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಸ್ಪರ್ಧಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

‘ಪತ್ರಿಕೆಗಳನ್ನು ಓದಬೇಕು. ವಿದ್ಯಮಾನ ತಿಳಿದುಕೊಳ್ಳಬೇಕು. ‘ಪ್ರಜಾವಾಣಿ’, ‘ಡೆಕ್ಕನ್ ಹೆರಾಲ್ಡ್’ ಪತ್ರಿಕೆ, ಐಎಎಸ್ ಬಾಬಾ ಸಂಸ್ಥೆಯ ವೆಬ್‌ಸೈಟ್ ಸೀರಿಸ್ ಇವೆ. ಸಂಪಾದಕೀಯ, ಲೇಖನ ಓದುವ ಅಭ್ಯಾಸ ರೂಢಿಸಿಕೊಳ್ಳಬೇಕು. ಟಿಪ್ಪಣಿ ಮಾಡಿಕೊಳ್ಳಬೇಕು. ಮನನ ಮಾಡಿಕೊಳ್ಳಬೇಕು. ಭಾಷಾ ಪ್ರಭುತ್ವ ಬೆಳೆಸಿಕೊಳ್ಳಬೇಕು’ ಎಂದರು.

‘ಕಷ್ಟಗಳಿಗೆ ಹೆದರಬಾರದು, ಸಣ್ಣ ವಿಚಾರಗಳಿಗೆ ಕುಪಿತಗೊಳ್ಳ ಬಾರದು, ಗೊಂದಲಕ್ಕೆ ಒಳಗಾಗಬಾರದು. ಗುರಿ ಕಡೆಗೆ ಸ್ಪಷ್ಟ ಹೆಜ್ಜೆ ಇಡಬೇಕು. ತಿಂಗಳುಗಟ್ಟಲೇ, ವರ್ಷಗಟ್ಟಲೇ ಓದಬೇಕು. ನಿದ್ದೆಗೆಟ್ಟರೂ ಪರವಾಗಿಲ್ಲ. ಗುರಿ ತಲುಪಬೇಕು’ ಎಂದು ಹೇಳಿದರು.

ಐಎಎಸ್ ಬಾಬಾ ಸಂಸ್ಥಾಪಕ ನಿರ್ದೇಶಕ ಮೋಹನಕುಮಾರ್ ಎಸ್ ಮಾತನಾಡಿ,‘ಮಧ್ಯಮ ವರ್ಗದವರಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ರೂಢಿಯಾಗಿರುತ್ತದೆ. ಅದನ್ನೇ ಶಕ್ತಿಯನ್ನಾಗಿ ಮಾಡಿಕೊಂಡಾಗ ಸಾಧನೆಗೆ ಹೆಚ್ಚು ಅವಕಾಶ ಸಿಗುತ್ತದೆ. ಯೌವನ ವ್ಯರ್ಥ ಮಾಡಿಕೊಳ್ಳದೆ, ಸಾಧನೆಗೆ ಸದ್ಬಳಕೆ ಮಾಡಿಕೊಳ್ಳಬೇಕು’ ಎಂದರು.

ಬೆಳಗಾವಿಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಜಂಟಿ ಆಯುಕ್ತ ಶಂಕರಾನಂದ ಬನಶಂಕರಿ, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಆಯುಕ್ತ ಡಾ.ಗೋಪಾಲಕೃಷ್ಣ ಬಿ, ಪ್ರಜಾವಾಣಿ ಹುಬ್ಬಳ್ಳಿ ಬ್ಯುರೊ ಮುಖ್ಯಸ್ಥ ರಾಹುಲ ಬೆಳಗಲಿ, ‘ಪ್ರಜಾವಾಣಿ’, ‘ಡೆಕ್ಕನ್ ಹೆರಾಲ್ಡ್’ ಹುಬ್ಬಳ್ಳಿ ಬ್ಯೂರೊ ಪ್ರಸರಣ ವ್ಯವಸ್ಥಾಪಕ ಡೆನ್ನಿಸ್ ಬಿ, ಬೆಂಗಳೂರು ಎಜಿಎಂ ಸರವಣ, ಬೆಳಗಾವಿ ವಿಭಾಗದ ವ್ಯವಸ್ಥಾಪಕ ರವಿ ಹೆಗಡೆ, ಹುಬ್ಬಳ್ಳಿ ಬ್ಯೂರೊ ಜಾಹಿರಾತು ವಿಭಾಗದ ಮುಖ್ಯಸ್ಥ ದಿವಾಕರ ಭಟ್, ಕಲಬುರಗಿ ಬ್ಯೂರೊ ಪ್ರಸರಣ ಸಹಾಯಕ ವ್ಯವಸ್ಥಾಪಕ ನಾಗಭೂಷಣ ಮುಂತಾದವರು ಇದ್ದರು.

ಧಾರವಾಡದಲ್ಲಿ ಬುಧವಾರ ನಡೆದ ‘ಗೈಡಿಂಗ್ ಫೋರ್ಸ್’ ಕಾರ್ಯಕ್ರಮದಲ್ಲಿ ಶಾಸಕ ಪ್ರದೀಪ ಈಶ್ವರ ಮಾತನಾಡಿದರು. ಡಾ.ಗೋಪಾಲಕೃಷ್ಣ ಬಿ, ಮೋಹನಕುಮಾರ್ ಎಸ್ ಮತ್ತು ಶಂಕರಾನಂದ ಬನಶಂಕರಿ ಇದ್ದಾರೆ

ಮೈಸೂರು ವಿವಿ ಕುಲಪತಿ ನೇಮಕಕ್ಕೆ ತಡೆ

ಬೆಂಗಳೂರು: ಮೈಸೂರು ವಿ.ವಿ ಕುಲಪತಿ ಯಾಗಿ ಪ್ರೊ. ಎನ್.ಕೆ. ಲೋಕನಾಥ್ ಅವರನ್ನು ನೇಮಿಸಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ಹೊರಡಿಸಿದ್ದ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಲೋಕನಾಥ್ ನೇಮಕವನ್ನು ಪ್ರಶ್ನಿಸಿ ಪ್ರೊ.ಶರತ್ ಅನಂತಮೂರ್ತಿ (ಸಾಹಿತಿ ಯು.ಆರ್.ಅನಂತಮೂರ್ತಿ ಅವರ ಪುತ್ರ) ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಇ.ಎಸ್. ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ಪ್ರತಿವಾದಿಗಳಾದ ಕುಲಾಧಿಪತಿ, ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿ, ಮೈಸೂರು ವಿ.ವಿ. ಶೋಧನಾ ಸಮಿತಿ ಮತ್ತು ಲೋಕನಾಥ್ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆ ಮುಂದೂಡಿದೆ.

ವಿಚಾರಣೆ ವೇಳೆ ಹಿರಿಯ ವಕೀಲ ರವಿವರ್ಮ ಕುಮಾರ್, ‘ಕುಲಪತಿಗಳ ನೇಮಕಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿಗೆ ವಿರುದ್ಧವಾಗಿ ಲೋಕನಾಥ್ ಅವರನ್ನು ನೇಮಿಸಲಾಗಿದೆ’ ಎಂದು ಅರುಹಿದರು.

‘ಅಂತೆಯೇ, ಸ್ಥಿರಾಸ್ತಿ ಒತ್ತುವರಿಗೆ ಸಂಬಂಧಿಸಿದಂತೆ ಲೋಕನಾಥ್ ವಿರುದ್ಧ ಮೈಸೂರಿನ ಜಯಲಕ್ಷ್ಮೀಪುರಂನ ಡಿ.ವಿ.ಶಶಿಧರ್ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ 2020ರ ನ.4ರಂದು ವಂಚನೆ ಪ್ರಕರಣ ದಾಖಲಿಸಿದ್ದರು. ಈ ಕುರಿತಂತೆ ಮೈಸೂರಿನ ಜೆಎಂಎಫ್‌ಸಿ ಕೋರ್ಟ್‌ನಲ್ಲಿ ವಿಚಾರಣೆ ಬಾಕಿ ಇದೆ. ಆದರೆ, ಲೋಕನಾಥ್ ಇದನ್ನು ಮುಚ್ಚಿಟ್ಟಿದ್ದಾರೆ’ ಎಂದು ವಿವರಿಸಿದರು.

ಅರ್ಜಿಯಲ್ಲಿ ಏನಿದೆ?: ‘ದಾಖಲೆ ಪ್ರಕಾರ ಕುಲಪತಿ ಸ್ಥಾನಕ್ಕೆ ಅರ್ಜಿ ಸಲ್ಲಿಸಲು 20 ದಿನ ಸಮಯ ನೀಡಿ, 2022ರ ನ.8ರಂದು ಅಧಿಸೂಚನೆ ಹೊರಡಿಸಲಾಗಿತ್ತು. ಅದರಂತೆ ಅರ್ಜಿ ಸಲ್ಲಿಕೆಗೆ ನ.28 ಕೊನೆ ದಿನವಾಗಿತ್ತು. ಅದೇ ದಿನ ಲೋಕ ನಾಥ್ ತಮ್ಮ ಪ್ರಕರಣದ ವಿರುದ್ಧ ಹೈಕೋರ್ಟ್ ನಲ್ಲಿ ತಡೆಯಾಜ್ಞೆ ಪಡೆದಿದ್ದಾರೆ. ಜತೆಗೆ 2007ರಲ್ಲಿ ನಡೆದ ಪ್ರೊಫೆಸರ್ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎನ್ನುವ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ನೇಮಕ ಮಾಡಲಾಗಿದ್ದ ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿ ರಂಗ ವಿಠಲಾಚಾರ್ ಆಯೋಗವು, ಯುಜಿಸಿ ನಿಯಮಗಳನುಸಾರ ಅವರು ಪ್ರೊಫೆಸರ್ ಹುದ್ದೆಗೆ ಅರ್ಹರಲ್ಲವೆಂದು ಹೇಳಿದೆ’ ಎಂಬ ಅಂಶಗಳನ್ನು ಅರ್ಜಿ ಯಲ್ಲಿ ವಿವರಿಸಲಾಗಿದೆ.

ಸ್ಪರ್ಧಾ ವಾಣಿ

EXAM MASTERMIND™ DH ಪ್ರಜಾವಾಣಿ

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಮತ್ತಷ್ಟು 'ಮಾದರಿ ಪ್ರಶ್ನೋತ್ತರ'ಕ್ಕಾಗಿ

'ಸಾಮಾನ್ಯ ಜ್ಞಾನ' ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿದ ಬಹು ಆಯ್ಕೆ ಪ್ರಶ್ನೋತ್ತರಗಳು ಹಾಗೂ ನಾಗರಿಕ ಸೇವಾ ಪರೀಕ್ಷೆಗೆ ಪೂರಕವಾದ ವಿಶೇಷ ಲೇಖನಗಳು ಮತ್ತು ವಿಡಿಯೊಗಳಿಗಾಗಿ ಪ್ರಜಾವಾಣಿ – ಡೆಕ್ಕನ್ ಹೆರಾಲ್ಡ್ ಪತ್ರಿಕೆಯ 'ಮಾಸ್ಟರ್ ಮೈಂಡ್' ಇ- ಪೇಪರ್‌ಗೆ ಚಂದಾದಾರರಾಗಿ, ಚಂದಾಕ್ಕಾಗಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.

www.exammastermind.com

ಮಾದರಿ ಪ್ರಶ್ನೋತ್ತರಗಳು

ಐಎಎಸ್, ಕೆಎಎಸ್, ಕೆಪಿಎಸ್‌ಸಿ ಸೇರಿದಂತೆ ವಿವಿಧ ಹುದ್ದೆಗಳಿಗಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

ಸಾಮಾನ್ಯ ಜ್ಞಾನ

1. ಭಾರತದ ಕೆಳಗಿನ ಯಾವ ರಾಜ್ಯದಲ್ಲಿ ಕೋಲ್ಮಿಂಚಿನ ಘಟನೆಗಳು ಹೆಚ್ಚಾಗಿ ಕಂಡುಬರುತ್ತವೆ?

ಎ. ಒಡಿಶಾ ಬಿ. ನಾಗಾಲ್ಯಾಂಡ್
ಸಿ. ಉತ್ತರ ಪ್ರದೇಶ ಡಿ. ಮಧ್ಯಪ್ರದೇಶ

ಉತ್ತರ : ಎ

2. ಇತ್ತೀಚೆಗೆ ಕೆನಡಾದ ಯಾವ ಪ್ರದೇಶಗಳಲ್ಲಿ ಕಾಡ್ಗಿಚ್ಚುಗಳ ಘಟನೆಗಳು ಹೆಚ್ಚಾಗಿ ಕಂಡುಬಂದಿವೆ?

1. ಬ್ರಿಟಿಷ್ ಕೊಲಂಬಿಯಾ 2. ಆಲ್ಬರ್ಟಾ
3. ಒಂಟಾರಿಯೋ 4. ನೋವಾ ಸ್ಕಾಟಿಯಾ

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ. 1 ಮಾತ್ರ ಬಿ. 1, 2, 3 ಮತ್ತು 4
ಸಿ. 2 ಮತ್ತು 3 ಡಿ. 3 ಮತ್ತು 4.

ಉತ್ತರ: ಬಿ

ಸಾಂದರ್ಭಿಕ ಚಿತ್ರ

3. ಕೆಳಗಿನ ಯಾವ ರಾಷ್ಟ್ರಗಳು ಯುನೆಸ್ಕೊ ಸಂಸ್ಥೆಯ ಸದಸ್ಯತ್ವವನ್ನು ಹೊಂದಿದ್ದು ವಿಶ್ವಸಂಸ್ಥೆಯ ಸದಸ್ಯತ್ವವನ್ನು ಹೊಂದಿರುವುದಿಲ್ಲ?

1. ಪ್ಯಾಲೆಸ್ತೀನ್ 2. ಕುಕ್ಕು ದ್ವೀಪಗಳು
3. ನ್ಯೂ (Niue) 4. ಇಸ್ರೇಲ್

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ. 1, 2 ಮತ್ತು 3 ಬಿ. 1 ಮತ್ತು 2
ಸಿ. 1 ಮತ್ತು 4 ಡಿ. 3 ಮತ್ತು 4.

ಉತ್ತರ : ಎ

4. ಜಾಗತಿಕ ಮಟ್ಟದಲ್ಲಿ ಅಣುಬಾಂಬ್ ಸಂಗ್ರಹಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ಜಾಗತಿಕ ಮಟ್ಟದಲ್ಲಿ ಅತಿ ಹೆಚ್ಚು ಅಣು ಬಾಂಬ್‌ಗಳ ದಾಸ್ತಾನು ರಷ್ಯಾದಲ್ಲಿದೆ.
2. ಪ್ರಸ್ತುತ ಸಂದರ್ಭದಲ್ಲಿ ನಾಲ್ಕು ರಾಷ್ಟ್ರಗಳು ತಮ್ಮ ರಕ್ಷಣಾ ಪಡೆಗಳಲ್ಲಿ ಅಣುಬಾಂಬ್‌ಗಳನ್ನು ನಿಯೋಜಿಸಿದೆ.
3. ರಕ್ಷಣಾ ಪಡೆಗಳಲ್ಲಿ ಅಣು ಬಾಂಬ್‌ಗಳನ್ನು ನಿಯೋಜಿಸಿರುವ ರಾಷ್ಟ್ರಗಳಲ್ಲಿ ಚೀನಾ ಕೂಡ ಒಂದಾಗಿದೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ. 1 ಮಾತ್ರ ಬಿ. 1 ಮತ್ತು 2
ಸಿ. 2 ಮತ್ತು 3 ಡಿ. 3 ಮಾತ್ರ.

ಉತ್ತರ : ಬಿ

5. ಗಣಿಗಾರಿಕೆಗೆ ಸಂಬಂಧಿಸಿದಂತೆ ಇತ್ತೀಚೆಗೆ ಯಾವ ನದಿ ಪಾತ್ರ ವ್ಯವಸ್ಥೆ ಸುದ್ದಿಗೆ ಕಾರಣವಾಗಿತ್ತು?

ಎ. ಗೌಲ ಬಿ. ಗಂಗಾ
ಸಿ. ಯಮುನಾ ಡಿ. ಗೋದಾವರಿ

ಗೌಲ ನದಿ ಚಿತ್ರ: ವಿಕಿ ಕಾಮನ್ಸ್

ಉತ್ತರ : ಎ

6. ಇತ್ತೀಚೆಗೆ ಕೆಳಗಿನ ಯಾವ ದ್ವೀಪದ ಹೆಸರನ್ನು ಕೆ'ಗರಿ ಎಂದು ನಾಮಕರಣ ಮಾಡಲಾಗಿದೆ?

ಎ. ಪ್ರಗತಿ ದ್ವೀಪ. ಬಿ. ಉನ್ನತಿ ದ್ವೀಪ.
ಸಿ. ಫ್ರೇಜರ್ ದ್ವೀಪಗಳು. ಡಿ. ಸಭಾಂಗ್ ದ್ವೀಪಗಳು.

ಉತ್ತರ : ಸಿ

7. ಭಾರತಕ್ಕೆ ಸ್ವದೇಶಿ ದಿಕ್ಸೂಚಿ ಏಕೆ ಅವಶ್ಯಕವಾಗಿದೆ?

ಎ. ಭಾರತದ ಸುತ್ತಲಿನ 1500 ಕಿಲೋಮೀಟರ್ ವರೆಗಿನ ಸ್ಥಳಗಳ ಮಾಹಿತಿ ಪಡೆಯಲು ಸಹಾಯಕವಾಗಲಿದೆ.
ಬಿ. ಅಮೆರಿಕಾದ ಜಿಪಿಎಸ್ ಮೇಲಿನ ಅವಲಂಬನೆ ಕಡಿಮೆಗೊಳಿಸಲು ಸಹಾಯಕವಾಗಲಿದೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ. ಹೇಳಿಕೆ ಎ ಮಾತ್ರ ಸರಿಯಾಗಿದೆ.
ಬಿ. ಹೇಳಿಕೆ ಬಿ ಮಾತ್ರ ಸರಿಯಾಗಿದೆ.
ಸಿ. ಮೇಲಿನ ಎರಡೂ ಹೇಳಿಕೆಗಳು ಸರಿಯಾಗಿವೆ.
ಡಿ. ಮೇಲಿನ ಎರಡೂ ಹೇಳಿಕೆಗಳು ತಪ್ಪಾಗಿವೆ.

ಉತ್ತರ: ಸಿ.

8. ಐರೋಪ್ಯ ಒಕ್ಕೂಟದ ದಿಕ್ಸೂಚಿ ವ್ಯವಸ್ಥೆಯ ಹೆಸರೇನು?

ಎ. ಜಿಪಿಎಸ್. ಬಿ. ಗ್ಲೋನಾಸ್
ಸಿ. ಗೆಲಿಲಿಯೊ ಡಿ. ಬೇಡೌ

ಉತ್ತರ: ಸಿ.

9. ಸಿಂಧೂ ನಾಗರಿಕತೆಯ ಅವನತಿಯ ಕುರಿತು ಐಐಟಿ ಖರಗ್ ಪುರ ಸಂಶೋಧನಾ ತಂಡ ನೀಡಿದ ವರದಿ ಪ್ರಮುಖವಾದ ಅಂಶಗಳು ಯಾವುವು

ಎ. ಸಿಂಧೂ ನಾಗರಿಕತೆಯ ಅವನತಿಗೆ ಹವಾಮಾನ ವೈಪರೀತ್ಯ ಕಾರಣವಾಗಿದೆ.
ಬಿ. ತೀವ್ರವಾದ ಮುಂಗಾರು ಮಳೆಯ ಪರಿಣಾಮದಿಂದ ನದಿಯಲ್ಲಿ ನೀರು ಉಕ್ಕಿ ಹರಿದದು.

ಕೋಡ್ ಬಳಸಿ ಸರಿಯಾದ ಉತ್ತರ ಗುರುತಿಸಿ

ಎ. ಹೇಳಿಕೆ ಎ ಮಾತ್ರ ಸರಿಯಾಗಿದೆ.
ಬಿ. ಹೇಳಿಕೆ ಬಿ ಮಾತ್ರ ಸರಿಯಾಗಿದೆ.
ಸಿ. ಮೇಲಿನ ಎರಡೂ ಹೇಳಿಕೆಗಳು ಸರಿಯಾಗಿವೆ.
ಡಿ. ಮೇಲಿನ ಎರಡೂ ಹೇಳಿಕೆಗಳು ತಪ್ಪಾಗಿವೆ.

ಉತ್ತರ:ಸಿ.

10. ಹರಪ್ಪ ನಾಗರಿಕತೆಯ ಜನ ಯಾವ ರೀತಿ ವ್ಯವಸಾಯ ಮಾಡುತ್ತಿದ್ದರು?

ಎ. ಗೋಧಿ, ಬಾರ್ಲಿ ಮತ್ತು ಭತ್ತ ಬೆಳೆಯುತ್ತಿದ್ದರು.
ಬಿ. ಮನೆಗಳಲ್ಲಿ ಆಹಾರ ಧಾನ್ಯಗಳ ಸಂಸ್ಕರಣೆ ಪದ್ಧತಿ ಇತ್ತು.

ಕೋಡ್ ಬಳಸಿ ಸರಿಯಾದ ಉತ್ತರ ಗುರುತಿಸಿ

ಎ. ಹೇಳಿಕೆ ಎ ಮಾತ್ರ ಸರಿಯಾಗಿದೆ.
ಬಿ. ಹೇಳಿಕೆ ಬಿ ಮಾತ್ರ ಸರಿಯಾಗಿದೆ.
ಸಿ. ಮೇಲಿನ ಎರಡೂ ಹೇಳಿಕೆಗಳು ಸರಿಯಾಗಿವೆ.
ಡಿ. ಮೇಲಿನ ಎರಡೂ ಹೇಳಿಕೆಗಳು ತಪ್ಪಾಗಿವೆ.

ಉತ್ತರ-ಸಿ.

11. ನ್ಯಾವಿಗೇಶನ್ ಉಪಗ್ರಹಗಳು ಯಾವ ಕಾರ್ಯಗಳಿಗೆ ಉಪಯುಕ್ತವಾಗಲಿವೆ?

ಸಾಂದರ್ಭಿಕ ಚಿತ್ರ

ಎ. ಬಳಕೆದಾರರಿಗೆ ತಾವಿರುವ ನಿಖರ ಸ್ಥಳದ ಮಾಹಿತಿ ಅರಿಯಲು ಸಹಾಯಕವಾಗಲಿದೆ.
ಬಿ. ಭೂಪಟಗಳ ಸೇವೆ ಮತ್ತು ಕ್ಷಿಪಣಿಗಳ ಡೇಟಾ ತಿಳಿಯಲು ಸಹಾಯಕವಾಗಲಿದೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ. ಹೇಳಿಕೆ ಎ ಮಾತ್ರ ಸರಿಯಾಗಿದೆ.
ಬಿ. ಹೇಳಿಕೆ ಬಿ ಮಾತ್ರ ಸರಿಯಾಗಿದೆ.
ಸಿ. ಮೇಲಿನ ಎರಡೂ ಹೇಳಿಕೆಗಳು ಸರಿಯಾಗಿವೆ.
ಡಿ. ಮೇಲಿನ ಎರಡೂ ಹೇಳಿಕೆಗಳು ತಪ್ಪಾಗಿವೆ.

ಉತ್ತರ:ಸಿ.

12. ಮೊಹೆಂಜೊದಾರೊ ಎಂಬ ನಗರವನ್ನು ಶೋಧಿಸಿದವರಾರು?

ಎ. ಆರ್ ಡಿ ಬ್ಯಾನರ್ಜಿ ಬಿ. ದಯಾರಾಮ್ ಸಹಾನಿ
ಸಿ. ಅಲೆಕ್ಸಾಂಡರ್ ಕನ್ನಿಂಗ್ ಹ್ಯಾಮ್ ಡಿ. ಸರ್ ಜಾನ್ ಮಾರ್ಷಲ್

ಉತ್ತರ: ಎ

ಪರೀಕ್ಷೆ ತಯಾರಿಗೆ ತಂತ್ರಜ್ಞಾನ ಬಳಸಿ

ಯುಪಿಎಸ್‌ಸಿ ಟಾಪರ್ಸ್ ಟಿಪ್ಸ್

ಕೆ.ಸೌರಭ್

ಪವರ್ ಎಲೆಕ್ಟ್ರಾನಿಕ್ಸ್‌ನಲ್ಲಿ ಎಂ.ಟೆಕ್ ಪದವಿ ಪಡೆದಿರುವ ಮೈಸೂರಿನ ವಿಜಯನಗರದ ಕೆ.ಸೌರಭ್ 2022ರ ಕೇಂದ್ರ ಲೋಕಸೇವಾ ಆಯೋಗದ(ಯುಪಿಎಸ್‌ಸಿ) ಪರೀಕ್ಷೆಯಲ್ಲಿ 260ನೇ ರ್‍ಯಾಂಕ್ ಪಡೆದಿದ್ದಾರೆ. ಸದ್ಯ ಡೆಹ್ರಾಡೂನ್‌ನ ಇಂದಿರಾಗಾಂಧಿ ರಾಷ್ಟ್ರೀಯ ಅರಣ್ಯ ಅಕಾಡೆಮಿಯಲ್ಲಿ ಭಾರತೀಯ ಅರಣ್ಯ ಸೇವೆ ತರಬೇತಿಯಲ್ಲಿರುವ ಅವರು, ಈ ಬಾರಿಯ ಪ್ರಯತ್ನದಲ್ಲಿ ವಿದೇಶಾಂಗ ಸೇವೆಗೆ (ಐಎಫ್‌ಎಸ್) ಸೇರುವ ಕನಸನ್ನು ನನಸು ಮಾಡಿಕೊಂಡಿದ್ದಾರೆ. ಈ ಯಶಸ್ವಿ ಪಯಣದಲ್ಲಿ ಅವರು ಸ್ಪರ್ಧಾತ್ಮಕ ಪರೀಕ್ಷೆಗೆ ಹೇಗೆ ಸಿದ್ಧತೆ ನಡೆಸಿದ್ದರು ಎಂಬುದರ ಕುರಿತು 'ಸ್ಪರ್ಧಾವಾಣಿ' ಯೊಂದಿಗೆ ತಮ್ಮ ಅನುಭವ ಹಂಚಿಕೊಂಡಿದ್ದಾರೆ.

ಮೋಹನ್ ಕುಮಾರ ಸಿ.

●ಯುಪಿಎಸ್ಸಿ'ವರೆಗೂ ನಿಮ್ಮ ತಯಾರಿ ಹೇಗಿತ್ತು ? ಎಷ್ಟನೇ ಪ್ರಯತ್ನಕ್ಕೆ ಪೂರ್ಣಗೊಳಿಸಿದಿರಿ ?

2019ರಲ್ಲಿ ಮೊದಲ ಬಾರಿಗೆ ಪ್ರಿಲಿಮ್ಸ್ ಪರೀಕ್ಷೆ ಬರೆದೆ. ಅದರಲ್ಲಿ 50 ಅಂಕವೂ ಬಂದಿರಲಿಲ್ಲ. ಅತಿ ಕೆಟ್ಟ ಅಂಕ ಪಡೆದಿದ್ದೆ. 2020 ರಿಂದ ಯೋಜಿತವಾಗಿ ತಯಾರಿ ಆರಂಭಿಸಿದೆ. 2021ರಲ್ಲಿ ಮತ್ತೆ ಪರೀಕ್ಷೆ ಬರೆದೆ. ಭಾರತೀಯ ಅರಣ್ಯ ಸೇವೆ (45ನೇ ರ್‍ಯಾಂಕ್) ಹಾಗೂ ನಾಗರಿಕ ಸೇವೆಯಲ್ಲಿ (725ನೇ ರ್‍ಯಾಂಕ್) ಭಾರತೀಯ ಅಂಚೆ ಸೇವೆಗೆ ಅವಕಾಶ ಸಿಕ್ಕಿತು. ನಾನು ಅರಣ್ಯ ಸೇವೆಯನ್ನೇ ಆಯ್ಕೆ ಮಾಡಿಕೊಂಡೆ. ನನಗೆ ಮೊದಲಿನಿಂದಲೂ ಭಾರತೀಯ ವಿದೇಶಾಂಗ ಸೇವೆಗೆ(ಇಂಡಿಯನ್ ಫಾರಿನ್ ಸರ್ವೀಸ್) ಸೇರಬೇಕೆಂಬ ಬಯಕೆಯಿತ್ತು. ಹೀಗಾಗಿ, ಅರಣ್ಯ ಸೇವಾ ವಿಭಾಗದಲ್ಲಿದ್ದು ಕೊಂಡೇ, ನಾಲ್ಕನೇ ಬಾರಿಗೆ ಯುಪಿಎಸ್‌ಸಿ ಪರೀಕ್ಷೆ ಬರೆದೆ. ಈಗ ಬಂದಿರುವ ರ್‍ಯಾಂಕ್‌ಗೆ ಭಾರತೀಯ ವಿದೇಶಾಂಗ ಸೇವೆ ಸಿಗುವ ನಿರೀಕ್ಷೆಯಿದೆ.



ಪೋಷಕರಾದ ಡಾ. ಎಂ.ಜಾನಕಿ ಮತ್ತು ಡಾ. ಕೆಂಪರಾಜು ಅವರೊಂದಿಗೆ ಸೌರಭ್

●ನಿಮ್ಮ ಸಾಧನೆಗೆ ಪುನೀತ್ ರಾಜ್ ಕುಮಾರ್ ಅವರ 'ಪೃಥ್ವಿ' ಸಿನಿಮಾ ಪ್ರೇರಣೆಯಂತೆ?

ಪದವಿ ಓದುವಾಗ, ಪುನೀತ್ ಅವರ 'ಪೃಥ್ವಿ' ಸಿನಿಮಾ ನೋಡಿದ್ದೆ. ಅದು ನನ್ನನ್ನು ಬಹಳ ಆಕರ್ಷಿಸಿತ್ತು. ಈಗಲೂ ಸಿನಿಮಾವನ್ನು ನೆನೆದರೆ ರೋಮಾಂಚನವಾಗುತ್ತದೆ. ಅದರಲ್ಲಿ ಜಿಲ್ಲಾಧಿಕಾರಿ ಪಾತ್ರ ಮಾಡಿರುವ ಪುನೀತ್ ಅವರು ಬಳ್ಳಾರಿ ಗಣಿಗಾರಿಕೆಯಿಂದ ಕಲುಷಿತಗೊಂಡ ನೀರನ್ನು ಸಚಿವರ ಎದುರು ನಿರ್ಭಯವಾಗಿ 'ಈ ಬಾಟಲಿ ನೀರನ್ನು ಕುಡಿಯಿರಿ. ಜನರು ಇದೇ ನೀರನ್ನು ಕುಡಿಯುತ್ತಿದ್ದಾರೆ. ಕುಡಿದರೆ ನಿಮ್ಮ ಕಡತಕ್ಕೆ ಸಹಿ ಹಾಕುವೆ' ಎನ್ನುತ್ತಾರೆ. ಈ ಒಂದು ದೃಶ್ಯ ನಾನೂ ನಾಗರಿಕ ಸೇವೆ ಸೇರಲು ಪ್ರೇರೇಪಿಸಿತು.

●ಪೋಷಕರ ಪ್ರೋತ್ಸಾಹ ಹೇಗಿತ್ತು?

ತಂದೆ, ಮೈಸೂರು ವಿಶ್ವವಿದ್ಯಾಲಯದ ಬಯೊಕೆಮಿಸ್ಟ್ರಿ ಅಧ್ಯಯನ ಕೇಂದ್ರದ ಪ್ರಾಧ್ಯಾಪಕ ಡಾ.ಕೆಂಪರಾಜು, ತಾಯಿ ಡಾ.ಎಂ.ಜಾನಕಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಶಿಕ್ಷಣ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕಿ. ಇಬ್ಬರ ಪ್ರೋತ್ಸಾಹ ದೊಡ್ಡದು. 2019ರ ಪರೀಕ್ಷೆಯಲ್ಲಿ ನಿರಾಶೆಯಾದಾಗ ಬೆನ್ನುತಟ್ಟಿದರು. ಆಗೆಲ್ಲ ಕೆಲವು ದಿನ 16 ಗಂಟೆ ಓದುತ್ತಿದ್ದೆ. ನಿರಂತರತೆ ಇರಲಿಲ್ಲ. ತಂದೆ ಅವರು 'ದೇಹಕ್ಕೆ ವ್ಯಾಯಾಮ ಸಿಗದಿದ್ದರೆ ಕಷ್ಟ' ಎಂದು ನಿತ್ಯ ಸಂಜೆ ಪಾರ್ಕ್‌ಗೆ ಕರೆದುಕೊಂಡು ಹೋಗಿ ಅಭ್ಯಾಸ ಮಾಡಿಸುತ್ತಿದ್ದರು. ದಿನಕ್ಕೆ ತಲಾ 8 ಗಂಟೆ ನಿದ್ದೆ, ಓದು ಇತ್ತು. ಇನ್ನು 8 ಗಂಟೆ ವ್ಯಾಯಾಮ, ಸ್ನೇಹಿತರೊಂದಿಗೆ ಮಾತು.. ಹೀಗೆ ಸಾಗಿತ್ತು ಅಭ್ಯಾಸ.

●ಕೋಚಿಂಗ್ ಸೆಂಟರ್ ನೆರವು ಎಷ್ಟು ಅಗತ್ಯವೆನಿಸುತ್ತದೆ? ನಿಮ್ಮ ಓದಿನ ಪ್ರಕ್ರಿಯೆ ಹೇಗಿತ್ತು ?

ಈಗಿನ ಸಂದರ್ಭದಲ್ಲಿ ಕೋಚಿಂಗ್ ಅಗತ್ಯವಿಲ್ಲ ಅಂತ ಎನ್ನಿಸುತ್ತದೆ. ಆದರೆ, ಅಣಕು ಪರೀಕ್ಷೆ ಹಾಗೂ ಸಂದರ್ಶನಕ್ಕೆ ಮಾತ್ರ ತರಬೇತಿ ಕೇಂದ್ರಗಳು ಬೇಕಾಗುತ್ತವೆ. ಈಗ ಆಧುನಿಕ ತಂತ್ರಜ್ಞಾನಗಳಿರುವುದರಿಂದ ಓದುವುದಕ್ಕೆ ಸುಲಭವಾಗಿ ಸಾಕಷ್ಟು ಆಕರಗಳು ಸಿಗುತ್ತವೆ. ನಾನಂತೂ, ನಿತ್ಯ ದಿನಪತ್ರಿಕೆಗಳನ್ನು ಓದಿ ನೋಟ್ಸ್ ಮಾಡಿಕೊಳ್ಳುತ್ತಿದ್ದೆ. ಕೈಯಲ್ಲಿ ಬರೆಯುತ್ತ ಕೂರಲಿಲ್ಲ. ತಂತ್ರಜ್ಞಾನದ ನೆರವಿನೊಂದಿಗೆ 'ವಾಯ್ಸ್ ಟು ಟೆಕ್ಸ್ಟ್' ಮೂಲಕ ಪ್ರಚಲಿತ ವಿದ್ಯಮಾನಗಳನ್ನು ಲ್ಯಾಪ್‌ಟಾಪ್‌ನಲ್ಲಿ ದಾಖಲಿಸಿಕೊಳ್ಳುತ್ತಿದ್ದೆ. 'ವಿಷನ್ ಐಎಎಸ್'ನ ತಿಂಗಳ ನೋಟ್ಸ್ ಓದಿ ಟೈಪ್ ಮಾಡಿಕೊಳ್ಳುತ್ತಿದ್ದೆ. 300 ಪುಟದ ಮಾಹಿತಿ ಓದಿ, 10 ಪುಟಗಳಷ್ಟು ಕಿರು ಟಿಪ್ಪಣಿ ಮಾಡಿಕೊಳ್ಳುತ್ತಿದ್ದೆ. ಆ ಟಿಪ್ಪಣಿಯನ್ನು ಮರು ಓದುತ್ತಿದ್ದೆ. ಈ ಪ್ರಯತ್ನಗಳೇ ನನಗೆ ಪರೀಕ್ಷೆಗೆ ನೆರವಾದವು.

●ಮುಖ್ಯ ಪರೀಕ್ಷೆಗೆ ತಯಾರಿ ಹೇಗೆ?

ಬರವಣಿಗೆ ವೇಗವಿದ್ದರಿಂದ ಕಷ್ಟವಾಗಲಿಲ್ಲ. ಮೂರು ಅಣಕು ಪರೀಕ್ಷೆಗಳನ್ನು ಮಾತ್ರ ತೆಗೆದುಕೊಂಡಿದ್ದೆ. ಸಮಾಜಶಾಸ್ತ್ರ ನನ್ನ ಐಚ್ಛಿಕ ವಿಷಯ. ಅದನ್ನು ಆಯ್ಕೆ ಮಾಡಿಕೊಳ್ಳುವಾಗ ಎಚ್ಚರಿಕೆ ಇತ್ತು. ನನ್ನ ಪ್ರಕಾರ, ಯಾರೇ ಆಗಲಿ, ಹೆಚ್ಚು ಅಂಕ ಬರುತ್ತದೆ ಎಂಬ ಕಾರಣಕ್ಕೆ, ಯಾರದ್ದೋ ಸಲಹೆ ಪರಿಗಣಿಸುವುದು ಅಷ್ಟು ಸಮಂಜಸವಲ್ಲ. ಬದಲಿಗೆ, ನಮಗೆ ಯಾವುದು ಇಷ್ಟವೋ, ಅದನ್ನೇ ಆಯ್ಕೆ ಮಾಡಿಕೊಳ್ಳಬೇಕು. ಅದರಿಂದ ಹೆಚ್ಚು ಅಂಕಗಳಿಸಲು ಸಾಧ್ಯ.

●ಸಂದರ್ಶನ ಹೇಗಿರುತ್ತದೆ ? ನಿಮ್ಮ ಅನುಭವ ಹೇಗಿತ್ತು?

ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಳಲ್ಲಿ ನಮ್ಮ(ಅಭ್ಯರ್ಥಿಯ) ಜ್ಞಾನ ಹಾಗೂ ಕೌಶಲಗಳನ್ನು ಪರೀಕ್ಷಿಸಲಾಗಿರುತ್ತದೆ. ಹಾಗಾಗಿ, ಈ ಸಂದರ್ಶನದಲ್ಲಿ ವ್ಯಕ್ತಿತ್ವದ ಪರೀಕ್ಷೆಯಷ್ಟೇ ನಡೆಯುತ್ತದೆ. ನಾವು ಸತ್ಯವನ್ನೇ ಹೇಳಬೇಕು. ಸುಳ್ಳು ಹೇಳಿದರೆ ಸಂದರ್ಶಕರಿಗೆ ಗೊತ್ತಾಗುತ್ತದೆ. ವಿಷಯದ ಬಗ್ಗೆ ಗೊತ್ತಿಲ್ಲದಿದ್ದರೆ ಗೊತ್ತಿಲ್ಲವೆಂದೇ ಹೇಳಬೇಕು. ನನಗೆ ಸಂದರ್ಶನದಲ್ಲಿ 187 ಅಂಕ ಸಿಕ್ಕಿದ್ದವು. ಕಳೆದ ಬಾರಿ 149 ಸಿಕ್ಕಿತ್ತು. ಸಂದರ್ಶನದ ಅಂಕಗಳು ರ್‍ಯಾಂಕ್‌ನ ನಿರ್ಧಾರಕಗಳು.

●ಯುಪಿಎಸ್‌ಸಿ ಪರೀಕ್ಷೆ ಬರೆಯುವವರಿಗೆ ನಿಮ್ಮ ಸಲಹೆ?

ನಾಗರಿಕ ಸೇವಾ ಪರೀಕ್ಷೆಯೇ ಎಲ್ಲವೂ ಅಲ್ಲ. ಜೀವನ ಹಾಗೂ ಸಾವಿನಂತೆ ಪರೀಕ್ಷೆಯನ್ನು ನೋಡಬಾರದು. ಪಾಸು ಮಾಡುವುದೇ ಅಂತಿಮವಲ್ಲ. ಎಲ್ಲ ಉದ್ಯೋಗಗಳಂತೆ ಇಲ್ಲೂ ಸವಾಲುಗಳಿರುತ್ತವೆ. ನಿರಾಶೆಯಾದಾಗ ಬೇಸರ ಬೇಡ. ನಾಗರಿಕ ಸೇವೆಗೆ ತಯಾರಿ ನಡೆಸುತ್ತಲೇ, ಇತರ ಸರ್ಕಾರಿ ಕೆಲಸಗಳ ಪರೀಕ್ಷೆಯನ್ನು ಬರೆಯುವುದೂ ಒಳಿತು.

ಬ್ಯಾಂಕಿಂಗ್ ಪರೀಕ್ಷೆ

'ಆರ್‌ಆರ್‌ಬಿ'ಯಲ್ಲಿ ವಿವಿಧ ಹುದ್ದೆಗಳ ಭರ್ತಿಗಾಗಿ ನಡೆಯುವ ಆಯ್ಕೆ ಪ್ರಕ್ರಿಯೆ, ಪರೀಕ್ಷೆ ಮತ್ತು ಪಠ್ಯಕ್ರಮಗಳ ವಿವರ ಕುರಿತು ಮಾಹಿತಿ ಇಲ್ಲಿದೆ.

'ಆರ್‌ಆರ್‌ಬಿ' ನೇಮಕಾತಿ ಪರೀಕ್ಷಾ ಸಿದ್ಧತೆಯ ಹಾದಿಯಲ್ಲಿ..

ಆರ್.ಕೆ. ಬಾಲಚಂದ್ರ

ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಲ್ಲಿ(ಆರ್‌ಆರ್‌ಬಿ) ಖಾಲಿಯಿರುವ ಹುದ್ದೆಗಳ ಭರ್ತಿಗಾಗಿ (ದೇಶದಲ್ಲಿ ಒಟ್ಟು 8602 ಹುದ್ದೆಗಳು. ಅದರಲ್ಲಿ ಕರ್ನಾಟಕದ ಎರಡು ಬ್ಯಾಂಕ್‌ಗಳಲ್ಲಿ 806 ಹುದ್ದೆಗಳು) ಅರ್ಜಿ ಆಹ್ವಾನ ಮತ್ತು ಅರ್ಜಿ ಸಲ್ಲಿಕೆ ಪ್ರಕ್ರಿಯೆ ಕುರಿತು ಕಳೆದ ಎರಡು ಸಂಚಿಕೆಗಳಲ್ಲಿ ವಿವರವಾಗಿ ಪ್ರಕಟಿಸಲಾಗಿತ್ತು. ಈ ಲೇಖನಗಳಲ್ಲಿ ಆಯ್ಕೆ ಪ್ರಕ್ರಿಯೆ ಹಂತಗಳು, ಪರೀಕ್ಷೆಗಳ ಸ್ವರೂಪ, ಅಂಕಗಳು, ಪರೀಕ್ಷೆಗೆ ನಿಗದಿಪಡಿಸಿದ ಸಮಯ ಕುರಿತು ಮಾಹಿತಿ ನೀಡಲಾಗಿತ್ತು.

ಈ ಸಂಚಿಕೆಯಲ್ಲಿ ವಿವಿಧ ಹುದ್ದೆಗಳಿಗೆ ಆಯ್ಕೆ ಪ್ರಕ್ರಿಯೆ ಹೇಗೆ ನಡೆಯುತ್ತದೆ. ಪರೀಕ್ಷೆಗೆ ನಿಗದಿಪಡಿಸಿರುವ ಪಠ್ಯಕ್ರಮ ಹಾಗೂ ಆ ಪಠ್ಯಗಳನ್ನು ಹೇಗೆ ಓದಬೇಕು – ಈ ವಿಷಯಗಳ ಬಗ್ಗೆ ತಿಳಿದುಕೊಳ್ಳೋಣ.

ಪರೀಕ್ಷಾ ತಯಾರಿ ಹೇಗಿರಬೇಕು ?

ಅಭ್ಯರ್ಥಿಯು ಮೊದಲಿಗೆ ಪರೀಕ್ಷೆಗೆ ನಿಗದಿಪಡಿಸಿರುವ ಪಠ್ಯಕ್ರಮ ಮತ್ತು ಮಾದರಿಯ ಕುರಿತು ಅರಿತಿರಬೇಕು. ಪರಿಣತರ /ತಜ್ಞರ ಸಹಾಯದೊಂದಿಗೆ ಅಧ್ಯಯನ ಸಾಮಗ್ರಿ /ಪುಸ್ತಕಗಳನ್ನು ಆಯ್ಕೆ ಮಾಡಿಕೊಳ್ಳಿ. ದಿನಕ್ಕೆ ಮೂರ್ನಾಲ್ಕು ಗಂಟೆಗಳ ಅಭ್ಯಾಸ ಕಡ್ಡಾಯ. ಹೆಚ್ಚೆಚ್ಚು ಅಣಕು ಪರೀಕ್ಷೆಗಳನ್ನು ಎದುರಿಸುವುದು ಕಡ್ಡಾಯವಾಗಲಿ.

ಕಂಪ್ಯೂಟರ್‌ನಲ್ಲಿ ಎಂ.ಎಸ್ ಆಫೀಸ್ ತಂತ್ರಾಂಶ ಬಳಕೆ ಹಾಗೂ ಶಾರ್ಟ್‌ಕಟ್‌ಗಳು, ಟೈಪಿಂಗ್ ಮತ್ತಿತರ ಕಂಪ್ಯೂಟರ್ ಸಂಬಂಧಿತ ಮೂಲಭೂತ ಜ್ಞಾನವನ್ನು ಹೊಂದಿರುವುದು ಅಗತ್ಯವಾಗಿದೆ. ಈಗೊಮ್ಮೆ ಅವುಗಳನ್ನು ಓದಿ ಪುನರಾವರ್ತಿಸಲು ಸಮಯ ಮಿಸಲಿಡಿ.

ತಾರ್ಕಿಕತೆ (ಲಾಜಿಕಲ್ ರೀಸನಿಂಗ್), ದತ್ತಾಂಶ ವಿಶ್ಲೇಷಣೆ ಮತ್ತು ವ್ಯಾಖ್ಯಾನ (ಡೇಟಾ ಅನಾಲಿಸಿಸ್-ಇಂಟರ್ ಪ್ರಿಟೇಶನ್) ವಿಷಯಗಳನ್ನು ಹೊಸದಾಗಿ ಕಲಿಯುತ್ತಿರುವುದರಿಂದ ಆರಂಭದಲ್ಲಿ ಕಷ್ಟವೆನಿಸಬಹುದು. ಈ ಮೂರು ವಿಭಾಗಗಳಲ್ಲಿ ಕೇಳುವ ಹೆಚ್ಚಿನ ಪ್ರಶ್ನೆಗಳು ಕ್ಲಿಷ್ಟವಾಗಿರುತ್ತವೆ. ಅಭ್ಯರ್ಥಿಗಳು ಸರಳ ಸೂತ್ರಗಳು ಮತ್ತು ತಂತ್ರಗಳನ್ನು ಅನ್ವಯಿಸುವ ಮೂಲಕ ಪರಿಹರಿಸಬೇಕು.

ತಾರ್ಕಿಕತೆ (ಲಾಜಿಕಲ್ ರೀಸನಿಂಗ್): ತಾರ್ಕಿಕ ಪರೀಕ್ಷೆಯಲ್ಲಿ ಮುಖ್ಯವಾಗಿ ಎರಡು ಭಾಗಗಳಿವೆ. ಮೊದಲನೆ ಯದು ಶಾಬ್ದಿಕ (ವರ್ಬಲ್) ಇನ್ನೊಂದು ಅಶಾಬ್ದಿಕ (ನಾನ್ ವರ್ಬಲ್).

ವರ್ಬಲ್ ರೀಸನಿಂಗ್ ಪ್ರಶ್ನೆಗಳಲ್ಲಿ ಪರಿಕಲ್ಪನೆಗಳು ಮತ್ತು ಸಮಸ್ಯೆಗಳನ್ನು ಪದಗಳಲ್ಲಿ ಪ್ರಶ್ನೆಗಳ ರೂಪದಲ್ಲಿ ರುತ್ತವೆ. ಪ್ರಶ್ನೆ ಪತ್ರಿಕೆಯಲ್ಲಿರುವ ಪಠ್ಯ ಅಥವಾ ಪ್ಯಾರಾಗ್ರಾಫ್ ಪ್ರಶ್ನೆಗಳನ್ನು ಅಭ್ಯರ್ಥಿಗಳು ಓದಿ, ಅರ್ಥೈಸಿ ಕೊಂಡು, ಆ ಪ್ರಶ್ನೆಗಳಿಗೆ ಉತ್ತರವಾಗಿ ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿಕೊಳ್ಳಬೇಕು.

ನಾನ್ ವರ್ಬಲ್ ರೀಸನಿಂಗ್ ಪ್ರಶ್ನೆಗಳಲ್ಲಿ, ಪರಿಕಲ್ಪನೆಗಳು ಮತ್ತು ಸಮಸ್ಯೆಗಳನ್ನು ಅಂಕಿ ಅಂಶಗಳು, ಚಿತ್ರಗಳು ಅಥವಾ ರೇಖಾಚಿತ್ರಗಳ ರೂಪದಲ್ಲಿ ನೀಡಲಾಗುತ್ತದೆ. ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸುವ ಮೊದಲು ಅಭ್ಯರ್ಥಿಗಳು ಅವುಗಳನ್ನು ಅರ್ಥಮಾಡಿಕೊಳ್ಳುವ ಅಗತ್ಯವಿದೆ.

ವರ್ಬಲ್ ರೀಸನಿಂಗ್‌ನಲ್ಲಿರುವ ಪಠ್ಯಗಳು: ಸಂಖ್ಯಾ ಸರಣಿ (Number Series), ಅಕ್ಷರ ಸರಣಿ(Letter Series), ಸಾದೃಶ್ಯಗಳು(Analogies), ಕಾರಣ ಮತ್ತು ಪರಿಣಾಮ (Cause & Effect), ಮೌಖಿಕ ವರ್ಗೀಕರಣ(Verbal Classification) ಸೇರಿದಂತೆ ಇಪ್ಪತ್ತಕ್ಕೂ ಹೆಚ್ಚು ಅಧ್ಯಾಯಗಳಿವೆ.

ನಾನ್ ವರ್ಬಲ್ ರೀಸನಿಂಗ್: ಚಿತ್ರ ಸರಣಿ (Image Series), ಆಕಾರಗಳ ನಿರ್ಮಾಣ(Construction of Shapes), ವರ್ಗೀಕರಣ(Classification), ಚಿತ್ರ ಸಾದೃಶ್ಯಗಳು(Picture Analogies) ನಿಯಮ ಪತ್ತೆ(Rule Detection)– ಇಂಥ ವಿಷಯಗಳಿರುತ್ತವೆ.

ಕೆಲವೊಂದು ಪ್ರಶ್ನೆಗಳ ಉದಾಹರಣೆ:

1) ಸಂಖ್ಯಾ ಸರಣಿ:

1)ಈ ಸಂಖ್ಯಾ ಸರಣಿಯಲ್ಲಿ ಖಾಲಿ ಸ್ಥಾನಕ್ಕೆ ಬರಬೇಕಾಗಿರುವ ಸಂಖ್ಯೆ ಯಾವುದು?,

48, 24, 12, ...?

ಆಯ್ಕೆಗಳು :

a) 8 b) 6 c) 4 d) 2

ಉತ್ತರ: B

ವಿವರಣೆ: ಇದು ಸರಳವಾದ ಸರಣಿ. ಇದರಲ್ಲಿ ಪ್ರತಿ ಸಂಖ್ಯೆಯು ಹಿಂದಿನ ಸಂಖ್ಯೆಯ ಅರ್ಧದಷ್ಟು ಇದೆ. ಮುಂದಿನ ಸಂಖ್ಯೆಯನ್ನು ಕಂಡು ಹಿಡಿಯಲು ಪ್ರತಿ ಸಂಖ್ಯೆಯನ್ನು 2 ರಿಂದ ಭಾಗಿಸಬೇಕಿದೆ.

48 ಅನ್ನು 2 ರಿಂದ ಭಾಗಿಸಿದಾಗ, 24 ನ್ನು 24 ನ್ನು 2 ರಿಂದ ಭಾಗಿಸಿದಾಗ, 12 ಅನ್ನು ಪಡೆಯುತ್ತೇವೆ. ಆದ್ದರಿಂದ, 12 ನ್ನು 2 ರಿಂದ ಭಾಗಿಸಿದಾಗ, ನಾವು 6 ಅನ್ನು ಪಡೆಯುತ್ತೇವೆ ಅದ್ದರಿಂದ ಸರಿ ಉತ್ತರದ ಆಯ್ಕೆ B.

2) ಅಕ್ಷರ ಸರಣಿ

1) RQP, ONM, ……, IHG, FED, ಕಬಿಟ್ಟ ಸ್ಥಳದಲ್ಲಿ ಇರಬೇಕಾದ ಅಕ್ಷರಗಳನ್ನು ಹುಡುಕಿ.?

a) CDE b) LKI c) LKJ d) BAC

ಉತ್ತರ: C

ವಿವರಣೆ: ಇಂಗ್ಲಿಷ್ ವರ್ಣಮಾಲೆ(Alpabhet) ಸರಣಿ ಎಡದಿಂದ ಬಲಕ್ಕೆ ಬರೆದಾಗ….

ABC DEF GHI JKL MNO PQR STUVWXYZ. ಈಗ ಇದೇ ಸರಣಿಯನ್ನು ಬಲದಿಂದ ಎಡಕ್ಕೆ ಬರೆದಾಗ (ಹಿಮ್ಮುಖವಾಗಿ) ZYXWVUTS RQP ONM LKJ IHG FED CBA

ಸರಣಿಯು ವರ್ಣಮಾಲೆಯ ಹಿಮ್ಮುಖ ಕ್ರಮದಲ್ಲಿ ಅಕ್ಷರಗಳನ್ನು ಒಳಗೊಂಡಿದೆ. ಆದ್ದರಿಂದ ಸರಣಿಯ ಮಧ್ಯದಲ್ಲಿ ಬರಬೇಕಾದ ಅಕ್ಷರಗಳು ಎಲ್.ಕೆ.ಜೆ.(LKJ)

(ಮುಂದಿನವಾರ ಇನ್ನಷ್ಟು ಮಾದರಿ ಪ್ರಶ್ನೋತ್ತರಗಳು)

(ಲೇಖಕರು: ಬ್ಯಾಂಕಿಂಗ್ ಮತ್ತು ವ್ಯಕ್ತಿತ್ವ ವಿಕಸನ ತರಬೇತುದಾರರು ಹಾಗೂ ವೃತ್ತಿ ಮಾರ್ಗದರ್ಶಕರು, ಮಡಿಕೇರಿ)

ಆಯ್ಕೆ ಪ್ರಕ್ರಿಯೆ ಹೇಗೆ ?

ಮೂರು ಹಂತದ ಹುದ್ದೆಗಳಿಗೆ ಆಯ್ಕೆ ಮಾಡುವಾಗ ಮುಖ್ಯ ಪರೀಕ್ಷೆಯಲ್ಲಿ ಕನಿಷ್ಠ ಅಂಕ ಪಡೆದಿರಬೇಕು. ಪ್ರತಿ ರಾಜ್ಯದಲ್ಲಿರುವ ಖಾಲಿ ಹುದ್ದೆಗಳನ್ನು ಆಧರಿಸಿ, ಅಭ್ಯರ್ಥಿಗಳ ತಾತ್ಕಾಲಿಕಪಟ್ಟಿ ತಯಾರಿಸಲಾಗುತ್ತದೆ.

●**ಆಫೀಸ್ ಅಸಿಸ್ಟೆಂಟ್ (ಮಲ್ಟಿಪರ್ಪಸ್):** ಮುಖ್ಯ ಪರೀಕ್ಷೆಯಲ್ಲಿ ಮಾತ್ರ ಪಡೆದ ಅಂಕಗಳನ್ನು ಅಂತಿಮ ಮೆರಿಟ್ ಪಟ್ಟಿಗಾಗಿ ಪರಿಗಣಿಸಲಾಗುತ್ತದೆ.

●**ಸ್ಕೇಲ್ I – ಅಧಿಕಾರಿ:** ಮುಖ್ಯ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಮಾತ್ರ ಸಂದರ್ಶನ ಮತ್ತು ಅಂತಿಮ ಮೆರಿಟ್ ಪಟ್ಟಿಗಾಗಿ ಶಾರ್ಟ್‌ಲಿಸ್ಟ್‌ಗಾಗಿ ಪರಿಗಣಿಸಲಾಗುತ್ತದೆ.

●**ಸ್ಕೇಲ್ II ಮತ್ತು ಸ್ಕೇಲ್ III ಅಧಿಕಾರಿ:** ಏಕ ಹಂತದ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಸಂದರ್ಶನ ಮತ್ತು ಅಂತಿಮ ಮೆರಿಟ್ ಪಟ್ಟಿಗೆ ಆಯ್ಕೆ ಮಾಡಲು ಪರಿಗಣಿಸಲಾಗುತ್ತದೆ.

●**ಸಂದರ್ಶನ:** ಅಧಿಕಾರಿಗಳ ಹುದ್ದೆಗೆ ಮಾತ್ರ ಇದು ಅನ್ವಯಿಸುತ್ತದೆ (ಸ್ಕೇಲ್ I, II ಮತ್ತು III) ಆಫೀಸರ್ಸ್ ಸ್ಕೇಲ್ I ಹುದ್ದೆಗೆ ಮುಖ್ಯ ಪರೀಕ್ಷೆಯಲ್ಲಿ ಶಾರ್ಟ್‌ಲಿಸ್ಟ್ ಮಾಡಿದ ಅಭ್ಯರ್ಥಿಗಳು ಮತ್ತು ಸಿಆರ್‌ಪಿ-ಆರ್‌ಆರ್‌ಬಿ- XII ಅಡಿಯಲ್ಲಿ ಆಫೀಸರ್ಸ್ ಸ್ಕೇಲ್ II ಮತ್ತು III ಹುದ್ದೆಗೆ ಏಕ ಹಂತದ ಪರೀಕ್ಷೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು.

ಸಂದರ್ಶನಕ್ಕೆ ನಿಗದಿಪಡಿಸಲಾದ ಒಟ್ಟು ಅಂಕಗಳು 100. ಸಂದರ್ಶನದಲ್ಲಿ ಕನಿಷ್ಠ ಅರ್ಹತಾ ಅಂಕಗಳು ಸಾಮಾನ್ಯ ವರ್ಗಕ್ಕೆ ಶೇ 40. ಎಸ್.ಸಿ/ಎಸ್.ಟಿ/ಒಬಿಸಿ/ಅಂಗವಿಕಲ ಅಭ್ಯರ್ಥಿಗಳಿಗೆ ಶೇ 35. ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳ ಆಧಾರದ ಮೇಲೆ ಅಭ್ಯರ್ಥಿಗಳ ಸಂಯೋಜಿತ ಅಂತಿಮ ಸ್ಕೋರ್ ಅನ್ನು ತಯಾರಿಸಲಾಗುತ್ತದೆ.

‘ನೂತನ ಶಾಸಕರಿಗೆ ತರಬೇತಿ ಶಿಬಿರ’

ವೀರೇಂದ್ರ ಹೆಗ್ಗಡೆ, ಜಮಾತೆ ಇಸ್ಲಾಮಿ ಹಿಂದ್‌ನ ಮಹಮ್ಮದ್ ಕುಂಞಿ ಪಾಠ

ಪ್ರಜಾವಾಣಿ ವಾರ್ತೆ

ಯು.ಟಿ. ಖಾದರ್

ಬೆಂಗಳೂರು: ‘16ನೇ ವಿಧಾನಸಭೆಗೆ ಮೊದಲ ಬಾರಿ ಆಯ್ಕೆಯಾಗಿರುವ 70 ಶಾಸಕರಿಗೆ ಇದೇ 26ರಿಂದ ಮೂರು ದಿನ ನೆಲಮಂಗಲದಲ್ಲಿರುವ ಕ್ಷೇಮವನ ಪ್ರಕೃತಿ ಚಿಕಿತ್ಸಾ ಕೇಂದ್ರದಲ್ಲಿ ಪ್ರಕೃತಿ ಮತ್ತು ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದೆ’ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ‘ನೂತನ ಶಾಸಕರು 25ರಂದು ಮಧ್ಯಾಹ್ನ ಕ್ಷೇಮವನಕ್ಕೆ ತೆರಳಿ ನೋಂದಣಿ ಮಾಡಿಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ನಂತರ ಮೂರು ದಿನ ಬೆಳಿಗ್ಗೆ 6ರಿಂದ 9ರವರೆಗೆ ಆರೋಗ್ಯ ಸಂಬಂಧಿ ಚಟುವಟಿಕೆ ನಡೆಯಲಿವೆ. 10 ಗಂಟೆಯಿಂದ ಸಂಜೆವರೆಗೆ ಶಿಬಿರ ಆಯೋಜಿಸಲಾಗಿದೆ’ ಎಂದರು.

‘ಶಿಬಿರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು. ನಿತ್ಯ ಸಂಜೆ ಪ್ರಮುಖ ನಾಯಕರೊಂದಿಗೆ ಸಂವಾದ ನಡೆಯಲಿದೆ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಬಿ.ಎಸ್. ಯಡಿಯೂರಪ್ಪ, ಎಚ್‌.ಡಿ. ಕುಮಾರಸ್ವಾಮಿ ಅವರು ಸಂವಾದದಲ್ಲಿ ಭಾಗವಹಿಸಲಿದ್ದಾರೆ. ಎಂ. ವೀರಪ್ಪ ಮೊಯಿಲಿ, ಎಚ್‌.ಕೆ. ಪಾಟೀಲ, ಕೃಷ್ಣ ಬೈರೇಗೌಡ, ಟಿ.ಬಿ. ಜಯಚಂದ್ರ, ಎಸ್‌. ಸುರೇಶ್ ಕುಮಾರ್, ಮಾಜಿ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾಜಿ ಸಭಾಪತಿ ಬಿ.ಎಲ್‌. ಶಂಕರ್ ತಮ್ಮ ಅನುಭವ ಹಂಚಿಕೊಳ್ಳಲಿದ್ದಾರೆ’ ಎಂದು ಮಾಹಿತಿ ನೀಡಿದರು.

‘ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ, ಗುರುರಾಜ ಕರಜಗಿ, ಜಮಾತೆ ಇಸ್ಲಾಮಿ ಹಿಂದ್‌ನ ಮಹಮ್ಮದ್ ಕುಂಞಿ, ರಾಜಯೋಗಿನಿ ಬ್ರಹ್ಮಕುಮಾರಿ ಆಶಾ ದೀದಿ ಅವರ ಸ್ಫೂರ್ತಿದಾಯಕ ಭಾಷಣ ಇರಲಿದೆ. ಆರ್ಟ್ ಆಫ್ ಲಿವಿಂಗ್‌ನ ರವಿಶಂಕರ ಗುರೂಜಿ ಅವರನ್ನೂ ಆಹ್ವಾನಿಸಲು ಚಿಂತಿಸಲಾಗಿದೆ’ ಎಂದು ವಿವರಿಸಿದರು.

‘ಶಾಸಕರ ಹಕ್ಕು ಮತ್ತು ಕರ್ತವ್ಯಗಳು, ಶಾಸನ ರಚನೆ ಮತ್ತು ಸದಸ್ಯರ ಪಾಲ್ಗೊಳ್ಳುವಿಕೆ, ಶೂನ್ಯವೇಳೆ, ಪ್ರಶ್ನೋತ್ತರ, ಜನ ಮೆಚ್ಚುವ ಶಾಸಕರಾಗುವ ಬಗೆ, ವಿಧಾನಮಂಡಲದ ಸಮಿತಿಗಳು ಮತ್ತು ಸದಸ್ಯರ ಭಾಗವಹಿಸುವಿಕೆ ಸೇರಿದಂತೆ ವಿಧಾನಮಂಡಲದ ಕಾರ್ಯಕಲಾಪಗಳು ಮತ್ತು ಶಾಸಕರ ಜವಾಬ್ದಾರಿಗಳ ಕುರಿತು ಹಿರಿಯ ಸದಸ್ಯರು ಅನುಭವ ಹಂಚಿಕೊಳ್ಳಲಿದ್ದಾರೆ’ ಎಂದರು.

ಪುನರ್ಮನನ ಶಿಬಿರ: ‘ಅಧಿವೇಶನ ಮುಗಿದ ಬಳಿಕ ಹಿರಿಯ ಶಾಸಕರಿಗೆ ಪುನರ್ಮನನ ಶಿಬಿರ ಆಯೋಜಿಸಲಾಗುವುದು. ಹಿರಿಯರಿಗೆ ಮಾಹಿತಿ ನೀಡಿ, ಆಸಕ್ತರ ಅನುಮತಿ ಪಡೆದೇ ಶಿಬಿರ ನಡೆಸಲಾಗುವುದು’ ಎಂದೂ ಹೇಳಿದರು. ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಇದ್ದರು.

‘ಜುಲೈ 3ರಿಂದ 14ರವರೆಗೆ ಅಧಿವೇಶನ’

‘ವಿಧಾನಸಭೆಯ ಮೊದಲ ಅಧಿವೇಶನ ಜುಲೈ 3ರಿಂದ 14ರವರೆಗೆ ನಡೆಯಲಿದೆ. ಮೊದಲ ದಿನ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಉಭಯ ಸದನಗಳನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಬಳಿಕ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಕುರಿತು ಚರ್ಚೆ ನಡೆಯಲಿದೆ. ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 7ರಂದು 2023-24ನೇ ಸಾಲಿನ ಬಜೆಟ್ ಮಂಡಿಸಲಿದ್ದಾರೆ’ ಎಂದು ಖಾದರ್ ತಿಳಿಸಿದರು.

ಆರೋಗ್ಯ ಭಾಗ್ಯ: ‘ವಿಧಾನಸಭೆ ಸಚಿವಾಲಯದ ನೌಕರರಿಗೆ ‘ಆರೋಗ್ಯ ಭಾಗ್ಯ’ ಯೋಜನೆಯ ಸೌಲಭ್ಯ ಕಲ್ಪಿಸಲು ನಿರ್ಧರಿಸಲಾಗಿದೆ. ಇದರಿಂದ ನೌಕರರು ಸರ್ಕಾರಿ ಆಸ್ಪತ್ರೆಗಳ ಜತೆಗೆ ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ನಗದುರಹಿತ ಚಿಕಿತ್ಸೆ ಪಡೆಯಬಹುದು’ ಎಂದೂ ಹೇಳಿದರು.

‘ಹಿಂದಿನ ಘಟನೆ ಕೆದಕುವುದಿಲ್ಲ’

ಬೆಳಗಾವಿಯ ಸುವರ್ಣ ವಿಧಾನಸೌಧದ ವಿಧಾನಸಭೆಯಲ್ಲಿ ಸಾವರ್ಕರ್ ಭಾವಚಿತ್ರ ಅಳವಡಿಸಿರುವುದು ವಿವಾದಕ್ಕೆ ಕಾರಣವಾಗಿತ್ತು. ಸಾವರ್ಕರ್ ಭಾವಚಿತ್ರ ತೆರವುಗೊಳಿಸಲಾಗುವುದೇ?’ ಎಂಬ ಪ್ರಶ್ನೆಗೆ, ‘ಹಿಂದಿನ ಘಟನಾವಳಿಗಳು, ಬೆಳವಣಿಗೆಯನ್ನು ಕೆದಕಲು ಹೋಗುವುದಿಲ್ಲ. ಯಾರ ಭಾವಚಿತ್ರ ಮುಂದುವರಿಸಬೇಕು, ತೆಗೆಯಬೇಕು ಎಂಬುದು ಮುಖ್ಯವಲ್ಲ. ಈಗಿರುವ ರೀತಿಯಲ್ಲೇ ಮುಂದುವರಿಯಲಿದೆ. ಫೋಟೊಗಳಂಥ ವಿಚಾರ ಅನ್ನ, ಶಿಕ್ಷಣ, ಉದ್ಯೋಗ ನೀಡುವುದಿಲ್ಲ. ಹೀಗಾಗಿ ಆ ಬಗ್ಗೆ ಚರ್ಚೆ ಅನಗತ್ಯ’ ಎಂದು ಖಾದರ್ ಹೇಳಿದರು.

ಕೆಎಂಎಫ್: ಭೀಮಾ ನಾಯ್ಕ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಎಲ್‌.ಬಿ.ಪಿ. ಭೀಮಾ ನಾಯ್ಕ

ಬೆಂಗಳೂರು: ಕರ್ನಾಟಕ ಹಾಲು ಮಾರಾಟ ಮಹಾಮಂಡಳ (ಕೆಎಂಎಫ್) ಅಧ್ಯಕ್ಷರಾಗಿ ಎಲ್‌.ಬಿ.ಪಿ. ಭೀಮಾ ನಾಯ್ಕ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಬುಧವಾರ ನಿಗದಿಯಾಗಿದ್ದ ಚುನಾವಣೆಗೆ ಭೀಮಾ ನಾಯ್ಕ ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವರು ಅವಿರೋಧ ಆಯ್ಕೆಯಾದರು. ಭೀಮಾ ನಾಯ್ಕ ಅವರು, ಕಾಂಗ್ರೆಸ್‌ನ ಮಾಜಿ ಶಾಸಕರು. ಜಿಲ್ಲಾ ಪಂಚಾಯಿತಿ ಸದಸ್ಯರಾಗಿ ರಾಜಕೀಯ ಪ್ರವೇಶಿಸಿದ್ದ ಅವರು, ಹಗರಿ ಬೊಮ್ಮನಹಳ್ಳಿ ಕ್ಷೇತ್ರದಿಂದ 2013ರಲ್ಲಿ ಜೆಡಿಎಸ್‌ನಿಂದ ಮತ್ತು 2018ರಲ್ಲಿ ಕಾಂಗ್ರೆಸ್‌ನಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಇತ್ತೀಚೆಗೆ ನಡೆದ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ನೇಮರಾಜ್ ನಾಯಕ್ ವಿರುದ್ಧ ಪರಾಭವಗೊಂಡಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತರಾಗಿರುವ ಇವರು, ಪ್ರಸ್ತುತ ರಾಯಚೂರು, ಬಳ್ಳಾರಿ, ಕೊಪ್ಪಳ ಜಿಲ್ಲೆಗಳ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ನಿರ್ದೇಶಕರಾಗಿದ್ದಾರೆ. ಕೆಎಂಎಫ್ ಆಡಳಿತ ಮಂಡಳಿಯ ಅಧಿಕಾರಾವಧಿ 11 ತಿಂಗಳಷ್ಟೇ ಬಾಕಿ ಉಳಿದಿದ್ದು, 2024ರ ಮೇ ತಿಂಗಳವರೆಗೆ ಭೀಮಾ ನಾಯ್ಕ ಅಧ್ಯಕ್ಷರಾಗಿರುತ್ತಾರೆ.

ಕಾಂಗ್ರೆಸ್‌ನ ಹಾಲಿ ಶಾಸಕ ಮತ್ತು ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಅಧ್ಯಕ್ಷ ಕೆ.ವೈ.ನಂಜೇಗೌಡ ಅವರು ಸಹ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದರು. ಕೆಎಂಎಫ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸದಂತೆ ವಿಧಾನಸಭೆ ಚುನಾವಣೆಗೆ ಮುನ್ನವೇ ನಂಜೇಗೌಡರ ಮನವೊಲಿಸಿದ್ದ ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಭೀಮಾನಾಯ್ಕರ ಹಾದಿಯನ್ನು ಸುಗಮಗೊಳಿಸಿದ್ದರು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುತ್ತಿದ್ದಂತೆ ಹಿಂದಿನ ಸರ್ಕಾರದ ಎಲ್ಲ ನಾಮನಿರ್ದೇಶನಗಳನ್ನೂ ರದ್ದು ಮಾಡಿತ್ತು. ಹೀಗಾಗಿ, ಇದುವರೆಗೆ ಅಧ್ಯಕ್ಷರಾಗಿದ್ದ ಬಾಲಚಂದ್ರ ಜಾರಕಿಹೊಳಿ ಬಹುಮತ ಕಳೆದುಕೊಂಡಿದ್ದರು. ಈ ಕಾರಣಕ್ಕಾಗಿ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿತ್ತು.

₹25 ಸಾವಿರ ಕೋಟಿ ವಹಿವಾಟಿನ ಗುರಿ: ಕೆಎಂಎಫ್ ಪ್ರಸ್ತುತ ₹20,617 ಕೋಟಿಗಳ ವಹಿವಾಟು ಹೊಂದಿದ್ದು, ಮುಂದಿನ ಮೂರು ವರ್ಷಗಳಲ್ಲಿ ₹25 ಸಾವಿರ ಕೋಟಿಗಳ ವಹಿವಾಟಿನ ಗುರಿ ನಿಗದಿಪಡಿಸಿಕೊಳ್ಳಲಾಗಿದೆ ಎಂದು ಭೀಮಾ ನಾಯ್ಕ್ ತಿಳಿಸಿದ್ದಾರೆ.

ಮುಂಬೈ ಮತ್ತು ದುಬೈನಂತಹ ಮಹಾನಗರಗಳಲ್ಲಿ ನಂದಿನಿ ಕೆಫೆ ಶಾಖೆಗಳನ್ನು ಅತಿ ಶೀಘ್ರದಲ್ಲಿ ಆರಂಭಿಸಲಾಗುವುದು ಎಂದು ಹೇಳಿದ್ದಾರೆ.

ಬಾಲಕಿಗೆ ಲೈಂಗಿಕ ಕಿರುಕುಳ: ಬಿಇಒಗೆ ಜೈಲು

ಪ್ರಜಾವಾಣಿ ವಾರ್ತೆ

ಗದಗ: ಕ್ಷೇತ್ರ ಶಿಕ್ಷಣಾಧಿಕಾರಿ (ಬಿಇಒ) ಒಬ್ಬರು ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಸಾಬೀತಾಗಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು 5 ವರ್ಷ ಜೈಲು ಮತ್ತು ₹25 ಸಾವಿರ ದಂಡ ವಿಧಿಸಿ, ಶಿಕ್ಷೆ ಪ್ರಕಟಿಸಿದೆ.

ಅಪರಾಧಿ ಶಂಕ್ರಪ್ಪ ಮುಂಡರಗಿಯ ಎ.ಡಿ. ನಗರದವರು. ಪ್ರಸ್ತುತ ಹೂವಿನಹಡಗಲಿಯಲ್ಲಿ ಬಿಇಒ ಆಗಿದ್ದರು. ಈ ಹಿಂದೆ ಮುಂಡರಗಿಯಲ್ಲಿ ಬಿಇಒ ಆಗಿದ್ದ ಅವರು ಮನೆ ಭೇಟಿ ಕಾರ್ಯಕ್ರಮದ ನೆಪವೊಡ್ಡಿ ಬಾಲಕಿ ಮನೆ ಪ್ರವೇಶಿಸಿದ್ದರು.

‘ಯಾರನ್ನಾದರೂ ಮದುವೆಯಾಗು; ನನ್ನನ್ನೇ ಪ್ರೀತಿಸುತ್ತಿರು’ ಎಂದು ಹೇಳಿ ಆಕೆಗೆ ಲೈಂಗಿಕ ಕಿರುಕುಳ ನೀಡಿದ್ದರು. ಈ ಸಂಬಂಧ ಮುಂಡರಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಇನ್‌ಸ್ಪೆಕ್ಟರ್ ಎಸ್‌.ಎಂ.ಬೆಂಕಿ ಅವರು ಪ್ರಕರಣದ ತನಿಖೆ ನಡೆಸಿ, 2020ರ ಮಾರ್ಚ್ 21ರಂದು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಆರೋಪ ಸಾಬೀತಾಯಿತು. ನ್ಯಾಯಾಧೀಶ ರಾಜೇಶ್ವರ ಶೆಟ್ಟಿ ಶಿಕ್ಷೆ ಪ್ರಕಟಿಸಿದರು. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಅಮರೇಶ ಉಮಾಪತಿ ಹಿರೇಮಠ ವಾದ ಮಂಡಿಸಿದರು.

‘ಧರ್ಮಯುದ್ಧ’ ತಂದ ಸೋಲು: ಅಂತರ್ಯುದ್ಧ ಭುಗಿಲು

• ವೈ.ಗ. ಜಗದೀಶ್

ಸುದ್ದಿ ವಿಶ್ಲೇಷಣೆ

ಕೋಮುದ್ವೇಷದ ಹಾದಿ ಗೆಲುವಿನ ದಡ ಮುಟ್ಟಿಸುತ್ತದೆ ಎಂಬ ನಂಬುಗೆಯಲ್ಲಿ ‘ಧರ್ಮಯುದ್ಧ’ವನ್ನೇ ಕೇಂದ್ರೀಕರಿಸಿ ಬಿಜೆಪಿ ನಡೆಸಿದ ರಾಜಕೀಯ, ಚುನಾವಣೆಯಲ್ಲಿ ಕೈ ಹಿಡಿಯಲಿಲ್ಲ. ಫಲಿತಾಂಶ ಬಂದು ತಿಂಗಳು ಕಳೆದರೂ ಸೋಲಿನ ಕಾರಣವನ್ನು ಒಪ್ಪಿಕೊಳ್ಳಲು ತಯಾರಿಲ್ಲದ ಸೋಲಿನ ‘ಸೂತ್ರಧಾರಿ’ಗಳು ತಮ್ಮ ಶಿಷ್ಯಪಡೆ ಮೂಲಕ ಎತ್ತುತ್ತಿರುವ ತಕರಾರು, ಪಕ್ಷದೊಳಗಿನ ಅಂತರ್ಯುದ್ಧವನ್ನು ಭುಗಿಲೆಬ್ಬಿಸಿದೆ.

15 ದಿನ ರಾಜ್ಯದಲ್ಲಿ ರ‍್ಯಾಲಿ, ರೋಡ್ ಶೋ ನಡೆಸಿದರೂ ಬಿಜೆಪಿಯನ್ನು ದಡ ಹತ್ತಿಸಲಾಗದೇ ಇರುವುದಕ್ಕೆ ಕಾರಣ ಗೊತ್ತಾದಂತಿರುವ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಹಾಗೂ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಇಲ್ಲಿಯ ಉಸಾಬರಿಯೇ ಬೇಡವೆಂಬಷ್ಟು ನಿರಾಸಕ್ತರಾಗಿದ್ದಾರೆ. ಹೀಗಾಗಿಯೇ ಸೋಲಿನ ಆತ್ಮವಿಮರ್ಶೆ ಮಾಡುವತ್ತ ಗಮನವನ್ನೇ ಹರಿಸಿಲ್ಲ ಎಂಬ ಚರ್ಚೆ ಪಕ್ಷದೊಳಗೆ ಶುರುವಾಗಿದೆ.

ಅಭಿವೃದ್ಧಿ, ಜನಕಲ್ಯಾಣ ಕಾರ್ಯಕ್ರಮಗಳಿಗೆ ಆದ್ಯತೆ ನೀಡದೇ ಕೋಮುವಾದಿ ಚಟುವಟಿಕೆಗಳ ಮೂಲಕ ಮತ ಧ್ರುವೀಕರಣಕ್ಕೆ ಒತ್ತು ನೀಡಲಾಯಿತು. ಸುಲಭದ ಈ ದಾರಿಯು ಉತ್ತರ ಪ್ರದೇಶದ ಮಾದರಿಯಲ್ಲಿ ಮತ್ತೆ ಅಧಿಕಾರದ ಬಾಗಿಲು ತೆರೆಸುತ್ತದೆ ಎಂದು ಕಠೋರ ಹಿಂದುತ್ವವಾದಿ ನಾಯಕರು ನಂಬಿದ್ದರು. ಈ ನಡಾವಳಿಗಳೇ ಸೋಲಿಗೆ ಕಾರಣ ಎಂದು ಬಿಜೆಪಿಯ ಕೆಲವು ‘ಉದಾರವಾದಿ’ ನಾಯಕರು ಈಗ ಪ್ರಬಲ ವಾದ ಮಂಡಿಸುತ್ತಿದ್ದಾರೆ.

ಸುಮಾರು ನಾಲ್ಕು ವರ್ಷಗಳ ಅವಧಿಯಲ್ಲಿ ಕೋವಿಡೋತ್ತರ ಕಾಲಘಟ್ಟ ಬಿಟ್ಟರೆ ಉಳಿದಂತೆ ಅಭಿವೃದ್ಧಿಗೆ ಸರ್ಕಾರ ಆದ್ಯತೆ ನೀಡಿತ್ತು. ಆದರೆ, ಅದನ್ನು ಮುನ್ನೆಲೆಗೆ ತರಲು ಮುಂದಾಗದ ಪಕ್ಷ, ಪಠ್ಯಪುಸ್ತಕ ಪರಿಷ್ಕರಣೆ, ಹಿಜಾಬ್, ಹಲಾಲ್, ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧದಂತಹ ವಿಷಯಗಳನ್ನೇ ಕೈಗೆತ್ತಿಕೊಂಡಿತು. ಹೀಗೆ ಜನರ ಕಷ್ಟಕ್ಕೆ ಆಗದ ವಿಚಾರಗಳೇ ಹೆಚ್ಚು ಚರ್ಚೆಯಲ್ಲಿರುವಂತೆ ನೋಡಿಕೊಂಡಿತು. ಚುನಾವಣೆಯಲ್ಲಿ ಮೋದಿ ವರ್ಚಸ್ಸಾದರೂ ಕೈಹಿಡಿಯುತ್ತದೆ ಎಂಬ ನಂಬಿಕೆಯೂ ಹುಸಿಯಾಯಿತು. ಇದನ್ನೆಲ್ಲ ಚರ್ಚಿಸದೇ ಈಗ, ಯಡಿಯೂರಪ್ಪ ನಂತರ ಅಧಿಕಾರಕ್ಕೆ ಬಂದವರು ಸರಿಯಾದ ಆಡಳಿತ ನೀಡಲಿಲ್ಲ ಎಂದು ಸಂಸದ ಪ್ರತಾಪ್ ಸಿಂಹ ಬಾಯಲ್ಲಿ ಹೇಳಿಸುವುದರ ಹಿಂದಿನ ಉದ್ದೇಶವೇ, ತಮ್ಮ ತಪ್ಪಿಗಿಂತ ಮತ್ಯಾರನ್ನೋ ಸೋಲಿಗೆ ಗುರಿ ಮಾಡುವ ತಂತ್ರವಷ್ಟೇ ಎಂಬ ಅಭಿಪ್ರಾಯ ಪಕ್ಷದೊಳಗೆ ಬಲವಾಗುತ್ತಿದೆ.

‘ಆರೆಸ್ಸೆಸ್–ಬಿಜೆಪಿಗೆ ಮಧ್ಯೆ ಸಮನ್ವಯದ ಕೊಂಡಿಯಾಗಿ ಸಂಘದಿಂದ ಪಕ್ಷದ ರಾಷ್ಟ್ರೀಯ ಹಾಗೂ ರಾಜ್ಯ ಘಟಕಗಳಿಗೆ ನಿಯೋಜನೆ ಮಾಡುವುದುಂಟು. ಹೀಗೆ ನಿಯೋಜನೆಗೊಂಡವರು ರಾಜಕೀಯ ನಿರ್ಧಾರಗಳಲ್ಲಿ ಮೂಗು ತೂರಿಸುವುದು ಕಡಿಮೆ. ಈ ರೀತಿ ನಿಯೋಜನೆ ಮೇರೆಗೆ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ-(ಸಂಘಟನೆ) ಹುದ್ದೆಗೆ ಬಂದ ಕರ್ನಾಟಕದವರೇ ಆದ ಬಿ.ಎಲ್. ಸಂತೋಷ್ ಈ ವಿಷಯದಲ್ಲಿ ವಿಭಿನ್ನ. ರಾಜಕೀಯ ಮಹತ್ವಾಕಾಂಕ್ಷೆಯಿಂದ ಸಂತೋಷ್, ಅನೇಕ ರಾಜ್ಯಗಳಲ್ಲಿ ಚುನಾವಣೆಯ ಉಸ್ತುವಾರಿ ವಹಿಸಿದ್ದಲ್ಲದೇ, ಕರ್ನಾಟಕದಲ್ಲಿ ತುಸು ಹೆಚ್ಚೇ ಎನ್ನುವಂತೆ ತಮ್ಮ ಪ್ರಭಾವ ಬಳಸಿದರು. ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ತಮ್ಮ ನಿರ್ಣಯಗಳೇ ಅನುಷ್ಠಾನವಾಗುವಂತೆ ನೋಡಿಕೊಂಡರು. ಬಿ.ಎಸ್. ಯಡಿಯೂರಪ್ಪ ಇದ್ದಾಗ, ಅವರಿಗೆ ಹೆಚ್ಚಿನ ಅವಕಾಶ ನೀಡಿರಲಿಲ್ಲ. ಯಾವಾಗ, ಅವರನ್ನು ಇಳಿಸಿ, ಬಸವರಾಜ ಬೊಮ್ಮಾಯಿ ಅವರನ್ನು ಕೂರಿಸಲಾಯಿತೋ ಅಂದಿನಿಂದ ಸರ್ಕಾರದ ಕೀಲಿ ಕೈ ಸಂತೋಷ್ ವಶವಾಯಿತು’ ಎಂದು ಬಿಜೆಪಿ ಹಿರಿಯಾಳುಗಳು ಈಗ ಹೇಳಲು ಆರಂಭಿಸಿದ್ದಾರೆ.

ಕೋವಿಡ್ ಕಾಲದಲ್ಲಿ ಬಸವಳಿದು ಬದುಕಿನ ಭರವಸೆಯನ್ನು ಕಳೆದುಕೊಂಡಿದ್ದ ಜನರು ಕೋಮು–ಜಾತಿ ದ್ವೇಷದ ಬದಲು ಪರಸ್ಪರ ಸಾಮರಸ್ಯದ ಬದುಕಿನತ್ತ ಹೆಜ್ಜೆ ಇಟ್ಟಿದ್ದರು. ಇಂತಹ ಹೊತ್ತಿನಲ್ಲಿ ಸರ್ಕಾರ ಪ್ರೇರಿತ ಕೋಮುದ್ವೇಷದ ಚಟುವಟಿಕೆಗಳು ಉಲ್ಬಣಗೊಂಡವು. ಸಂತೋಷ್ ಬಣದ ಜತೆಗೆ ಗುರುತಿಸಿಕೊಂಡವರು ಇದಕ್ಕೆ ತುಪ್ಪ ಸುರಿದರು. ಅಭಿವೃದ್ಧಿಶೀಲ ಕರ್ನಾಟಕದ ಜನ ಅದನ್ನು ಬಹಳ ದಿನ ಸಹಿಸಲಾರರು ಎಂದು ವರಿಷ್ಠರಿಗೆ ವಿವರಿಸಿದರೂ ಸಂತೋಷರ ಮಾತುಗಳ ಮುಂದೆ ಯಾರೊಬ್ಬರೂ ಕೇಳಿಸಿಕೊಳ್ಳುವ ಸ್ಥಿತಿಯಲ್ಲೇ ಇರಲಿಲ್ಲ ಎಂದೂ ಅವರು ಅಲವತ್ತುಕೊಳ್ಳುತ್ತಾರೆ.

‘ಹಿರಿಯರನ್ನು ತೊಲಗಿಸಿ ಹೊಸಬರನ್ನು ಕಣಕ್ಕೆ ಇಳಿಸುವ ಪ್ರಯೋಗ ಮರ್ಮಾಘಾತವಾಗುತ್ತದೆ. ಅದರಲ್ಲೂ ಲಿಂಗಾಯತ ನಾಯಕರನ್ನು ಕಡೆಗಣಿಸುವುದು ಚುನಾವಣೆಯಲ್ಲಿ ದೊಡ್ಡ ಹಿನ್ನಡೆಗೆ ಕಾರಣವಾಗುತ್ತದೆ ಎಂಬ ವಾದವನ್ನು ಮುಂದಿಟ್ಟರೂ ಅದಕ್ಕೆ ಸಂತೋಷ ಬಣದ ನಾಯಕರೂ ಒಪ್ಪಲೇ ಇಲ್ಲ. ಹೊಸಬರಿಗೆ ಅವಕಾಶ ಕೊಟ್ಟರೆ ಗೆಲ್ಲುತ್ತೇವೆ ಎಂಬುದು ದಕ್ಷಿಣ ಕನ್ನಡ, ಉಡುಪಿಯಲ್ಲಿ ಯಶಸ್ವಿಯಾಗಿದೆಯಲ್ಲವೇ ಎಂಬ ಪ್ರಶ್ನೆಯನ್ನು ಈಗ ಮುಂದಿಡುತ್ತಿದ್ದಾರೆ. ಕಾಂಗ್ರೆಸ್ ನಾಯಕರು ಈ ಎರಡೂ ಜಿಲ್ಲೆಗಳತ್ತ ಸುಳಿಯದೇ ಇದ್ದುದು, ತಮ್ಮ ಮತ ಬ್ಯಾಂಕ್‌ನ್ನು(ಅದರಲ್ಲೂ ಬಿಲ್ಲವರು) ಭದ್ರಪಡಿಸಿಕೊಳ್ಳಲು ಇದ್ದ ಅವಕಾಶವನ್ನು ಬಳಸದೇ ಇದ್ದುದು ಬಿಜೆಪಿ ಗೆಲುವಿಗೆ ಕಾರಣ, ಹೊಸಬರ ಪ್ರಯೋಗವಲ್ಲ. ಸೋಲಿನ ನೈಜ ಕಾರಣಗಳ ಬಗ್ಗೆ ಚರ್ಚೆಯೇ ನಡೆಯುತ್ತಿಲ್ಲ’ ಎಂಬುದು ಹಿರಿಯರ ಅಳಲು.

ಯಾರಿಗೂ ಬೇಡವಾದ ವಿಪಕ್ಷ ನಾಯಕ ಸ್ಥಾನ!

ಹೊಸ ಸರ್ಕಾರ ಬಂದೊಡನೆ ಸೋತ ಪಕ್ಷದ ಕಡೆಯವರು ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಜಂಗಿಕುಸ್ತಿ ಬೀಳುವುದು ಕರ್ನಾಟಕ ರಾಜಕಾರಣದಲ್ಲಿ ಇಲ್ಲಿಯವರೆಗೆ ನಡೆಯುತ್ತಿದ್ದ ವಿದ್ಯಮಾನ.

ಸೋಲಿನಿಂದ ಜಂಘಾಬಲವೇ ಉಡುಗಿ ಹೋದಂತಿರುವ ಬಿಜೆಪಿಯಲ್ಲಿ, ವಿಪಕ್ಷ ನಾಯಕ ಸ್ಥಾನ ವಹಿಸಿಕೊಳ್ಳಲು ಬಹುತೇಕರು ಸಿದ್ಧರಿಲ್ಲ. ಆರ್.ಅಶೋಕ, ಬಸನಗೌಡ ಪಾಟೀಲ ಯತ್ನಾಳ, ಅರವಿಂದ ಬೆಲ್ಲದ ಮಾತ್ರ ತುಸು ಆಕಾಂಕ್ಷಿಗಳಾಗಿದ್ದಾರೆ. ಈ ಹುದ್ದೆಗೆ ಯಾರನ್ನು ತರಬೇಕೆಂದು ಚರ್ಚಿಸುವ ವ್ಯವಧಾನ, ಆಸಕ್ತಿ ವರಿಷ್ಠರಿಗೆ ಇಲ್ಲ.

ವಿರೋಧ ಪಕ್ಷದ ನಾಯಕ ಸ್ಥಾನದಲ್ಲಿದ್ದವರು ಸರ್ಕಾರದ ವೈಫಲ್ಯ, ಭ್ರಷ್ಟಾಚಾರ, ಜನವಿರೋಧಿ ಧೋರಣೆಯನ್ನು ಬಯಲಿಗೆಳೆಯುವ ಸಾಮರ್ಥ್ಯ ಹೊಂದಿರಬೇಕು. ಅಲ್ಲದೇ, ಆ ಸ್ಥಾನದಲ್ಲಿದ್ದವರು ಪಕ್ಷದ ವರ್ಚಸ್ಸನ್ನು ಹೆಚ್ಚಿಸುವ ತಾಕತ್ತನ್ನೂ ಪ್ರದರ್ಶಿಸಬೇಕು. ಸಿದ್ದರಾಮಯ್ಯನವರಂತಹ ಸಂಸದೀಯ ಪಟು ಮುಖ್ಯಮಂತ್ರಿಯಾಗಿರುವಾಗ ಅವರನ್ನು ಎದುರಿಸುವುದು ಅಷ್ಟು ಸಲೀಸಲ್ಲ. ‘ಆಡಳಿತ ಪಕ್ಷದ ವೈಫಲ್ಯವನ್ನು ಸದನದೊಳಗೆ ಚರ್ಚಿಸಿದಾಗ, ಅದು ಜನರ ಎದುರು ಮಾರ್ದನಿಸುವಂತಹ ಕೆಲಸವನ್ನು ಪಕ್ಷ ಮಾಡಬೇಕು. ಅಂತಹ ವಾತಾವರಣ ಸದ್ಯ ಇಲ್ಲ. ಹೀಗಾಗಿ, ಆ ಹುದ್ದೆಯೇ ಬೇಡ’ ಎಂಬ ನಿಲುವು ಅನೇಕ ಹಿರಿಯರದ್ದಾಗಿದೆ.

ಮಂಡ್ಯ, ಹೊಳೆನರಸೀಪುರದಲ್ಲಿ ಧಾರಾಕಾರ ಮಳೆ • ಉಡುಪಿಯಲ್ಲಿ ದಿನವಿಡೀ ಮಳೆ

ರಾಜ್ಯದ ವಿವಿಧೆಡೆ ಮಳೆ: ರೈತರಲ್ಲಿ ಹರ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕರಾವಳಿ, ದಕ್ಷಿಣ ಒಳನಾಡಿನ ವಿವಿಧೆಡೆ, ಉತ್ತರ ಒಳನಾಡಿನ ಕೆಲವೆಡೆ ಬುಧವಾರ ಉತ್ತಮ ಮಳೆಯಾಗಿದ್ದು, ರೈತರಲ್ಲಿ ಹರ್ಷ ಮೂಡಿಸಿದೆ.

ಮೈಸೂರು ಭಾಗದ ಮಂಡ್ಯ, ಹಾಸನ ಮತ್ತು ಕೊಡಗಿನಲ್ಲಿ ಧಾರಾಕಾರ ಮಳೆ ಸುರಿದಿದ್ದು, ಪ್ರಮುಖ ವೃತ್ತ, ರಸ್ತೆಗಳಲ್ಲಿ ನೀರು ನಿಂತು ಜನರು ಮತ್ತು ವಾಹನ ಸವಾರರು ಪರದಾಡಿದರು.

ಮಂಡ್ಯ ನಗರದಲ್ಲಿ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ, ನೂರು ಅಡಿ ರಸ್ತೆ ಮತ್ತು ಚರಂಡಿಗಳಲ್ಲಿ ನೀರು ತುಂಬಿ ಹರಿಯಿತು. ಮಹಾವೀರ ವೃತ್ತ ಕೆರೆಯಂತಾಗಿತ್ತು. ಮೈಸೂರಿನ ಹನಗೋಡು ಹೋಬಳಿಯ ಮೆಣಸು, ತಂಬಾಕು, ಮುಸುಕಿನ ಜೋಳದ ಬೆಳೆ ಜಲಾವೃತಗೊಂಡಿದೆ.

ಹಾಸನ ನಗರ, ಹೊಳೆನರಸೀಪುರದಲ್ಲಿ ಉತ್ತಮ ಮಳೆಯಾಯಿತು. ಹೊಳೆನರಸೀಪುರದಲ್ಲಿ ಮನೆ ಹಾಗೂ ಅಂಗಡಿಗಳಿಗೆ ನೀರು ನುಗ್ಗಿತ್ತು. ಬಸವ ಭವನ ಹಾಗೂ ಬಸ್‌ನಿಲ್ದಾಣ ಪ್ರವೇಶದ್ವಾರದ ಸಮೀಪ ರಸ್ತೆ ಕೆರೆಯಂತಾಗಿತ್ತು. ಕೊಡಗು ಜಿಲ್ಲೆಯ ಗೋಣಿಕೊಪ್ಪಲಿನಲ್ಲೂ ಧಾರಾಕಾರ ಮಳೆಯಾಯಿತು.

ಹದ ಮಳೆ: ತುಮಕೂರು, ರಾಮನಗರ, ಕೋಲಾರ ಜಿಲ್ಲೆಯ ಕೆಲವು ಭಾಗಗಳಲ್ಲಿ ಮಧ್ಯಾಹ್ನದಿಂದ ಸಂಜೆಯವರೆಗೂ ಸುರಿದ ಹದ ಮಳೆ, ಮುಂಗಾರು ಬಿತ್ತನೆಗಾಗಿ ಕಾದಿದ್ದ ರೈತರ ಮೊಗದಲ್ಲಿ ಸಂತಸ ತರಿಸಿದೆ.

ಉಡುಪಿ ಜಿಲ್ಲೆಯಾದ್ಯಂತ ದಿನವಿಡೀ ಜಿಟಿ ಜಿಟಿ ಮಳೆ ಸುರಿಯಿತು. ಮಂಗಳೂರು ನಗರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧೆಡೆ ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಿದೆ. ಆಲ್ದೂರು ಸಮೀಪದ ಬಿಕೆರೆ ಗ್ರಾಮದ ಬಳಿಯ ರಾಷ್ಟ್ರೀಯ ಹೆದ್ದಾರಿ 173ರಲ್ಲಿ ಬುಧವಾರ ಬೆಳಿಗ್ಗೆ ಮರ ರಸ್ತೆಗೆ ಅಡ್ಡಲಾಗಿ ಬಿದ್ದಿತ್ತು. ಸುಮಾರು ಒಂದು ತಾಸು ಸಂಚಾರ ಸ್ಥಗಿತಗೊಂಡಿತ್ತು. ನಂತರ ಮರವನ್ನು ಕತ್ತರಿಸಿ ತೆರವುಗೊಳಿಸಲಾಯಿತು.

ವಿಜಯನಗರ ಜಿಲ್ಲೆಯ ಹೊಸಪೇಟೆ, ಹಂಪಿ, ಕಮಲಾಪುರ, ಕಾನಹೊಸಹಳ್ಳಿ ಸೇರಿದಂತೆ ಕೆಲವೆಡೆ ಸಾಧಾರಣ ಮಳೆಯಾಗಿದೆ.

ಮಂಡ್ಯದಲ್ಲಿ ಬುಧವಾರ ಸುರಿದ ಧಾರಾಕಾರ ಮಳೆಯಿಂದ ಮಹಾವೀರ ವೃತ್ತ ಜಲಾವೃತಗೊಂಡಿತ್ತು

ಕೋಲಾರ ಜಿಲ್ಲೆಯ ರಾಬರ್ಟಸನ್‌ಪೇಟೆ ಸರ್ಕಾರಿ ಆಸ್ಪತ್ರೆಗೆ ನುಗ್ಗಿದ ಮಳೆ ನೀರನ್ನು ಹೊರ ಹಾಕುತ್ತಿರುವ ಸಿಬ್ಬಂದಿ

ಆಸ್ಪತ್ರೆಗೆ ನುಗ್ಗಿದ ಮಳೆ ನೀರು

ಪ್ರಜಾವಾಣಿ ವಾರ್ತೆ

ಕೆಜಿಎಫ್: ತಾಲ್ಲೂಕಿನ ರಾಬರ್ಟ-ಸನ್‌ಪೇಟೆಯಲ್ಲಿ ಬುಧವಾರ ರಾತ್ರಿ ಭಾರಿ ಮಳೆಯಾಗಿದ್ದು, ಸರ್ಕಾರಿ ಆಸ್ಪತ್ರೆ ಮತ್ತು ತಗ್ಗು ಪ್ರದೇಶದ ನೂರಾರು ಮನೆಗಳಿಗೆ ನೀರು ನುಗ್ಗಿದೆ.

ಆಸ್ಪತ್ರೆಯ ಮಹಿಳೆಯರ ವಾರ್ಡ್‌ನಲ್ಲಿ ಮಳೆ ನೀರು ಸಂಗ್ರಹವಾಗಿದೆ. ಸಿಬ್ಬಂದಿ ತಡರಾತ್ರಿಯವರೆಗೂ ನೀರನ್ನು ಹೊರ ಹಾಕುವ ಕೆಲಸದಲ್ಲಿ ತೊಡಗಿದ್ದರು. ರೋಗಿಗಳು ಮತ್ತು ಅವರ ಸಹಾಯಕರು ಮಂಚಗಳ ಮೇಲೆ ಕುಳಿತುಕೊಂಡರು.

ಊರಿಗಾಂಪೇಟೆಯ ರಾಜಕಾಲುವೆ ತುಂಬಿ ಹರಿದ ಪರಿಣಾಮ ರಸ್ತೆಯ ಮೇಲೆ ಮೂರು ಅಡಿ ನೀರು ನಿಂತಿತ್ತು. ನೂರಾರು ಮನೆಗಳು, ರಸ್ತೆ ಅಕ್ಕಪಕ್ಕದ ಅಂಗಡಿಗಳಿಗೂ ನೀರು ನುಗ್ಗಿದೆ.

65 ವರ್ಷ ಮೇಲ್ಪಟ್ಟವರಿಗೆ ದೇವರ ದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಜರಾಯಿ ಇಲಾಖೆ ಅಧೀನಕ್ಕೆ ಒಳಪಡುವ ಪ್ರವರ್ಗ ‘ಎ’ ಮತ್ತು ‘ಬಿ’ ದೇವಸ್ಥಾನಗಳಲ್ಲಿ 65 ವರ್ಷ ಮೇಲ್ಪಟ್ಟ ಭಕ್ತಾದಿಗಳಿಗೆ ಇನ್ನು ಮುಂದೆ ದೇವರ ಶೀಘ್ರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ.

ಧಾರ್ಮಿಕ ದತ್ತಿ ಇಲಾಖೆ ಬುಧವಾರ ಈ ಸಂಬಂಧ ಸುತ್ತೋಲೆಯೊಂದನ್ನು ಹೊರಡಿಸಿದೆ.

ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರನ್ನು ಭೇಟಿ ಮಾಡಿದ್ದ ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ–ಆಗಮಿಕರ ಮತ್ತು ಉಪಾದಿವಂತರ ಒಕ್ಕೂಟದ ಸದಸ್ಯರು ಈ ಬಗ್ಗೆ ಮನವಿ ಸಲ್ಲಿಸಿದ್ದರು.

ಹಿರಿಯ ನಾಗರಿಕರಿಗೆ ಸರತಿ ಸಾಲಿನಲ್ಲಿ ನಿಂತುಕೊಳ್ಳುವುದು ಕಷ್ಟವಾಗುತ್ತಿದೆ. ಇವರು ತಮ್ಮ ವಯಸ್ಸಿನ ದಾಖಲೆ ಅಥವಾ ಆಧಾರ್ ಕಾರ್ಡ್ ಅನ್ನು ತೋರಿಸಿದರೆ, ಶೀಘ್ರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗುವುದು. ಸ್ಥಳಾವಕಾಶ ಇದ್ದರೆ ಪ್ರತ್ಯೇಕ ಸ್ಥಳ ಕಾಯ್ದಿರಿಸುವಂತೆಯೂ ಸೂಚಿಸಲಾಗಿದೆ. ದೇವಾಲಯಗಳಲ್ಲಿ ಹಿರಿಯ ನಾಗರಿಕರಿಗಾಗಿ ಸಹಾಯ ಕೇಂದ್ರವನ್ನು ಸ್ಥಾಪಿಸಿ, ಜವಾಬ್ದಾರಿಯುತ ಸಿಬ್ಬಂದಿಯನ್ನು ನಿಯೋಜಿಸಿ ದೇವರ ದರ್ಶನದ ವ್ಯವಸ್ಥೆ ಮಾಡಬೇಕು ಎಂದೂ ಸುತ್ತೋಲೆ ಹೇಳಿದೆ.

ಒಕ್ಕೂಟದ ಗೌರವ ಉಪಾಧ್ಯಕ್ಷರಾದ ಆರ್.ಲಕ್ಷ್ಮಿಕಾಂತ, ಎಸ್.ಆರ್.ಶೇಷಾದ್ರಿಭಟ್ಟರ್, ಮುಖ್ಯ ಪ್ರಧಾನಕಾರ್ಯದರ್ಶಿ ಕೆ.ಎಸ್.ಎನ್.ದೀಕ್ಷಿತ್ ಅವರು ಸಚಿವರನ್ನು ಭೇಟಿ ಮಾಡಿದ್ದರು.

ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ–ಆಗಮಿಕರ ಮತ್ತು ಉಪಾದಿವಂತರ ಒಕ್ಕೂಟದ ಪದಾಧಿಕಾರಿಗಳು ಸಾರಿಗೆ ಹಾಗೂ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿಯವರಿಗೆ ಮನವಿ ಅರ್ಪಿಸಿದರು.

ದರ ಹೆಚ್ಚಳದಿಂದ ಬಿಲ್ ವಿಳಂಬ

ಒಂದನೇ ಪುಟದಿಂದ...

ಮೇ 12ರಂದು ಪ್ರತಿ ಯೂನಿಟ್‌ಗೆ 70 ಪೈಸೆಯಷ್ಟು ವಿದ್ಯುತ್ ದರ ಹೆಚ್ಚಿಸಿ ಆದೇಶ ನೀಡಿದ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಏಪ್ರಿಲ್‌ನಿಂದಲೇ ಪೂರ್ವಾನ್ವಯವಾಗುವಂತೆ ಜಾರಿಗೊಳಿಸಲು ಸೂಚಿಸಿತು. ಕೆಇಆರ್‌ಸಿ ನಿರ್ದೇಶನದಂತೆ ಇದೇ ಸಂದರ್ಭದಲ್ಲಿ 4 ಸ್ಲ್ಯಾಬ್‌ಗಳ ಬದಲಾಗಿ ಕೇವಲ ಎರಡು ಸ್ಲ್ಯಾಬ್‌ಗಳನ್ನು ಮಾತ್ರ ಉಳಿಸಿಕೊಳ್ಳಲಾಯಿತು. ನಂತರ ಇಂಧನ ಹೊಂದಾಣಿಕೆ ದರ ಹೆಚ್ಚಿಸಲಾಯಿತು. ಇದರಿಂದಾಗಿ, ದರ ಹೆಚ್ಚಳದ ಬಾಕಿಯನ್ನು ಏಪ್ರಿಲ್, ಮೇ ತಿಂಗಳಿಂದಲೇ ಗ್ರಾಹಕರಿಂದ ವಸೂಲಿ ಮಾಡಿದ್ದರಿಂದ ಬಿಲ್ ಮೊತ್ತದಲ್ಲಿ ಹೆಚ್ಚಳವಾಯಿತು. ಜತೆಗೆ, ಈ ಎಲ್ಲ ಹೊಸ ಬದಲಾವಣೆಗಳನ್ನು ತಂತ್ರಾಂಶದಲ್ಲಿ ಅಳವಡಿಸಲು ಕಾಲಾವಕಾಶ ಬೇಕಾಗಿದ್ದರಿಂದ ಬಿಲ್ ನೀಡುವುದು ವಿಳಂಬವಾಯಿತು ಎಂದಿದ್ದಾರೆ.

ಬಿಲ್ ನೀಡಿದ ದಿನದಿಂದ 15 ದಿನ ಅವಕಾಶ

ವಿದ್ಯುತ್ ಬಿಲ್ ನೀಡಿದ ದಿನದಿಂದ ಹಣ ಪಾವತಿಸಲು 15 ದಿನಗಳ ಕಾಲಾವಕಾಶ ಇರುತ್ತದೆ. ಈ 15 ದಿನಗಳಿಗೆ ಯಾವುದೇ ರೀತಿ ದಂಡ ವಿಧಿಸುವುದಿಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಉದಾಹರಣೆಗೆ ಜೂನ್ 19ಕ್ಕೆ ಬಿಲ್ ನೀಡಿದ್ದರೆ ಮುಂದಿನ 15 ದಿನಗಳವರೆಗೆ ಸಮಯಾವಕಾಶ ಇರುತ್ತದೆ. 15 ದಿನಗಳ ನಂತರ ಪಾವತಿಸಿದರೆ ಮಾತ್ರ ದಂಡ ನೀಡಬೇಕಾಗುತ್ತದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

‘ವಿದ್ಯುತ್ ದರ: ಸರ್ಕಾರಕ್ಕೆ ಸಂಬಂಧಿಸಿದ್ದಲ್ಲ’

ವಿದ್ಯುತ್ ದರ ವಿಷಯದಲ್ಲಿ ಕೆಇಆರ್‌ಸಿ ನೀಡುವ ನಿರ್ದೇಶನಗಳನ್ನು ಎಸ್ಕಾಂಗಳು ಪಾಲಿಸಲೇಬೇಕು ಹೊರತು ಸರ್ಕಾರದ್ದಲ್ಲ. ವಿದ್ಯುತ್ ದರ ಹೆಚ್ಚಿಸುವ ಮುನ್ನ ಸಾರ್ವಜನಿಕರು ಸೇರಿದಂತೆ ಸಂಬಂಧಪಟ್ಟ ಎಲ್ಲರ ಜತೆ ಆಯೋಗವು ಅಭಿಪ್ರಾಯಗಳನ್ನು ಆಲಿಸುತ್ತದೆ. ಇದೊಂದು ನ್ಯಾಯಾಂಗ ಪ್ರಕ್ರಿಯೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಗಸ್ಟ್‌ಗೆ ಅನ್ನಭಾಗ್ಯ?

ಒಂದನೇ ಪುಟದಿಂದ...

ಆದರೆ, ಎಫ್‌ಸಿಐ ಒಎಂಎಸ್‌ಎಸ್ ಅಡಿಯಲ್ಲಿ ಅಕ್ಕಿ ಮಾರಾಟ ಮಾಡದಂತೆ ಕೇಂದ್ರ ಸರ್ಕಾರ ನಿರ್ಬಂಧ ವಿಧಿಸಿದ ಬಳಿಕ ರಾಜ್ಯ ಸರ್ಕಾರ ಇಕ್ಕಟ್ಟಿಗೆ ಸಿಲುಕಿದೆ. ಯೋಜನೆಗೆ ಅಗತ್ಯವಿರುವ ಅಕ್ಕಿ ಹೊಂದಿಸಲು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಹತ್ತು ದಿನಗಳಿಂದ ನಿರಂತರ ಪ್ರಯತ್ನ ನಡೆಸುತ್ತಿದೆ.

ಛತ್ತೀಸಗಢ ರಾಜ್ಯ ಸರ್ಕಾರದ ಬಳಿ 1.5 ಲಕ್ಷ ಟನ್ ಅಕ್ಕಿಯ ದಾಸ್ತಾನು ಇದೆ. ಅಲ್ಲಿಂದ ರಾಜ್ಯಕ್ಕೆ ಅಕ್ಕಿ ಸಾಗಣೆ ವೆಚ್ಚ ದುಬಾರಿ ಆಗಲಿದೆ. ಈ ಕಾರಣದಿಂದ ದರ ಹೊಂದಾಣಿಕೆ ಆಗಿಲ್ಲ. ಪಂಜಾಬ್, ತೆಲಂಗಾಣ ರಾಜ್ಯಗಳಿಂದ ಅಕ್ಕಿ ಖರೀದಿಸುವ ಪ್ರಯತ್ನ ಯಶ ಕಂಡಿಲ್ಲ.

ರಾಷ್ಟ್ರೀಯ ಗ್ರಾಹಕರ ಸಹಕಾರ ಒಕ್ಕೂಟ (ಎನ್‌ಸಿಸಿಎಫ್), ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಮಹಾಮಂಡಳ (ನಾಫೆಡ್) ಮೂಲಕ ಖಾಸಗಿ ವರ್ತಕರಿಂದ ಅಕ್ಕಿ ಖರೀದಿಸುವುದಕ್ಕೂ ಪ್ರಯತ್ನಿಸಲಾಗುತ್ತಿದೆ. ಆದರೆ, ಈ ಸಂಸ್ಥೆಗಳ ಮೂಲಕವೂ ಅಕ್ಕಿ ಪೂರೈಸಲು ವರ್ತಕರು ಆಸಕ್ತಿ ತೋರುತ್ತಿಲ್ಲ ಎಂದು ಮೂಲಗಳು ಮಾಹಿತಿ ನೀಡಿವೆ

ಸಮಯದ ಅಭಾವ: ‘ಹೊರ ರಾಜ್ಯದಿಂದ ಅಕ್ಕಿ ಖರೀದಿಸಿದರೆ ಅಲ್ಲಿಂದ ರಾಜ್ಯಕ್ಕೆ ಸಾಗಿಸಿ, ನ್ಯಾಯಬೆಲೆ ಅಂಗಡಿಗಳಿಗೆ ತಲುಪಿಸಲು ಹತ್ತರಿಂದ 15 ದಿನಗಳು ಬೇಕಾಗುತ್ತವೆ. ಎಫ್‌ಸಿಐ ಅಥವಾ ಖಾಸಗಿ ವರ್ತಕರು ರಾಜ್ಯಕ್ಕೆ ಪೂರೈಸಿದರೂ ನ್ಯಾಯಬೆಲೆ ಅಂಗಡಿಗಳಿಗೆ ತಲುಪಿಸಲು ಹತ್ತು ದಿನಗಳಾದರೂ ಬೇಕು. ಇನ್ನೂ ಅಕ್ಕಿಯ ಲಭ್ಯತೆಯೇ ಖಾತರಿಯಾಗಿಲ್ಲ. ಹೀಗಿರುವಾಗ ಜುಲೈ ತಿಂಗಳಲ್ಲಿ ಯೋಜನೆ ಅನುಷ್ಠಾನ ಸಾಧ್ಯವೇ ಇಲ್ಲ’ ಎಂದು ಮೂಲಗಳು ತಿಳಿಸಿವೆ.

‘ಅಕ್ಕಿ ಕೊಡದಂತೆ ಬಿಜೆಪಿ ನಾಯಕರ ಒತ್ತಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನ್ನಭಾಗ್ಯ ಯೋಜನೆಗೆ ಅಕ್ಕಿ ಕೊಡದಂತೆ ಬಿಜೆಪಿ ರಾಜ್ಯ ಘಟಕದ ನಾಯಕರೇ ಕೇಂದ್ರದ ಮೇಲೆ ಒತ್ತಡ ಹೇರಿದ್ದಾರೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ದೂರಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಅಗತ್ಯದಷ್ಟು ಅಕ್ಕಿ ಕೊಡಲು ಎಫ್‌ಸಿಐ ಮುಂದಾಗಿತ್ತು. ಆದರೆ, ಬಡವರಿಗೆ ಅಕ್ಕಿ ಕೊಡುವ ಈ ಯೋಜನೆ ಅನುಷ್ಠಾನವಾಗದಂತೆ ತಡೆಯಲು ಮುಂದಾದ ಬಿಜೆಪಿ ನಾಯಕರು ಇದಕ್ಕೆ ಅಡ್ಡಿಪಡಿಸಿದರು. ಸೋನಾ ಮಸೂರಿ ಅಕ್ಕಿಯನ್ನೇ ಊಟಕ್ಕೆ ಬಳಸುವ ಆ ಪಕ್ಷದ ನಾಯಕರಿಗೆ ಹಸಿವು ನೀಗಿಸಲು ಸರ್ಕಾರ ನೀಡುವ ಅಕ್ಕಿಯನ್ನೇ ಬಳಸುವ ಬಡವರ ಕಷ್ಟ ಹೇಗೆ ಗೊತ್ತಾಗಬೇಕು ಎಂದು ಹೇಳಿದರು.

ಕೇಂದ್ರ ಸರ್ಕಾರ ಕರ್ನಾಟಕ್ಕೆ ಬೇಕಾದ ಪೂರ್ತಿಯನ್ನು ಉಚಿತವಾಗಿ ಕೊಡುತ್ತಿಲ್ಲ. ಮನಮೋಹನಸಿಂಗ್ ನೇತೃತ್ವದ ಸರ್ಕಾರ ಜಾರಿಗೆ ತಂದಿದ್ದ ಆಹಾರ ಭದ್ರತಾ ಕಾಯ್ದೆಯನ್ವಯ ಅನಿವಾರ್ಯ ಕಾರಣಕ್ಕೆ 80 ಲಕ್ಷದ ಕುಟುಂಬಕ್ಕೆ ಮಾತ್ರ ತಲಾ ಐದು ಕೆ.ಜಿ ಯನ್ನು ನೀಡುತ್ತಿತ್ತು. ಉಳಿದ 48 ಲಕ್ಷ ಕುಟುಂಬಕ್ಕೆ ಬೇಕಾದ ಅಕ್ಕಿಯನ್ನು ಕರ್ನಾಟಕವೇ ಖರೀದಿ ಮಾಡುತ್ತಿತ್ತು. ಕೇಂದ್ರವೇ ಉಚಿತವಾಗಿ ನೀಡುತ್ತಿದೆ ಎಂಬುದು ಸುಳ್ಳು ಎಂದು ಅವರು ಹೇಳಿದರು.

ಸ್ವಯಂಕೃತ ತಪ್ಪಿಗೆ ಕೇಂದ್ರದ ದೂಷಣೆ: ಎಚ್‌ಡಿಕೆ

ಕಾಂಗ್ರೆಸ್ ಪಕ್ಷ ತಾನು ಎಸಗಿದ ಸ್ವಯಂಕೃತ ತಪ್ಪಿಗೆ ಕೇಂದ್ರದ ಮೇಲೆ ಆರೋಪ ಮಾಡುತ್ತಾ ಜನರನ್ನು ಯಾಮಾರಿಸುತ್ತಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ದೂರಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ಯಾರೋ ಚುನಾವಣಾ ತಂತ್ರಗಾರರ ಮಾತು ಕೇಳಿಕೊಂಡು ‘ನನ್ನ ಹೆಂಡತಿಗೂ ಫ್ರೀ, ನಿಮ್ಮ ಹೆಂಡ್ತಿಗೂ ಫ್ರೀ’ ಎಂದು ಹೇಳಿಕೆ ನೀಡಿದರು. ಗ್ಯಾರಂಟಿ ಘೋಷಣೆ ಮಾಡುವ ಮೊದಲೇ ಯೋಜನೆ ಜಾರಿಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕಿತ್ತು. ಅನ್ನಭಾಗ್ಯ ಗ್ಯಾರಂಟಿ ಕೊಡುವ ಮೊದಲು ಕೇಂದ್ರ ಸರ್ಕಾರಕ್ಕೆ ಅರ್ಜಿ ಹಾಕಿದ್ದರಾ? ಪೊಳ್ಳು ಭರವಸೆ ಕೊಟ್ಟು ಈಗ ಇನ್ನೊಬ್ಬರ ಮೇಲೆ ಆರೋಪ ಮಾಡುವುದು ಎಷ್ಟು ಸರಿ ಎಂದರು.

ವಾಂತಿ ಭೇದಿ ಪ್ರಕರಣ: ಪಿಡಿಒಗಳ ಅಮಾನತು

ಪ್ರಜಾವಾಣಿ ವಾರ್ತೆ

ಕುಷ್ಟಗಿ: ಕಲುಷಿತ ನೀರು ಸೇವಿಸಿ ವಾಂತಿ ಭೇದಿ ಮತ್ತು ಸಾವು ನೋವು ಉಂಟಾದ ಪ್ರಕರಣಕ್ಕೆ ಸಂಬಂಧಿಸಿದಂತೆ ನೈರ್ಮಲ್ಯ ನಿರ್ವಹಣೆಯಲ್ಲಿ ಕರ್ತವ್ಯಲೋಪ ಎಸಗಿದ ಕಾರಣಕ್ಕೆ ತಾಲ್ಲೂಕಿನ ಬಿಜಕಲ್ ಹಾಗೂ ಕನಕಗಿರಿ ತಾಲ್ಲೂಕು ಬಸರಿಹಾಳ ಗ್ರಾಮ ಪಂಚಾಯಿತಿಗಳ ಅಭಿವೃದ್ಧಿ ಅಧಿಕಾರಿಗಳನ್ನು ಸರ್ಕಾರ ಅಮಾನತುಗೊಳಿಸಿದೆ.

ಈ ಕುರಿತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿರಾಜ್ ಇಲಾಖೆ ಆಯುಕ್ತೆ ಪ್ರಿಯಾಂಕ್ ಮೇರಿ ಫ್ರಾನ್ಸಿಸ್ ಜೂನ್ 21ರಂದು ಆದೇಶ ಹೊರಡಿಸಿದ್ದು, ಬಿಜಕಲ್ ಪಂಚಾಯಿತಿಯ ನಾಗೇಶ ಅರಳಿಗನೂರು ಮತ್ತು ಬಸರಿಹಾಳ ಪಂಚಾಯಿತಿಯ ರವೀಂದ್ರ ಕುಲಕರ್ಣಿ ಅಮಾನತುಗೊಂಡ ಅಭಿವೃದ್ಧಿ ಅಧಿಕಾರಿಗಳು.

ನೈರ್ಮಲೀಕರಣ ಮತ್ತು ಶುದ್ಧ ಕುಡಿಯುವ ನೀರು ಪೂರೈಕೆಯಲ್ಲಿ ಗ್ರಾಮ ಪಂಚಾಯಿತಿ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿರುವ ಕುರಿತು ಆರೋಗ್ಯ ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವರದಿ ಅನ್ವಯ ಸರ್ಕಾರ ಕ್ರಮಕೈಗೊಂಡಿದೆ.

ಜೇವರ್ಗಿ: ಪುಸ್ತಕ ಪಡೆದರೆ ಎಸ್‌ಎಂಎಸ್ ರವಾನೆ; ಯೂಟ್ಯೂಬ್‌ನಲ್ಲಿ ಕಾರ್ಯಕ್ರಮ ಪ್ರಸಾರ

ಸರ್ಕಾರಿ ಪದವಿ ಕಾಲೇಜಿನಲ್ಲಿ ಹೈಟೆಕ್ ಗ್ರಂಥಾಲಯ

• ಮನೋಜಕುಮಾರ್ ಗುದ್ದಿ

ಕಲಬುರಗಿ: ಕರ್ತವ್ಯದಲ್ಲಿ ಬದ್ಧತೆ ಜೊತೆಗೆ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಏನಾದರೂ ಒಳ್ಳೆಯ ಕೆಲಸ ಮಾಡಬೇಕು ಎಂಬ ತುಡಿತ ಇರುವ ಪ್ರಾಂಶುಪಾಲರು, ಉಪನ್ಯಾಸಕರು, ಗ್ರಂಥಪಾಲಕರು ಇದ್ದರೆ ಏನೆಲ್ಲ ಮಾಡಬಹುದು ಎಂಬುದಕ್ಕೆ ಜಿಲ್ಲೆಯ ಜೇವರ್ಗಿ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಗ್ರಂಥಾಲಯ ಅತ್ಯುತ್ತಮ ಉದಾಹರಣೆ.

ಈ ಗ್ರಂಥಾಲಯ ಇತರೆ ಸರ್ಕಾರಿ ಕಾಲೇಜುಗಳಿಗಿಂತ ಭಿನ್ನವಾಗಿರಲು ಕಾರಣ ಇಲ್ಲಿ ಅಳವಡಿಸಿಕೊಂಡ ಕೆಲ ವಿದ್ಯಾರ್ಥಿ ಸ್ನೇಹಿ ರೂಢಿಗಳು. 2,913 ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿರುವ ಈ ಗ್ರಂಥಾಲಯದಲ್ಲಿ 29,213 ಪುಸ್ತಕಗಳಿವೆ. ಶೈಕ್ಷಣಿಕ, ಆರ್ಥಿಕವಾಗಿ ತೀರಾ ಹಿಂದುಳಿದಿರುವ ಕಲ್ಯಾಣ ಕರ್ನಾಟಕ ಭಾಗದ ಜೇವರ್ಗಿಯ ಈ ಕಾಲೇಜಿಗೆ ಸುತ್ತಲಿನ ತಾಲ್ಲೂಕುಗಳ ಬಡ ವಿದ್ಯಾರ್ಥಿಗಳು ಬರುತ್ತಾರೆ. ಅವರಿಗೆ ಜ್ಞಾನ ದಾಸೋಹ ನೀಡಬೇಕು ಎಂಬ ಕಾಲೇಜು ಆಡಳಿತ ಮಂಡಳಿಯ ಉತ್ಕಟ ಅಭಿಲಾಷೆಯು ಇಲ್ಲಿನ ಗ್ರಂಥಾಲಯವನ್ನು ಸರ್ಕಾರಿ ಕಾಲೇಜುಗಳಲ್ಲಿನ ಅತ್ಯುತ್ತಮ ಗ್ರಂಥಾಲಯವಾಗಿ ಮಾರ್ಪಡಿಸಲು ಕಾರಣವಾಗಿದೆ.

ಒಳ್ಳೆ ಸುದ್ದಿ

ಕಾಲೇಜಿನ ಪ್ರಾಂಶುಪಾಲ ಡಾ.ಕರಿಗೋಳೇಶ್ವರ ಹಾಗೂ ಗ್ರಂಥಪಾಲಕ ಡಾ. ವಿನೋದಕುಮಾರ್ ಅವರ ಸಮನ್ವಯದ ಕೆಲಸದಿಂದಾಗಿ ವಿದ್ಯಾರ್ಥಿಗಳಿಗೆ ಪ್ರವೇಶ ಪಡೆಯುವ ಸಂದರ್ಭದಲ್ಲಿ ನೀಡುವ ಗುರುತಿನ ಚೀಟಿಯಲ್ಲಿ ಕ್ಯೂಆರ್ ಕೋಡ್ ಅಳವಡಿಸಲಾಗಿದೆ. ಆ ಕೋಡ್ ವಿದ್ಯಾರ್ಥಿಗಳಿಗೆ ಕಾಲೇಜು ಹಾಗೂ ಗ್ರಂಥಾಲಯದ ಕೀಲಿ ಕೈ ಇದ್ದಂತೆ. ಅದನ್ನು ಸ್ಕ್ಯಾನ್ ಮಾಡಿದರೆ ಕಾಲೇಜಿನ ವಾರ್ಷಿಕ ಪರೀಕ್ಷೆಯ ಹಳೆಯ ಪ್ರಶ್ನೆಪತ್ರಿಕೆಗಳು ದೊರೆಯುತ್ತವೆ. ಗ್ರಂಥಾಲಯಕ್ಕೆ ಬಂದ ಕೂಡಲೇ ಪುಸ್ತಕಗಳನ್ನು ಪಡೆಯಲು ಅನುವಾಗುವಂತೆ ಎರಡು ಕಂಪ್ಯೂಟರ್‌ಗಳನ್ನು ಇರಿಸಲಾಗಿದೆ. ಅಲ್ಲಿ ಗುರುತಿನ ಕಾರ್ಡ್ ಸ್ಕ್ಯಾನ್ ಮಾಡಿದರೆ ಒಳಗೆ ಬಂದ ಸಮಯ, ಯಾವ ಪುಸ್ತಕವನ್ನು ಪಡೆದುಕೊಂಡರು ಎಂಬುದು ದಾಖಲಾಗುತ್ತದೆ. ಜೊತೆಗೆ, ವಿದ್ಯಾರ್ಥಿಗಳ ಮೊಬೈಲ್‌ಗೆ ಎಸ್‌ಎಂಎಸ್ ಹೋಗುತ್ತದೆ. ಹೊರ ಹೋಗುವಾಗ ಮತ್ತೆ ಸ್ಕ್ಯಾನ್ ಮಾಡಿದರೆ ಆ ಸಮಯವೂ ದಾಖಲಾಗುತ್ತದೆ.

ಸುಸಜ್ಜಿತ ಸ್ಟುಡಿಯೊ: ವಿದ್ಯಾರ್ಥಿಗಳಲ್ಲಿನ ಪ್ರತಿಭೆಯನ್ನು ಗುರುತಿಸಲು ಗ್ರಂಥಾಲಯದ ಒಳಗಡೆ ಪುಟ್ಟದಾದ, ಸುಸಜ್ಜಿತ ಸ್ಟುಡಿಯೊ ನಿರ್ಮಿಸಲಾಗಿದೆ. ಕೇವಲ ₹ 10,500 ವೆಚ್ಚದಲ್ಲಿ ಕ್ಯಾಮೆರಾ, ಲೈಟಿಂಗ್, ಗ್ರೀನ್ ಮ್ಯಾಟ್ ಖರೀದಿಸಿ ಸ್ಟುಡಿಯೊ ಸಿದ್ಧಪಡಿಸಲಾಗಿದೆ. ಇಲ್ಲಿ ಉಪನ್ಯಾಸಕರು ಪಾಠವನ್ನು ಲೈವ್ ಮಾಡಿ ವಿದ್ಯಾರ್ಥಿಗಳಿಗೆ ಬಿತ್ತರಿಸಬಹುದಾಗಿದೆ. ವಿದ್ಯಾರ್ಥಿಗಳು ಹಾಡು, ಕಥೆ, ಕವನ ವಾಚನ, ನೃತ್ಯ... ಹೀಗೆ ತಮ್ಮ ಪ್ರತಿಭೆಯನ್ನು ತೋರಿಸಬಹುದು. ಅದನ್ನು ಕಾಲೇಜಿನ ಯೂಟ್ಯೂಬ್ ಚಾನೆಲ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ. ವಿದ್ಯಾರ್ಥಿಗಳನ್ನು ಏಕಕಾಲಕ್ಕೆ ಸಂಪರ್ಕಿಸಲು ಟೆಲಿಗ್ರಾಂ ಖಾತೆಯನ್ನೂ ತೆರೆಯಲಾಗಿದೆ.

‘ತರಗತಿಗಳು ಇಲ್ಲದ ಸಂದರ್ಭದಲ್ಲಿ ನೇರವಾಗಿ ಗ್ರಂಥಾಲಯಕ್ಕೆ ಬರುತ್ತೇವೆ. ನಮಗೆ ಬೇಕಾದ ಪುಸ್ತಕಗಳನ್ನು ನಾವೇ ಎರವಲು ಪಡೆಯಬಹುದು. ಮನೆಯಲ್ಲಿ ಕುಳಿತೇ ಯಾವ ಪುಸ್ತಕಗಳಿವೆ ಎಂಬುದನ್ನು ನೋಡಬಹುದಾಗಿದೆ’ ಎಂದು ಎಂ.ಕಾಂ ವಿದ್ಯಾರ್ಥಿನಿ ಕಾವ್ಯಾ ಕಾಲೇಜಿನ ಗ್ರಂಥಾಲಯದ ಕುರಿತು ಪ್ರತಿಕ್ರಿಯಿಸಿದರು.



ಜೇವರ್ಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪುಸ್ತಕ ಹುಡುಕುತ್ತಿರುವ ವಿದ್ಯಾರ್ಥಿನಿಯರು –ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

‘ವಿಡಿಯೊ’ ನೋಡಲು ಕೋಡ್ ಸ್ಕ್ಯಾನ್ ಮಾಡಿ.... ಪ್ರಜಾವಾಣಿ ನೋಡಿಯೊ

ಹೆಚ್ಚು ಪುಸ್ತಕ ಪಡೆದವರಿಗೆ ಬಹುಮಾನ!

ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸ ಬೆಳೆಸುವ ಸಲುವಾಗಿ ಗ್ರಂಥಪಾಲಕ ಡಾ. ವಿನೋದಕುಮಾರ್ ಅವರು ಒಂದು ಶೈಕ್ಷಣಿಕ ಅವಧಿಯಲ್ಲಿ ಅತಿ ಹೆಚ್ಚು ಪುಸ್ತಕಗಳನ್ನು ಪಡೆದು ಅಧ್ಯಯನ ಮಾಡುವ ಹಾಗೂ ಗ್ರಂಥಾಲಯದಲ್ಲಿ ಹೆಚ್ಚು ಸಮಯ ಕಳೆಯುವ ಮೊದಲ 10 ವಿದ್ಯಾರ್ಥಿಗಳಿಗೆ ತಮ್ಮ ಸ್ವಂತ ಖರ್ಚಿನಲ್ಲಿ ಬಹುಮಾನ ನೀಡುತ್ತಾರೆ.

‘ಗ್ರಂಥಾಲಯದ ಕಂಪ್ಯೂಟರ್‌ನಲ್ಲಿ ಯಾವ ವಿದ್ಯಾರ್ಥಿ ಎಷ್ಟು ಸಮಯ ಕಳೆದರು ಎಂಬ ದತ್ತಾಂಶ ಲಭ್ಯವಾಗುತ್ತದೆ. ಅದನ್ನು ಆಧರಿಸಿ ಬಹುಮಾನ ನೀಡುತ್ತೇನೆ. ಹೀಗಾಗಿ, ಗ್ರಂಥಾಲಯದಲ್ಲಿ ಕುಳಿತುಕೊಳ್ಳಲು ಪೈಪೋಟಿ ಇರುತ್ತದೆ’ ಎನ್ನುತ್ತಾರೆ ವಿನೋದಕುಮಾರ್.

ಅಲ್ಲದೇ, ಕಾಲೇಜಿನ ಹಳೆಯ ವಿದ್ಯಾರ್ಥಿಗಳು, ಸಾಹಿತ್ಯಾಸಕ್ತರಿಂದ ಪುಸ್ತಕಗಳನ್ನು ದೇಣಿಗೆಯಾಗಿ ಪಡೆದು, ಆ ಪುಸ್ತಕಗಳಿರುವ ವಿಭಾಗಕ್ಕೆ ಅವರ ಹೆಸರನ್ನೇ ಇಡುತ್ತಾರೆ. ಇದರಿಂದ ದಿನೇ ದಿನೇ ಪುಸ್ತಕಗಳ ಸಂಖ್ಯೆ ಹೆಚ್ಚುತ್ತಿದೆ.

ಸಿ.ಸಿ. ಟಿ.ವಿ. ಕ್ಯಾಮೆರಾ, ಕಂಪ್ಯೂಟರ್‌ಗಳನ್ನು ಖರೀದಿಸಲಾಗಿದೆ. ಏಕಕಾಲಕ್ಕೆ 130 ವಿದ್ಯಾರ್ಥಿಗಳು, 20 ಬೋಧಕ ಸಿಬ್ಬಂದಿ ಕೂರಲು ಅವಕಾಶವಿದೆ

ಡಾ. ವಿನೋದಕುಮಾರ್, ಗ್ರಂಥಪಾಲಕ

ವಿದ್ಯಾರ್ಥಿಗಳಿಗೆ ಹೆಚ್ಚು ಖರ್ಚು ಬರಬಾರದೆಂದು ಎಲ್ಲಾ ಅಗತ್ಯ ಪುಸ್ತಕಗಳನ್ನು ಖರೀದಿಸಲಾಗಿದೆ. ನಿಯತಕಾಲಿಕೆ, ದಿನಪತ್ರಿಕೆಗಳೂ ಬರುತ್ತವೆ.

ಡಾ. ಕರಿಗೋಳೇಶ್ವರ, ಪ್ರಾಂಶುಪಾಲ

₹1 ಲಕ್ಷ ಲಂಚ: ಲೋಕಾಯುಕ್ತ ಬಲೆಗೆ ಕಂದಾಯ ನಿರೀಕ್ಷಕ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಹೂಟಗಳ್ಳಿ ನಗರಸಭೆಯ ಕಂದಾಯ ನಿರೀಕ್ಷಕ ಮಂಜುನಾಥ್ ಇ–ಸ್ವತ್ತು ನೀಡಲು ₹1 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಬಲೆಗೆ ಸಿಕ್ಕಿಬಿದ್ದಿದ್ದಾರೆ.

ಚಾಮರಾಜನಗರ ಜಿಲ್ಲೆಯ ಹರದನಹಳ್ಳಿಯ ಕುಮಾರ್ ಎಂಬುವರು ನಗರಸಭೆ ವ್ಯಾಪ್ತಿಯ ಆಸ್ತಿಯೊಂದಕ್ಕೆ ಇ–ಸ್ವತ್ತು ದಾಖಲೆಗಾಗಿ ಅರ್ಜಿ ಸಲ್ಲಿಸಿದ್ದರು. ಅದನ್ನು ನೀಡಲು ಆರೋಪಿ ಮಂಜುನಾಥ್ ₹ 3 ಲಕ್ಷ ಕೇಳಿದ್ದರು. ಬೇಸತ್ತ ಕುಮಾರ್ ಲೋಕಾಯುಕ್ತರಿಗೆ ದೂರು ನೀಡಿದ್ದರು. ಅಧಿಕಾರಿಗಳ ಸೂಚನೆಯಂತೆ ನಗರಸಭೆ ಕಾರ್ಯಾಲಯದಲ್ಲಿ ಲಂಚದ ಹಣ ನೀಡುತ್ತಿದ್ದಾಗ ಲೋಕಾಯುಕ್ತ ಎಸ್.ಪಿ. ಸುರೇಶ್ ಬಾಬು ನೇತೃತ್ವದ ಅಧಿಕಾರಿಗಳ ತಂಡ ದಾಳಿ ನಡೆಸಿದ್ದು, ನಗದು ಸಮೇತ ಆರೋಪಿಯನ್ನು ವಶಕ್ಕೆ ಪಡೆಯಿತು.

ದಶಪಥದಲ್ಲಿ ಪ್ರತಿ ಹಳ್ಳಿಗೂ ಸ್ಕೈವಾಕ್

ಒಂದನೇ ಪುಟದಿಂದ...

₹32 ಕೋಟಿ ವೆಚ್ಚದಲ್ಲಿ ಒಟ್ಟು 39 ಕಡೆ ಸ್ಕೈವಾಕ್ ನಿರ್ಮಾಣಕ್ಕಾಗಿ ಈಗಾಗಲೇ ಅನುಮೋದನೆ ದೊರೆತಿದೆ. ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಾಮಗಾರಿ ಆರಂಭವಾಗಲಿದೆ ಎಂದು ಮೂಲಗಳು ತಿಳಿಸಿವೆ.

‘ಕೆಲವೆಡೆ ಮಾತ್ರ ಕೆಳಸೇತುವೆಗಳಿದ್ದು, ರಸ್ತೆಯ ಇನ್ನೊಂದು ಬದಿಗೆ ತೆರಳಲು ಜನ ಪರದಾಡುತ್ತಿದ್ದಾರೆ. 2–3 ಕಿ.ಮೀ ಸುತ್ತಿ ಬಳಸಿ ಬರಬೇಕು. ಸ್ಕೈವಾಕ್‌ನಿಂದ ಈ ಸಮಸ್ಯೆ ಪರಿಹಾರವಾಗುತ್ತದೆ’ ಎಂದು ಸುಂಡಹಳ್ಳಿಯ ಬಸವರಾಜು ತಿಳಿಸಿದರು.

ಜಂಕ್ಷನ್ ನಿರ್ಮಾಣ: ಮೈಸೂರು ನಗರಕ್ಕೆ ಪ್ರವೇಶ ಕಲ್ಪಿಸುವ ಮಣಿಪಾಲ್ ಆಸ್ಪತ್ರೆ ಸರ್ಕಲ್‌ನಲ್ಲಿ ವಾಹನ ದಟ್ಟಣೆಯಿಂದ, ದಶಪಥದಲ್ಲಿ ಸಂಚರಿಸುವ ವಾಹನಗಳು 5–10 ನಿಮಿಷ ಕಾಯಬೇಕು. ಅದನ್ನು ತಪ್ಪಿಸಲು, ಜಂಕ್ಷನ್ ನಿರ್ಮಿಸಲು ಉದ್ದೇಶಿಸಲಾಗಿದೆ.

‘ಸ್ಕೈವಾಕ್, ಜಂಕ್ಷನ್ ನಿರ್ಮಾಣ, ಭೂಸ್ವಾಧೀನ, ಪರಿಹಾರಕ್ಕಾಗಿ ಹೆಚ್ಚುವರಿಯಾಗಿ ₹ 1 ಸಾವಿರ ಕೋಟಿ ಅನುದಾನಕ್ಕಾಗಿ ಪ್ರಸ್ತಾವ ಸಲ್ಲಿಸಲಾಗಿದೆ’ ಎಂದು ಹೆದ್ದಾರಿ ಪ್ರಾಧಿಕಾರದ ಎಂಜಿನಿಯರ್ ಒಬ್ಬರು ತಿಳಿಸಿದರು. ಪ್ರಾಧಿಕಾರದ ನೂತನ ಯೋಜನಾ ನಿರ್ದೇಶಕ ರಾಹುಲ್ ಸಂಪರ್ಕಕ್ಕೆ ಸಿಗಲಿಲ್ಲ.

ಜಗನ್ನಾಥ ದೇವರ ರಥಯಾತ್ರೆ ಮೆರವಣಿಗೆ ವೇಳೆ ನೆರೆದಿದ್ದ ಜನಸ್ತೋಮ –ಪಿಟಿಐ ಚಿತ್ರ

ಪುರಿ: ಗುಂಡಿಚಾ ದೇವಾಲಯ ತಲುಪಿದ ಜಗನ್ನಾಥ ರಥ ಯಾತ್ರೆ

ಪುರಿ (ಪಿಟಿಐ): ಇಲ್ಲಿನ ಜಗನ್ನಾಥ ದೇವರು ಮತ್ತು ದೇವಿ ಸುಭದ್ರಾರನ್ನು ಹೊತ್ತ ರಥವು ರಾತ್ರಿಯಿಡೀ ಮೆರವಣಿಗೆ ಮೂಲಕ ಸಾಗಿ ಬುಧವಾರ ಗುಂಡಿಚಾ ದೇವಾಲಯಕ್ಕೆ ತಲುಪಿತು.

ಸುಭದ್ರಾ ದೇವಿಯ 'ದರ್ಪದಲ' ರಥವು ಗುಂಡಿಚಾದಿಂದ 200 ಮೀಟರ್ ದೂರವಿರುವ ಬಂದಸಖ ಪ್ರದೇಶದಲ್ಲಿ ನಿಂತಿದ್ದು, ಜಗನ್ನಾಥ ದೇವರ 'ನಂದಿಗೋಶ್' ರಥವು ಗಲಗಂಡಿ ಪ್ರದೇಶದಲ್ಲಿ ನಿಂತಿತು.

ಗುಂಡಿಚಾ ದೇವಾಲಯದ ಒಳಗೆ ದೇವರ ವಿಗ್ರಹ ಕೊಂಡೊಯ್ಯಲಾಗಿದ್ದು, ಜೂನ್ 28ರವರೆಗೆ ಅಲ್ಲಿ ಇರಲಿದೆ.

ಮಂಗಳವಾರ ನಡೆದ ರಥಯಾತ್ರೆಯ ಮೆರವಣಿಗೆ ಯಲ್ಲಿ ಸುಮಾರು 12 ಲಕ್ಷ ಭಕ್ತಾದಿಗಳು ಪಾಲ್ಗೊಂಡಿದ್ದರು. ರಥ ಎಳೆಯುವ ವೇಳೆ ಉಂಟಾದ ನೂಕು ನುಗ್ಗಲಿನಿಂದ 14 ಮಂದಿ ಗಾಯಗೊಂಡಿದ್ದಾರೆ ಎಂದು ಪುರಿಯ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಸಿಂಗ್ ತಿಳಿಸಿದ್ದಾರೆ.

127ನೇ ಸ್ಥಾನಕ್ಕೆ ಭಾರತ

ಲಿಂಗತ್ವ ಸಮಾನತೆ; ಕಳೆದ ವರ್ಷಕ್ಕಿಂತ 8 ಸ್ಥಾನ ಸುಧಾರಣೆ

ನವದೆಹಲಿ (ಪಿಟಿಐ): ಜಾಗತಿಕ ಲಿಂಗತ್ವ ಸಮಾನತೆಗೆ ಸಂಬಂಧಿಸಿ ಪ್ರಸಕ್ತ ಸಾಲಿನಲ್ಲಿ ಭಾರತದ ಸ್ಥಾನದಲ್ಲಿ ಸುಧಾರಣೆ ಕಂಡುಬಂದಿದೆ. 146 ದೇಶಗಳ ಪೈಕಿ ಭಾರತವು 127ನೇ ಸ್ಥಾನದಲ್ಲಿದೆ.

ಕಳೆದ ವರ್ಷ ಭಾರತ 135ನೇ ಸ್ಥಾನದಲ್ಲಿತ್ತು. ಈ ದೃಷ್ಟಿಯಿಂದ ಎಂಟು ಸ್ಥಾನಗಳಷ್ಟು ಸುಧಾರಣೆ ಕಂಡುಬಂದಿದೆ ಎಂದು ವಿಶ್ವ ಆರ್ಥಿಕ ವೇದಿಕೆ (ಡಬ್ಲ್ಯುಇಎಫ್) ಬಿಡುಗಡೆ ಮಾಡಿರುವ ವಾರ್ಷಿಕ ಲಿಂಗತ್ವ ಅಸಮಾನತೆ ಸೂಚ್ಯಂಕ ವರದಿ–2023ರಲ್ಲಿ ಹೇಳಲಾಗಿದೆ.

'ತನ್ನ ಸ್ಥಾನಕ್ಕೆ ಸಂಬಂಧಿಸಿ, ಕಳೆದ ಸಾಲಿಗೆ ಹೋಲಿಸಿದರೆ ಭಾರತವು ಶೇ 1.4ರಷ್ಟು ಸುಧಾರಣೆ ದಾಖಲಿಸಿದೆ. 2020ರಲ್ಲಿ ಇದ್ದ ಸ್ಥಿತಿಗೆ ಹೋಲಿಸಿದರೆ ಅಲ್ಪ ಸುಧಾರಣೆ ಕಂಡುಬಂದಿದೆ' ಎಂದು ವರದಿಯಲ್ಲಿ ವಿವರಿಸಲಾಗಿದೆ.

'ಶಿಕ್ಷಣದ ಎಲ್ಲ ಹಂತಗಳ ಪ್ರವೇಶದಲ್ಲಿ ಭಾರತವು ಸಮಾನತೆ ಸಾಧಿಸಿದೆ. ಲಿಂಗತ್ವ ಅಸಮಾನತೆಯನ್ನು ಅಳಿಸಿ ಹಾಕುವಲ್ಲಿ ಒಟ್ಟಾರೆ ಶೇ 64.3ರಷ್ಟು ಪ್ರಗತಿ ಸಾಧಿಸಲಾಗಿದೆ. ಆದರೆ, ಆರ್ಥಿಕತೆ ಮತ್ತು ಅವಕಾಶಕ್ಕೆ ಸಂಬಂಧಿಸಿದ ಸಮಾನತೆಯಲ್ಲಿ ಶೇ 36.7ರಷ್ಟು ಪ್ರಗತಿ ಸಾಧಿಸಲಾಗಿದ್ದು, ದೊಡ್ಡ ಅಂತರ ಇನ್ನೂ ಹಾಗೇ ಇದೆ' ಎಂದು ವರದಿಯಲ್ಲಿ ಹೇಳಲಾಗಿದೆ.

ಇದೇ ವಿಚಾರದಲ್ಲಿ ಪಾಕಿಸ್ತಾನದ ಸ್ಥಾನ 142 ಇದ್ದರೆ, ಬಾಂಗ್ಲಾದೇಶ–59, ಚೀನಾ– 107, ನೇಪಾಳ–116, ಶ್ರೀಲಂಕಾ–115 ಹಾಗೂ ಭೂತಾನ್ 103ನೇ ಸ್ಥಾನದಲ್ಲಿವೆ.

ವರದಿಯ ಪ್ರಮುಖ ಅಂಶಗಳು

- ಭಾರತದಲ್ಲಿ ವೇತನಕ್ಕೆ ಸಂಬಂಧಿಸಿದ ಅಸಮಾನತೆ ಮುಂದುವರಿದಿದೆ
- ಕಳೆದ ವರ್ಷಕ್ಕೆ ಹೋಲಿಸಿದರೆ ಭಾರತದಲ್ಲಿ ಉನ್ನತ ಮತ್ತು ತಾಂತ್ರಿಕ ಹುದ್ದೆಗಳಲ್ಲಿ ಮಹಿಳೆಯರ ಪಾಲು ಕುಸಿದಿದೆ
- ರಾಜಕೀಯ ಸಮಾನತೆ ಪ್ರಮಾಣ ಶೇ 25.3ರಷ್ಟಿದ್ದರೆ, ಲಿಂಗಾನುಪತದಲ್ಲಿ ಶೇ 1.9ರಷ್ಟು ಸುಧಾರಣೆ ಕಂಡುಬಂದಿದೆ
- ಗರಿಷ್ಠ ಲಿಂಗತ್ವ ಸಮಾನತೆ ಹೊಂದಿದ ದೇಶ ಐಸ್‌ಲ್ಯಾಂಡ್
- ದಕ್ಷಿಣ ಏಷ್ಯಾ ರಾಷ್ಟ್ರಗಳು ಶೇ 63.4ರಷ್ಟು ಸಾಧನೆ ದಾಖಲಿಸಿವೆ
- ಜಾಗತಿಕ ಲಿಂಗತ್ವ ಸಮಾನತೆ ಸೂಚ್ಯಂಕವು ಕೋವಿಡ್ ಪೂರ್ವ ಮಟ್ಟ ತಲುಪಿದೆ

ಲಿಂಗತ್ವ ಸಮಾನತೆ, ಕೋವಿಡ್ ಪಿಡುಗು ಪೂರ್ವದಲ್ಲಿದ್ದ ಮಟ್ಟಕ್ಕೆ ಮರಳುವ ಸೂಚನೆಯಿದೆ. ಆದರೆ, ದುಡಿಮೆಯಲ್ಲಿನ ಅವ್ಯವಸ್ಥೆಯ ಭಾರವನ್ನು ಮಹಿಳೆಯೇ ಹೊರಬೇಕಿದೆ

ಸಾದಿಯಾ ಜಹೀದಿ, ಡಬ್ಲ್ಯುಇಎಫ್ ವ್ಯವಸ್ಥಾಪಕ ನಿರ್ದೇಶಕಿ

ಸಮಾಜ ವಿಭಜಿಸುವ ಯತ್ನ; ಮೋಹನ್ ಭಾಗವತ್

ನಾಗ್ಪುರ (ಪಿಟಿಐ): 'ಭಾರತದ ಪ್ರಗತಿಯನ್ನು ಸಹಿಸದ ಕೆಲವು ದೇಶಗಳು; ರಾಷ್ಟ್ರದೊಳಗಿನ ಸಮಾಜವನ್ನು ವಿಭಜಿಸುವ ಪ್ರಯತ್ನ ನಡೆಸಿವೆ' ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘ ಚಾಲಕ ಮೋಹನ್ ಭಾಗವತ್ ಹೇಳಿದರು.

ಇಲ್ಲಿನ ಜಗನ್ನಾಥ ದೇಗುಲಕ್ಕೆ ಮಂಗಳವಾರ ಭೇಟಿ ನೀಡಿದ ಬಳಿಕ ಮಾತನಾಡಿದ ಅವರು 'ರಾಕ್ಷಸಿ ಶಕ್ತಿಗಳು ಭಾರತದ ಪ್ರಗತಿಯನ್ನು ವಿರೋಧಿಸುತ್ತಿವೆ. ದೇಶದೊಳಗೆ ಆಂತರಿಕ ದ್ವೇಷವನ್ನು ಪ್ರಚೋದಿಸಿ ಸಮಸ್ಯೆಯನ್ನು ಸೃಷ್ಟಿಸಲು ಯತ್ನಿಸುತ್ತಿವೆ' ಎಂದರು.

'ನಾವು ಒಂದಾಗಿ ಇರೋವರೆಗೂ ಯಾವ ಶಕ್ತಿಯಿಂದಲೂ ಮಣಿಸಲು ಸಾಧ್ಯವಿಲ್ಲ. ಆದ್ದರಿಂದಲೇ ನಮ್ಮನ್ನು ವಿಭಜಿಸುವ ಪ್ರಯತ್ನ ನಡೆದಿದೆ. ನಾವೆಲ್ಲರೂ ಪರಸ್ಪರ ಸಾಮರಸ್ಯದಿಂದ ಬದುಕಬೇಕಿದೆ' ಎಂದು ಭಾಗವತ್ ಒತ್ತಿ ಹೇಳಿದರು.

ಕರ್ನಾಟಕ ಸರ್ಕಾರ

ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

ವೈದ್ಯಕೀಯ ಶಿಕ್ಷಣ ಸ್ವಾಯುತ್ತ ಸಂಸ್ಥೆ, ಸಾಗರ ರಸ್ತೆ, ಶಿವಮೊಗ್ಗ–577 201

ಫೋನ್: 08182 229933/ 269701, ಫ್ಯಾಕ್ಸ್ : 08182 264100,

ವೆಬ್‌ಸೈಟ್: www.sims-shimoga.com

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

No:SIMS/Store/Tender/2023-24 ದಿನಾಂಕ: 20.06.2023

ಈ ಕೆಳಗಿನ HNS ಸಾಮಾಗ್ರಿಗಳು & ಇತರೆ ಸಾಮಾಗ್ರಿಗಳ ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಮಾನವ ಸಂಪನ್ಮೂಲ ಸೇವೆ ಒದಗಿಸುವ ಬಗ್ಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಆನ್ ಲೈನ್ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

SI NO	Tender No. & Date	Name of the Item	Publish, Duration, End, Date and time.
1	Re-Tender No. SIMS/STORE/HNS/5/2023-24, Dated: 20.06.2023	Procurements of HNS (Disposable Items) to Sims Shivamogga	From: 28-06-2023 to 04-07-2023 at 5.00 PM.
2	Re-Tender No:SIMS/STORE/HNS/6/2023-24, Dated: 20.06.2023	Procurements of HNS (Dental, Ophthalmology & Sutures Items) to Sims Shivamogga	From: 28-06-2023 to 04-07-2023 at 5.00 PM.
3	SIMS/EST/PSSB/3/2023-EST1-SIMS- SMG, dated: 20.06.2023.	Providing Manpower Services to Super Speciality Hospital, SIMS, Shimoga	From: 20-06-2023 to 05-07-2023 at 5.00 PM.

ಆನ್ ಲೈನ್ ನಲ್ಲಿ ಬಿಡ್ ದಾಖಲೆಗಳನ್ನು ವೆಬ್ ಸೈಟ್ http://kppp.karnataka.gov.in ನಿಂದ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ತೆರಯುವ ದಿನಾಂಕವನ್ನು ಟೆಂಡರ್ ಪುಸ್ತಕದಲ್ಲಿ ತಿಳಿಸಲಾಗುವುದು. ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು, ಯಾವುದೇ ಕಾರಣ ನೀಡದೆ ಟೆಂಡರ್ ನ್ನು ಸ್ವೀಕರಿಸುವ/ ತಿರಸ್ಕರಿಸುವ/ ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/– ನಿರ್ದೇಶಕರು/ಡೀನ್
ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಶಿವಮೊಗ್ಗ.

ವಾ.ಸಾ.ಸಂ.ಇ./ಶಿ/ನಂ.37-06/ಝೇಂಕಾರ್/2023-24

'ಸುಪ್ರೀಂ'ನಿಂದಲೂ ನಿರಾಳ; ಹೈಕೋರ್ಟ್ ಆದೇಶಕ್ಕಿಲ್ಲ ತಡೆ

ಸೆಂಥಿಲ್‌ಗೆ ಯಶಸ್ವಿ ಶಸ್ತ್ರಚಿಕಿತ್ಸೆ

ಚೆನ್ನೈ (ಪಿಟಿಐ): ಸಾರಿಗೆ ಇಲಾಖೆಯ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದಿಂದ (ಇ.ಡಿ) ಬಂಧಿತರಾಗಿರುವ ತಮಿಳುನಾಡಿನ ಸಚಿವ ವಿ. ಸೆಂಥಿಲ್ ಬಾಲಾಜಿ ಅವರಿಗೆ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ಯಶಸ್ವಿಯಾಗಿ ಬೈಪಾಸ್ ಶಸ್ತ್ರಚಿಕಿತ್ಸೆ ನಡೆದಿದೆ.

ವಿ.ಸೆಂಥಿಲ್ ಬಾಲಾಜಿ

'ಸೆಂಥಿಲ್ ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ. ಶಸ್ತ್ರಚಿಕಿತ್ಸೆ ಬಳಿಕ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಇರಿಸಲಾಗಿದ್ದು, ವೈದ್ಯರು ಮತ್ತು ದಾದಿಯರ ತಂಡ ನಿರಂತರ ನಿಗಾವಹಿಸಿದೆ' ಎಂದು ಕಾವೇರಿ ಗ್ರೂಪ್ ಆಫ್ ಹಾಸ್ಪಿಟಲ್ ಪ್ರಕಟಣೆ ಯಲ್ಲಿ ತಿಳಿಸಿದೆ.

ಇದರ ಬೆನ್ನಲ್ಲೆ, ಸೆಂಥಿಲ್ ಅವರನ್ನು ಸರ್ಕಾರಿ ಆಸ್ಪತ್ರೆಯಿಂದ ಖಾಸಗಿ ಆಸ್ಪತ್ರೆಗೆ ಸ್ಥಳಾಂತರಿಸಲು ಮದ್ರಾಸ್ ಹೈಕೋರ್ಟ್ ನೀಡಿದ್ದ ಆದೇಶಕ್ಕೆ ತಡೆ ನೀಡಲು ಸುಪ್ರೀಂಕೋರ್ಟ್ ನಿರಾಕರಿಸಿದೆ. ಹೈಕೋರ್ಟ್ ಆದೇಶಕ್ಕೆ ತಡೆ ನೀಡುವಂತೆ ಕೋರಿ ಇ.ಡಿ ಸುಪ್ರೀಂಕೋರ್ಟ್ ಮೊರೆ ಹೋಗಿತ್ತು. ಈ ಕುರಿತ ಅರ್ಜಿಯು ಇನ್ನೂ ಹೈಕೋರ್ಟ್‌ನಲ್ಲಿ ಬಾಕಿಯಿರುವ ಕಾರಣ, ಅದೇ ನ್ಯಾಯಾಲಯವನ್ನು ಸಂಪರ್ಕಿಸುವಂತೆ ಇ.ಡಿಗೆ 'ಸುಪ್ರೀಂ' ಸೂಚನೆ ನೀಡಿತು.

ಕಳೆದ ವಾರ ಇ.ಡಿ ಅಧಿಕಾರಿಗಳು ಬಂಧಿಸಿದ ಬಳಿಕ, ಸೆಂಥಿಲ್‌ಗೆ ಎದೆ ನೋವು ಕಾಣಿಸಿಕೊಂಡಿದ್ದರಿಂದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಸೆಂಥಿಲ್ ಅವರ ಅರ್ಜಿಯನ್ನು ವಿಚಾರಣೆ ನಡೆಸಿದ್ದ ಮದ್ರಾಸ್ ಹೈಕೋರ್ಟ್, ಶಸ್ತ್ರ-ಚಿಕಿತ್ಸೆ ಸಲುವಾಗಿ ಸರ್ಕಾರಿ ಆಸ್ಪತ್ರೆಯಿಂದ ಕಾವೇರಿ ಆಸ್ಪತ್ರೆಗೆ ಸ್ಥಳಾಂತರಿಸಲು ಒಪ್ಪಿಗೆ ನೀಡಿ ಆದೇಶಿಸಿತ್ತು.

ಸೆಂಥಿಲ್ ಅವರನ್ನು ಸಂಪುಟದಲ್ಲಿ ಮುಂದುವರಿಸಿರುವುದನ್ನು ವಿರೋಧಿಸಿ ಎಐಎಡಿಎಂಕೆ ನಾಯಕರು ತಮಿಳುನಾಡಿನ ವಿವಿಧೆಡೆ ಪ್ರತಿಭಟನೆ ನಡೆಸಿದ್ದಾರೆ.

ಇ.ಡಿಗೆ ನೋಟಿಸ್: ಅಣ್ಣಾಮಲೈ ಟೀಕೆ

ಚೆನ್ನೈ (ಪಿಟಿಐ): ಡಿಎಂಕೆ ಸರ್ಕಾರದ ಇಂಧನ ಸಚಿವ ವಿ.ಸೆಂಥಿಲ್ ಬಾಲಾಜಿ ಅವರನ್ನು ಕೇಂದ್ರದ ತನಿಖಾ ಏಜೆನ್ಸಿ (ಇ.ಡಿ) ಬಂಧಿಸುವಾಗ ಮಾನವ ಹಕ್ಕುಗಳನ್ನು ಉಲ್ಲಂಘಿಸಿದೆ ಎನ್ನುವ ದೂರಿನ ಮೇರೆಗೆ ರಾಜ್ಯ ಮಾನವ ಹಕ್ಕುಗಳ ಆಯೋಗವು (ಎಸ್‌ಎಚ್‌ಆರ್‌ಸಿ) ಇ.ಡಿಗೆ ನೋಟಿಸ್ ಜಾರಿ ಮಾಡಿ, ವರದಿ ನೀಡುವಂತೆ ಸೂಚಿಸಿದೆ.

ಆಯೋಗದ ಈ ಕ್ರಮವನ್ನು ಪ್ರಶ್ನಿಸಿರುವ ರಾಜ್ಯ ಬಿಜೆಪಿಯು, 'ರಾಜ್ಯ ಮಾನವ ಹಕ್ಕುಗಳ ಆಯೋಗವು ತಟಸ್ಥ ಮತ್ತು ಪಾರದರ್ಶಕ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿಲ್ಲ' ಎಂದು ಬುಧವಾರ ಆರೋಪಿಸಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ, ಕೇಂದ್ರ ಏಜೆನ್ಸಿಯ ಸಿಬ್ಬಂದಿ ಸಂವಿಧಾನದ ಅಡಿಯಲ್ಲಿ ತಮ್ಮ ಕರ್ತವ್ಯ ನಿರ್ವಹಿಸುವಾಗ, ರಾಜ್ಯ ಮಾನವ ಹಕ್ಕುಗಳ ಆಯೋಗವು ಆಡಳಿತಾರೂಢ ಡಿಎಂಕೆಯ ವಿಸ್ತರಿತ ಶಾಖೆಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಆರೋಪಿಸಿದ್ದಾರೆ.

ತಮ್ಮ ಕರ್ತವ್ಯವನ್ನು ನಿರ್ವಹಿಸಿದ್ದಕ್ಕಾಗಿ ಇ.ಡಿ ಅಧಿಕಾರಿಗಳಿಗೆ ಆಯೋಗ ಸಮನ್ಸ್ ನೀಡಿದರೆ ಅದಕ್ಕೆ ಕೊನೆಯೇ ಇರುವುದಿಲ್ಲ ಎಂದು ಅವರು ಹೇಳಿದ್ದಾರೆ.

ಸರ್ಕಾರಿ ಆಸ್ಪತ್ರೆಯಿಂದ ಖಾಸಗಿ ಆಸ್ಪತ್ರೆಗೆ ಸ್ಥಳಾಂತರಿಸುವಂತೆ ಬಾಲಾಜಿ ಅವರು ಮಾಡಿರುವ ಮನವಿಯ ಬಗ್ಗೆ ಪ್ರತಿಕ್ರಿಯಿಸಿರುವ ಅಣ್ಣಾಮಲೈ, 'ಇದು ದ್ರಾವಿಡ ಮಾದರಿಯನ್ನು ತೋರಿಸುತ್ತದೆ. ನಮ್ಮ ಸರ್ಕಾರಿ ಆಸ್ಪತ್ರೆಗಳು ಅಷ್ಟೊಂದು ಸುರಕ್ಷಿತವಲ್ಲ ಎಂಬುದನ್ನು ಡಿಎಂಕೆ ಒಪ್ಪಿಕೊಂಡಂತಾಗಿದೆ' ಎಂದು ಟೀಕಿಸಿದ್ದಾರೆ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಮುಖ್ಯ ಅಭಿಯಂತರರವರ ಕಚೇರಿ, ಆರ್‌ಡಿಡಬ್ಲ್ಯು&ಎಸ್ ಇಲಾಖೆ, 1ನೇ ಮಹಡಿ, "ಇ" ಬ್ಲಾಕ್,ಕೆ.ಹೆಚ್.ಬಿ. ಕಾಂಪ್ಲೆಕ್ಸ್, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560009

ದೂ.ಸಂ.: 080–22533700, e-mail: cerws14@gmail.com

ಸಂಖ್ಯೆ: ಆರ್‌ಡಬ್ಲ್ಯೂಎಸ್‌ಎಸ್‌ಡಿ/2023–24/ಎಸ್‌ಇ0013 ದಿನಾಂಕ: 21.06.2023

ಅಲ್ಪಾವಧಿ ಟೆಂಡರ್ ಆಹ್ವಾನ

ರಾಜ್ಯ ಸರ್ಕಾರದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, **ಬಾಗಲಕೋಟೆ ಜಿಲ್ಲೆಯಲ್ಲಿ ಬಹು ಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಡಿಬಿಒಟಿ ಆಧಾರದ ಮೇಲೆ ಜಲ ಜೀವನ್ ಮಿಷನ್ ಅಡಿಯಲ್ಲಿ ಅನುಷ್ಠಾನಕ್ಕೆ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆನ್ಸಿ ಸೇವೆಗಳನ್ನು ಒದಗಿಸಲು** ಅರ್ಹ ಬಿಡ್‌ದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **(https://kppp.karnataka.gov.in)** ನಲ್ಲಿ **ಅಲ್ಪಾವಧಿ ಟೆಂಡರ್** ಆಹ್ವಾನಿಸಿದೆ.

ಬಿಡ್‌ಗಳನ್ನು ಇ–ಪೋರ್ಟಲ್ ಸಲ್ಲಿಸಲು ಕೊನೆಯ ದಿನಾಂಕ: **06.07.2023ರ ಸಂಜೆ 4.00 ಗಂಟೆಯೊಳಗೆ.**

ಇ.ಎಂ.ಡಿ ಮೊತ್ತ **ರೂ.12,01,000/–.**

ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಗ್ರಾ.ಕು.ನೀ.&ನೈ.ಇಲಾಖೆ, ಬೆಂಗಳೂರು

DIPR/CP/BCPL/330/2023-24

ಕರ್ನಾಟಕ ಗೃಹ ಮಂಡಳಿ

ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ನಗರ ಸಮನ್ವಯ ಕಛೇರಿ, 3ನೇ, 4ನೇ ಮತ್ತು 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–09 ದೂರವಾಣಿ: 22273511–16, ವಿಸ್ತರಣೆ: 307, 309 ಅಥವಾ 335

ಸಂಖ್ಯೆ: ಕಗೃಮಂ/ಕಾ.ಅ./ಬೆಂ.ನ.ಸ.ಕ/55/2023–24 ದಿನಾಂಕ: 20–06–2023

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯದಿಂದ ಸ್ಥಾಪಿತ ರಾಷ್ಟ್ರ ಮಟ್ಟದ ಪರಿಸರ ಪರಿಣಾಮ ಅಂದಾಜೀಕರಣ ಪ್ರಾಧಿಕಾರ, ಕರ್ನಾಟಕವು ಕರ್ನಾಟಕ ಗೃಹ ಮಂಡಳಿ ಪ್ರಸ್ತಾಪಿಸಿರುವ ವಾಣಿಜ್ಯ ಶಾಪಿಂಗ್ ಮಾಲ್/ಮಲ್ಟಿಪ್ಲೆಕ್ಸ್ ನಿರ್ಮಾಣವನ್ನು ಸರ್ವೆ ನಂ.19/1 ಮತ್ತು 20/8 ಕೆಂಗೇರಿ, ಬೆಂಗಳೂರು ದಕ್ಷಿಣ, ಬೆಂಗಳೂರು ಇಲ್ಲಿ ನಿರ್ಮಿಸಲು **ದಿನಾಂಕ: 02–06–2023 ಪತ್ರ ಸಂಖ್ಯೆ: ಎಸ್‌ಇಐಎಎ58ಸಿ.ಓ.ಎನ್. 2023**ರಲ್ಲಿ ಪರಿಸರ ವಿಮೋಚನ ಪತ್ರವನ್ನು ಪಡೆದಿರುತ್ತಾರೆ.

ಈ ಪರಿಸರ ವಿಮೋಚನಾ ಪತ್ರವನ್ನು ರಾಜ್ಯ ಮಟ್ಟದ ಪರಿಸರ ಪರಿಣಾಮ ಅಂದಾಜೀಕರಣ ಪ್ರಾಧಿಕಾರ, ಕರ್ನಾಟಕದವರ **ವೆಬ್‌ಸೈಟ್ https://parivesh.nic.in** ಇಲ್ಲಿ ಲಭ್ಯವಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಬೆಂಗಳೂರು ನಗರ ಸಮನ್ವಯ ಕಛೇರಿ, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

DIPR/CP/RO329/2023-24

ಬಿಗಿಭದ್ರತೆಗೆ ಹೈಕೋರ್ಟ್ ನಿರ್ದೇಶನ

ಕೋಲ್ಕತ್ತ(ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಜುಲೈ 8ರಂದು ಪಂಚಾಯಿತಿ ಚುನಾವಣೆ ನಡೆಯಲಿದ್ದು, ಮುಂಜಾಗ್ರತೆಯಾಗಿ 82 ಸಾವಿರಕ್ಕೂ ಹೆಚ್ಚು ಕೇಂದ್ರ ಭದ್ರತಾ ಸಿಬ್ಬಂದಿ ನಿಯೋಜನೆಗೆ ಅಗತ್ಯ ಕ್ರಮಕೈಗೊಳ್ಳಬೇಕು ಎಂದು ಕಲ್ಕತ್ತಾ ಹೈಕೋರ್ಟ್, ಬುಧವಾರ ರಾಜ್ಯ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿದೆ.

ರಾಜ್ಯದಲ್ಲಿ 2013ರ ವೇಳೆ ನಡೆದ ಪಂಚಾಯಿತಿ ಚುನಾವಣೆಯಲ್ಲೂ ಇಷ್ಟೇ ಸಂಖ್ಯೆಯ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು ಎಂದು ಚುನಾವಣಾ ಆಯೋಗವು, ಮುಖ್ಯ ನ್ಯಾಯಮೂರ್ತಿ ಟಿ.ಎಸ್.ಶಿವಜ್ಞಾನಂ ಅಧ್ಯಕ್ಷತೆಯ ವಿಭಾಗೀಯ ಪೀಠದ ಗಮನಕ್ಕೆ ತಂದಿತು.

ದಶಕದ ಹಿಂದೆ ಪಶ್ಚಿಮ ಬಂಗಾಳದಲ್ಲಿದ್ದ 17 ಜಿಲ್ಲೆಗಳ ಸಂಖ್ಯೆ ಈಗ 22ಕ್ಕೇರಿದೆ. ಇದರಿಂದ ಯಾವುದೇ ಸಮಸ್ಯೆಯಾಗುವುದಿಲ್ಲ. ಆದರೆ, ಮತದಾರರ ಸಂಖ್ಯೆ ಹೆಚ್ಚಳವಾಗಿದೆ. ತ್ವರಿತವಾಗಿ ಅಗತ್ಯ ಇರುವ ರಕ್ಷಣಾ ಸಿಬ್ಬಂದಿ ನಿಯೋಜನೆಗೆ ಕ್ರಮಕೈಗೊಳ್ಳಬೇಕು ಎಂದು ಪೀಠವು ಸೂಚಿಸಿತು.

ಚುನಾವಣೆಯಲ್ಲಿ ಹಿಂಸಾಚಾರ ತಲೆದೋರದಂತೆ ಮುಂಜಾಗ್ರತೆ ಕೈಗೊಳ್ಳುವುದಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಈ ನಿರ್ದೇಶನ ನೀಡಿದೆ. ಹಾಗಾಗಿ, ಭದ್ರತಾ ಸಿಬ್ಬಂದಿ ನಿಯೋಜಿಸುವಂತೆ ಚುನಾವಣಾ ಆಯೋಗವು, ಕೇಂದ್ರ ಸರ್ಕಾರಕ್ಕೆ ಕೋರಲಿದೆ.

ಮತ್ತೆರಡು ಕಡೆ ಗುಂಡಿನ ದಾಳಿ

ಇಂಫಾಲ್(ಪಿಟಿಐ): ಶಾಂತ ಪರಿಸ್ಥಿತಿ ನಿರ್ಮಾಣವಾಗಿದ್ದ ಮಣಿಪುರದ ಪೂರ್ವ ಭಾಗದ ತಂಗ್ಜಿಂಗ್‌ನಲ್ಲಿ ಮಂಗಳವಾರ ಮಧ್ಯರಾತ್ರಿ ಮತ್ತೆ ಗುಂಡಿನ ಮೊರೆತ ಕೇಳಿಬಂದಿದೆ. ರಾತ್ರಿ 11.45ಕ್ಕೆ ಶಸ್ತ್ರಸಜ್ಜಿತ ದುಷ್ಕರ್ಮಿಗಳು 15ರಿಂದ 20 ಸುತ್ತು ಗುಂಡಿನ ದಾಳಿ ನಡೆಸಿದ್ದಾರೆ.

ಕಾಂಗ್ಪುಪ್ ಭಾಗಕ್ಕೆ ಸೇರಿದ ಗೆಲ್ಜಾಂಗ್ ಮತ್ತು ಸಿಂಗ್ಡಾ ಹಳ್ಳಿಯಲ್ಲೂ ಗುಂಡಿನ ದಾಳಿ ನಡೆದಿದೆ. ಈ ಎರಡು ಹಳ್ಳಿಗಳ ನಡುವೆ ಎರಡು ಕಿ.ಮೀ. ಅಂತರವಿದ್ದು, 4ರಿಂದ 5 ಸುತ್ತು ಗುಂಡಿನ ದಾಳಿ ನಡೆಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಸ್ಸಾಂ ರೈಫಲ್ಸ್ ಪಡೆಯ ಯೋಧರು ಘಟನಾ ಸ್ಥಳಕ್ಕೆ ತೆರಳಿದ್ದು, ಅನಾಹುತಗಳ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾರೆ.

ನವೋದಯ ವಿದ್ಯಾಲಯ ಸಮಿತಿ

(ಶಿಕ್ಷಣ ಸಚಿವಾಲಯದ ಅಧೀನ ಸ್ವಾಯತ್ತ ಸಂಸ್ಥೆ)

ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ವಿಭಾಗ, ಭಾರತ ಸರ್ಕಾರ

G20 भारत 2023 INDIA

ಜವಾಹರ ನವೋದಯ ವಿದ್ಯಾಲಯಗಳಲ್ಲಿ 6ನೇ ತರಗತಿಗೆ 2024–25 ನೇ ಶೈಕ್ಷಣಿಕ ವರ್ಷಕ್ಕೆ ಪ್ರವೇಶ ಅಧಿಸೂಚನೆ

2024–25ನೇ ಶೈಕ್ಷಣಿಕ ವರ್ಷದ 6ನೇ ತರಗತಿಗೆ ಜ.ನ.ವಿ. ಆಯ್ಕೆ ಪರೀಕ್ಷೆ (JNVST) ಮೂಲಕ ಪ್ರವೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10–08–2023

ಆಯ್ಕೆ ಪರೀಕ್ಷೆಯ ದಿನಾಂಕ: 04–11–2023 (ಚಳಿಗಾಲ ಬದ್ಧ ಜ.ನ.ವಿ.ಗಳು) | 20–01–2024 (ಬೇಸಿಗೆಕಾಲ ಬದ್ಧ ಜ.ನ.ವಿ.ಗಳು)

ಸಾಮಾನ್ಯ ಲಕ್ಷಣಗಳು

- ಪ್ರತಿಯೊಂದು ಜಿಲ್ಲೆಯಲ್ಲಿ ಸಹಶಿಕ್ಷಣ ವಸತಿ ಶಾಲೆಗಳು.
- ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ವಸತಿ ನಿಲಯಗಳು.
- ಉಚಿತ ಶಿಕ್ಷಣ, ಊಟ ಮತ್ತು ವಸತಿ.
- ವಲಸೆ ನೀತಿಯ ಮುಖಾಂತರ ವಿಶಾಲ ಸಾಂಸ್ಕೃತಿಕ ವಿನಿಮಯ.
- ಕ್ರೀಡೆ ಮತ್ತು ಆಟೋಟಗಳಿಗೆ ಉತ್ತೇಜನ.
- NCC, NSS, ಸ್ಕೌಟ್ಸ್ ಮತ್ತು ಗೈಡ್.

ವಿಶೇಷ ಲಕ್ಷಣಗಳು

- ಗುಣಮಟ್ಟದ ಶಿಕ್ಷಣಕ್ಕೆ ವಿಶೇಷ ಮಹತ್ವ ಕೊಟ್ಟಿರುವುದರ ಪರಿಣಾಮವಾಗಿ.
- JEE MAIN - 2022 : 7585 ರಲ್ಲಿ 4296 (56.6%) ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ.
- JEE ಅಡ್ವಾನ್ಸ್ಡ 2022 : 3000 ರಲ್ಲಿ 1010 (33.7%) ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ
- NEET-2022: 24807 ರಲ್ಲಿ 19352 (78.0%) ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ.
- X ಮತ್ತು XII ಬೋರ್ಡ್ ತರಗತಿಗಳಲ್ಲಿ ಉತ್ತಮ ಫಲಿತಾಂಶ (2022–23) ವರ್ಗ
- X : 99.14% ವರ್ಗ XII : 97.51%



ಅರ್ಹತೆ

- ಅಭ್ಯರ್ಥಿಗಳು ಕಾರ್ಯನಿರ್ವಹಿಸುತ್ತಿರುವ ಸಂಬಂಧಿಸಿದ ಜವಾಹರ ನವೋದಯ ವಿದ್ಯಾಲಯಗಳ ಆಯಾ ಜಿಲ್ಲೆಯ ವಿಶ್ವಾಸಾರ್ಹ ನಿವಾಸಿಗಳೇ ಆಗಿರಬೇಕು ಮತ್ತು 2023–24ನೇ ಶೈಕ್ಷಣಿಕ ವರ್ಷದಲ್ಲಿ ಅದೇ ಜಿಲ್ಲೆಯ ಸರ್ಕಾರಿ/ ಸರ್ಕಾರದಿಂದ ಮಾನ್ಯತೆ ಪಡೆದಿರುವ ಶಾಲೆಯಲ್ಲಿ 5ನೇ ತರಗತಿಯಲ್ಲಿ ಓದುತ್ತಿರಬೇಕು.
- ವಿದ್ಯಾರ್ಥಿಯು 3 ಮತ್ತು 4ನೇ ತರಗತಿಯ ಪೂರ್ಣ ಶೈಕ್ಷಣಿಕ ವರ್ಷವನ್ನು ಸರ್ಕಾರಿ / ಸರ್ಕಾರದಿಂದ ಮಾನ್ಯತೆ ಪಡೆದಿರುವ ಶಾಲೆಯಲ್ಲಿ ಪೂರ್ಣಾವಧಿ ಶಾಲಾ ಶಿಕ್ಷಣ ಪಡೆದು ತೇರ್ಗಡೆ ಹೊಂದಿರಬೇಕು. 01.05.2012 ರಿಂದ 31.07.2014ರ ಮಧ್ಯೆ ಜನಿಸಿದವರಾಗಿರಬೇಕು (ಎರಡೂ ದಿನಗಳು ಸೇರಿ).

ಮೀಸಲಾತಿ

- ಜಿಲ್ಲೆಯಲ್ಲಿ ಕನಿಷ್ಠ ಶೇ 75 ರಷ್ಟು ಸ್ಥಾನಗಳು ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಂದ ತುಂಬಲಾಗುವುದು.
- ಕೇಂದ್ರ ಸರ್ಕಾರದ ನಿಯಮದನ್ವಯ SC/ ST, OBC ಮತ್ತು ದಿವ್ಯಾಂಗದವರಿಗೆ ಕಾಯ್ದಿರಿಸಲಾಗಿದೆ.
- ಕನಿಷ್ಠ 1/3 ರಷ್ಟು ಸ್ಥಾನಗಳು ಬಾಲಕಿಯರಿಗೆ ಮೀಸಲಾಗಿರುತ್ತವೆ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ

www.navodaya.gov.in

Issued by: Navodaya Vidyalaya Samiti

ಕರ್ನಾಟಕ ಸರ್ಕಾರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560012. ದೂರವಾಣಿ: 080–23460460 (5 ಲೈನ್ಸ್), ಇ–ಮೇಲ್: keauthority-ka@nic.in ವೆಬ್‌ಸೈಟ್: http://kea.kar.nic.in

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.15/2022–23 (ಕೆಕೆ) ದಿನಾಂಕ: 20–06–2023

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.12/2022–23 (ಆರ್‌ಪಿಸಿ) ದಿನಾಂಕ: 20–06–2023

ಅಧಿಸೂಚನೆ

ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ಸಂಸ್ಥೆಗಳಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳಿಗೆ ನೇರ ನೇಮಕಾತಿ

(ಎ) ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಬಿ) ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ, (ಸಿ) ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, (ಡಿ) ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಸಂಸ್ಥೆಗಳಲ್ಲಿ ಖಾಲಿ ಇರುವ **ಮಿಕ್ಕುಳಿದ ವೃಂದ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ (ಸ್ಥಳೀಯ) ವೃಂದದ ವಿವಿಧ** ಹುದ್ದೆಗಳಿಗೆ ನೇರ ನೇಮಕಾತಿ ಸಂಬಂಧ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಹ ಅಭ್ಯರ್ಥಿಗಳು ವಿವಿಧ ಹುದ್ದೆಗಳ ನೇಮಕಾತಿಗೆ ಅರ್ಹತೆ ಪಡೆಯಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಬೇಕು.

ಕ್ರ. ಸಂ.	ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು	ವೇತನ ಶ್ರೇಣಿ	ಬ್ಯಾಕ್ ಲಾಗ್ ಹುದ್ದೆಗಳು	ಉಳಿಕೆ ಮೂಲ ವೃಂದ	ಕಲ್ಯಾಣ ಕರ್ನಾಟಕ ವೃಂದ
1	ಸಹಾಯಕ ವ್ಯವಸ್ಥಾಪಕರು (ತಾಂತ್ರಿಕ) ಗ್ರೂಪ್–ಬಿ	52650-97100	02	01	01
2	ಸಹಾಯಕ ವ್ಯವಸ್ಥಾಪಕರು (ತಾಂತ್ರಿಕೇತರ)– ಗ್ರೂಪ್–ಬಿ	52650-97100	01	-	01
3	ಆಪ್ತ ಕಾರ್ಯದರ್ಶಿ – ಗ್ರೂಪ್–ಸಿ	27650-52650	01	-	-
4	ಹಿರಿಯ ಸಹಾಯಕರು (ತಾಂತ್ರಿಕ) ಗ್ರೂಪ್–ಸಿ	33450-62600	02	01	01
5	ಹಿರಿಯ ಸಹಾಯಕರು (ತಾಂತ್ರಿಕೇತರ) ಗ್ರೂಪ್–ಸಿ	33450-62600	02	-	01
6	ಸಹಾಯಕರು (ತಾಂತ್ರಿಕ) ಗ್ರೂಪ್–ಸಿ	30350-58250	01	04	01
7	ಸಹಾಯಕರು (ತಾಂತ್ರಿಕೇತರ) ಗ್ರೂಪ್–ಸಿ	30350-58250	01	04	01

ಕ್ರ. ಸಂ.	ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ	ವೇತನ ಶ್ರೇಣಿ	ಒಟ್ಟು ಹುದ್ದೆ	ಬ್ಯಾಕ್‌ಲಾಗ್ ಹುದ್ದೆಗಳು	ಉಳಿಕೆ ಮೂಲ ವೃಂದ	ಕಲ್ಯಾಣ ಕರ್ನಾಟಕ ವೃಂದ	ಬ್ಯಾಕ್‌ಲಾಗ್ ಹುದ್ದೆಗಳು
1	ಸಹಾಯಕ ವ್ಯವಸ್ಥಾಪಕರು	43100-83900	10	-	08	02	-
2	ಗುಣಮಟ್ಟ ನಿರೀಕ್ಷಕರು	27650-52650	23	01	18	01	03
3	ಹಿರಿಯ ಸಹಾಯಕರು (ಲೆಕ್ಕ)	27650-52650	33	02	26	05	-
4	ಹಿರಿಯ ಸಹಾಯಕರು	27650-52650	57	-	49	08	-
5	ಕಿರಿಯ ಸಹಾಯಕರು	21400-42000	263	-	244	19	-

ಕ್ರ. ಸಂ.	ಕರ್ನಾಟಕ ಕಟ್ಟಡ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ	ವೇತನ ಶ್ರೇಣಿ	ಒಟ್ಟು ಹುದ್ದೆ	ಉಳಿಕೆ ಮೂಲ ವೃಂದ	ಕಲ್ಯಾಣ ಕರ್ನಾಟಕ ವೃಂದ
1	ಕಲ್ಯಾಣ ಅಧಿಕಾರಿ (ಗ್ರೂಪ್–ಸಿ)	37900-70850	12	09	03
2	ಕ್ಷೇತ್ರ ನಿರೀಕ್ಷಕರು (ಗ್ರೂಪ್–ಸಿ)	33450-62600	60	45	15
3	ಪ್ರಥಮ ದರ್ಜೆ ಸಹಾಯಕರು (ಗ್ರೂಪ್–ಸಿ)	27650-52650	12	08	04
4	ಆಪ್ತ ಸಹಾಯಕರು (ಗ್ರೂಪ್–ಸಿ)	27650-52650	02	02	-
5	ದ್ವಿತೀಯ ದರ್ಜೆ ಸಹಾಯಕರು (ಗ್ರೂಪ್–ಸಿ)	21400-42000	100	64	36

ಕ್ರ. ಸಂ.	ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್	ವೇತನ ಶ್ರೇಣಿ	ಒಟ್ಟು ಹುದ್ದೆ	ಉಳಿಕೆ ಮೂಲ ವೃಂದ	ಕಲ್ಯಾಣ ಕರ್ನಾಟಕ ವೃಂದ (8%)	ಕಲ್ಯಾಣ ಕರ್ನಾಟಕ ವೃಂದ (80%)
1	ಸಹಾಯಕ ವ್ಯವಸ್ಥಾಪಕರು (ಸೇಲ್ಸ್)	44200-80100	14	11	03	-
2	ಸಹಾಯಕ ವ್ಯವಸ್ಥಾಪಕರು (ಅಕೌಂಟ್ಸ್)	44200-80100	04	04	-	-
3	ಸಹಾಯಕ ವ್ಯವಸ್ಥಾಪಕರು (ಪರ್ಸನಲ್)	44200-80100	01	01	-	-
4	ಸಹಾಯಕ ವ್ಯವಸ್ಥಾಪಕರು (ಫಾರ್ಮ್)	44200-80100	01	01	-	-
5	ಸಹಾಯಕ ವ್ಯವಸ್ಥಾಪಕರು (ಟೂರ್ಸ್ & ಟ್ರಾವಲ್ಸ್)	44200-80100	01	01	-	-
6	ಸಹಾಯಕ ವ್ಯವಸ್ಥಾಪಕರು (ಇ.ಡಿ.ಪಿ)	44200-80100	02	02	-	-
7	ಸೇಲ್ಸ್ ಮೇಲ್ವಿಚಾರಕರು	35150-64250	19	16	02	01
8	ಮಾರಾಟ ಪ್ರತಿನಿಧಿ	28950-55350	06	-	02	04
9	ಸೇಲ್ಸ್ ಇಂಜಿನಿಯರ್ (ಮೆಕ್ಯಾನಿಕಲ್)	35150-64250	01	01	-	-
10	ಸೇಲ್ಸ್ ಇಂಜಿನಿಯರ್ (ಎಲೆಕ್ಟ್ರಿಕಲ್)	35150-64250	01	01	-	-
11	ಸೇಲ್ಸ್ ಇಂಜಿನಿಯರ್ (ಸಿವಿಲ್)	35150-64250	01	01	-	-
12	ಸೇಲ್ಸ್ ಇಂಜಿನಿಯರ್ (ಇ&ಸಿ)	35150-64250	01	01	-	-
13	ಲೆಕ್ಕ ಗುಮಾಸ್ತರು	25200-50150	06	05	01	-
14	ಗುಮಾಸ್ತರು	21900-43100	14	12	02	-

ಈ ಮೇಲ್ಕಂಡ ವಿವಿಧ ಸರ್ಕಾರಿ ಇಲಾಖೆ / ಸಂಸ್ಥೆಗಳಲ್ಲಿನ ನೇಮಕಾತಿಗೆ ಹುದ್ದೆವಾರು ಮತ್ತು ವರ್ಗವಾರು ವರ್ಗೀಕರಣ, ವಯೋಮಿತಿ, ಶೈಕ್ಷಣಿಕ ವಿದ್ಯಾರ್ಹತೆ, ಸ್ಪರ್ಧಾತ್ಮಕ ಪರೀಕ್ಷೆಯ ವಿಧಾನ ಹಾಗೂ ನೇಮಕಾತಿಗೆ ಸಂಬಂಧಿಸಿದ ಇತರೆ ಎಲ್ಲಾ ಷರತ್ತುಗಳನ್ನೊಳಗೊಂಡಂತೆ ವಿವರವಾದ ಪ್ರಕಟಣೆಯನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ದಿನಾಂಕ: **23–06–2023 ರಂದು ಪ್ರಕಟಿಸಲಾಗುವುದು**. ಅರ್ಹ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್: **http://kea.kar.nic.in** ನಲ್ಲಿ ನಿಗದಿತ ಲಿಂಕ್ ಅನ್ನು ಆಯ್ಕೆ ಮಾಡಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಬೇಕು.

i	ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ	23–06–2023 ರ ಮಧ್ಯಾಹ್ನ 2.00 ರಿಂದ
ii	ಇ–ಅಂಚೆ ಕಛೇರಿಗಳಲ್ಲಿ ಶುಲ್ಕ ಪಾವತಿ (ಕಚೇರಿಯ ವೇಳೆಯಲ್ಲಿ)	26–06–2023 ರ ಬೆಳಿಗ್ಗೆ 11.00 ರಿಂದ
iii	ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	22–07–2023 ರ ಸಂಜೆ 5.30 ರ ವರೆಗೆ
iv	ಶುಲ್ಕ ಪಾವತಿ ಮಾಡಲು ಕೊನೆಯ ದಿನಾಂಕ (ಕಚೇರಿಯ ವೇಳೆಯಲ್ಲಿ)	25–07–2023

ಸೂಚನೆ:

1) ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಆಸಕ್ತಿ ಇರುವ ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸಬೇಕು ಹಾಗೂ ಪ್ರತಿ ಹುದ್ದೆಗೆ ಶುಲ್ಕವನ್ನು ಪಾವತಿಸಬೇಕು.
2) ಪ್ರತಿ ಹುದ್ದೆಗೆ ಅರ್ಜಿಯಲ್ಲಿ ಕ್ಲೇಮ್ ಮಾಡುವ ಶೈಕ್ಷಣಿಕ ಅರ್ಹತೆ ಹಾಗೂ ಮೀಸಲಾತಿ ವಿವರಗಳು ಆಯಾ ನಿರ್ದಿಷ್ಟ ಹುದ್ದೆಗೆ ಮಾತ್ರ ಅನ್ವಯಿಸುತ್ತದೆ.
3) ಕೇವಲ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗುವುದು ಮತ್ತು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅರ್ಹತೆ ಪಡೆಯುವುದು ಅಭ್ಯರ್ಥಿಗಳಿಗೆ ಈ ಮೇಲಿನ ವಿವಿಧ ಹುದ್ದೆಗಳ ನೇಮಕಾತಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ, ನೇಮಕಾತಿಯು ಸರ್ಕಾರವು ನಿಗದಿಪಡಿಸಬಹುದಾದ ಅರ್ಹತಾ ಮಾನದಂಡಗಳಿಗೆ ಒಳಪಟ್ಟಿರುತ್ತದೆ.
4) ಮೇಲಿನ ಯಾವುದೇ ನಿಯಮಗಳು / ಕಾರ್ಯವಿಧಾನಗಳಿಗೆ ಸಂಬಂಧಿಸಿದಂತೆ ವ್ಯತ್ಯಾಸ ಅಥವಾ ಅಸ್ಪಷ್ಟತೆ ಕಂಡು ಬಂದಲ್ಲಿ, ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977 / ಕರ್ನಾಟಕ ನಾಗರೀಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು 2021 (ತಿದ್ದುಪಡಿಗಳು) / ಸರ್ಕಾರದ ನೇಮಕಾತಿ ನಿಯಮಗಳು / ಆದೇಶಗಳಲ್ಲಿರುವಂತೆ ಅನ್ವಯಿಸುತ್ತದೆ.

ಸಹಿ/–
(ಎಸ್. ರಮ್ಯ, ಭಾ.ಆ.ಸೇ)
ಕಾರ್ಯನಿರ್ವಾಹಕ ನಿರ್ದೇಶಕರು

ವಾಸಾಸಂಇ/ವಾ.ಪ್ರ/332/2023–24

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦
ಶಿಕ್ಷಣದ ಬೇರು ಕಹಿ. ಆದರೆ, ಅದರ ಫಲವು ಮಾತ್ರ ಸಿಹಿ.
– ಐನ್‌ಸ್ಟೀನ್

ಜೀವಹಾನಿ ತಗ್ಗಿಸಿದ ಮುನ್ನೆಚ್ಚರಿಕೆ ವಿಕೋಪ ನಿರ್ವಹಣೆಯಲ್ಲಿ ಹೆಚ್ಚಿದ ದಕ್ಷತೆ

ಬಿಪೊರ್‌ಜಾಯ್ ಚಂಡಮಾರುತದ ಕೆಟ್ಟ ಪರಿಣಾಮಗಳನ್ನು ಅತ್ಯಂತ ಕನಿಷ್ಠ ಮಟ್ಟದಲ್ಲಿ ಇರಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮೆಚ್ಚುಗೆಗೆ ಅರ್ಹವಾದ ಕೆಲಸಗಳನ್ನು ಮಾಡಿವೆ. ಈ ಚಂಡಮಾರುತವು ಗುಜರಾತ್ ಹಾಗೂ ರಾಜಸ್ಥಾನದ ಕೆಲವು ಪ್ರದೇಶಗಳಿಗೆ ಕೆಲವು ದಿನಗಳ ಹಿಂದಷ್ಟೆ ಅಪ್ಪಳಿಸಿತು. ಚಂಡಮಾರುತವು ಈ ಎರಡು ರಾಜ್ಯಗಳಲ್ಲಿನ ಮೂಲಸೌಕರ್ಯ ವ್ಯವಸ್ಥೆಗೆ ಹಾನಿ ಉಂಟು ಮಾಡಿದೆ. ಅಲ್ಲದೆ, ಅಲ್ಲಿನ ವಿದ್ಯುತ್ ಸಂಪರ್ಕ ವ್ಯವಸ್ಥೆ ಹಾಗೂ ದೂರಸಂಪರ್ಕ ವ್ಯವಸ್ಥೆಯನ್ನು ಬಹಳಷ್ಟು ಹಾಳು ಮಾಡಿದೆ. ಆದರೆ ಚಂಡಮಾರುತ ಅಪ್ಪಳಿಸುವ ಮೊದಲು ಸರ್ಕಾರಗಳು ಕೈಗೊಂಡ ಮುನ್ನೆಚ್ಚರಿಕೆಯ ಕ್ರಮಗಳು ಜೀವ ಹಾನಿಯನ್ನು ಬಹಳ ಮಟ್ಟಿಗೆ ಕಡಿಮೆ ಮಾಡಿವೆ. ಚಂಡಮಾರುತದ ಪ್ರಭಾವ ತೀವ್ರವಾಗಿದ್ದ ಪ್ರದೇಶಗಳಲ್ಲಿ ಮನೆಗಳಿಗೆ, ಇತರ ಕೆಲವು ಕಟ್ಟಡಗಳಿಗೆ ಹಾನಿಯಾಗಿದೆ. ಹಲವರೆ ಮರಗಳು ಧರೆಗುರುಳಿವೆ. ಅತ್ಯಂತ ತೀವ್ರವಾದ ಚಂಡಮಾರುತವೊಂದನ್ನು ಕಂಡ ಪ್ರದೇಶಗಳಲ್ಲಿ ಆಗಬಹುದಾಗಿದ್ದಕ್ಕಿಂತ ಬಹಳ ಕಡಿಮೆ ಪ್ರಮಾಣದ ಹಾನಿಯು ದಾಖಲಾಗಿದೆ. ಹಾನಿಯನ್ನು ಕನಿಷ್ಠ ಮಟ್ಟದಲ್ಲಿ ಇರಿಸಿದ ಶ್ರೇಯವು ಸಲ್ಲಬೇಕಿರುವುದು ವಿಕೋಪದ ಮುನ್ಸೂಚನೆಯನ್ನು ನೀಡುವ ವಿಚಾರದಲ್ಲಿ ಬಹಳಷ್ಟು ಮುನ್ನಡೆ ಸಾಧಿಸಿರುವ ಭಾರತೀಯ ಹವಾಮಾನ ಇಲಾಖೆಗೆ (ಐಎಂಡಿ). ಹಾಗೆಯೇ, ಅತ್ಯಂತ ತೀವ್ರ ಸ್ವರೂಪದ ವಿಕೋಪವೊಂದನ್ನು ನಿಭಾಯಿಸುವ ಸಾಮರ್ಥ್ಯವನ್ನು ಗಳಿಸಿಕೊಂಡಿರುವ ಇತರ ಹಲವು ಏಜೆನ್ಸಿಗಳಿಗೆ ಕೂಡ ಶ್ರೇಯದಲ್ಲಿ ಒಂದು ಪಾಲು ಸಲ್ಲಬೇಕು.

ಚಂಡಮಾರುತಗಳನ್ನು ನಿಭಾಯಿಸುವಲ್ಲಿ ಒಡಿಶಾ ಮಾದರಿಯು ಇತರ ಕಡೆಗಳಲ್ಲಿಯೂ ಪರಿಣಾಮಕಾರಿ ಆಗಿದೆ

ಈಗ ಚಂಡಮಾರುತದ ಪ್ರಭಾವ ತಗ್ಗಿದೆ. ಚಂಡಮಾರುತ ಅಪ್ಪಳಿಸಿದ್ದ ಪಟ್ಟಣಗಳು ಹಾಗೂ ಹಳ್ಳಿಗಳು ಸಹಜ ಸ್ಥಿತಿಗೆ ಮರಳಲು ಆರಂಭಿಸಿವೆ. ಹೀಗಿದ್ದರೂ, ಅಲ್ಲಿ ಪುನರ್ವಸತಿ ಹಾಗೂ ಪರಿಹಾರ ಕ್ರಮಗಳನ್ನು ಪೂರ್ಣಗೊಳಿಸಲು ಇನ್ನೂ ಹಲವು ದಿನಗಳು ಬೇಕಾಗಬಹುದು. ಹವಾಮಾನ ಇಲಾಖೆಯು ಚಂಡಮಾರುತದ ಕುರಿತ ಮೊದಲ ಮುನ್ನೆಚ್ಚರಿಕೆಯನ್ನು ನೀಡಿದ್ದು ಜೂನ್ 6ರಂದು. ಜೂನ್ 11ರಂದು ಇನ್ನೊಂದು ವರದಿಯನ್ನು ನೀಡಿದ ಇಲಾಖೆಯು ಈ ಚಂಡಮಾರುತವು ಭಾರತದ ಭೂಭಾಗವನ್ನು ಅಪ್ಪಳಿಸುವುದು ಖಚಿತ ಎಂದು ಹೇಳಿತು. ಚಂಡಮಾರುತವು ಗುಜರಾತ್‌ನ ಸೌರಾಷ್ಟ್ರ ಹಾಗೂ ಕಚ್ ಪ್ರದೇಶಕ್ಕೆ ಹಾನಿ ಉಂಟುಮಾಡಬಹುದು ಎಂಬ ಮುನ್ಸೂಚನೆ ನೀಡಲಾಯಿತು. ಇದರಿಂದಾಗಿ, ಅಲ್ಲಿನ ಜನರನ್ನು ಸುರಕ್ಷಿತ ಸ್ಥಳಗಳಿಗೆ ರವಾನಿಸಲು ಹಾಗೂ ವಿಪತ್ತೊಂದರ ನಿರ್ವಹಣೆಯ ಭಾಗವಾಗಿರುವ ಇನ್ನಿತರ ಕ್ರಮಗಳನ್ನು ಕೈಗೊಳ್ಳಲು ಅಗತ್ಯ ಸಮಯ ದೊರಕಿತು. ಮೀನುಗಾರರಿಗೆ ಸಮುದ್ರಕ್ಕೆ ಇಳಿಯದಂತೆ ಎಚ್ಚರಿಕೆ ನೀಡಲಾಯಿತು. ಸಹಸ್ರಾರು ಮಂದಿಯನ್ನು ಅಪಾಯದ ಸಾಧ್ಯತೆ ಇರುವ ಪ್ರದೇಶಗಳಿಂದ ಸುರಕ್ಷಿತ ಸ್ಥಳಗಳಿಗೆ ಕರೆದೊಯ್ಯಲಾಯಿತು. ಅಲ್ಲದೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಏಜೆನ್ಸಿಗಳು ಸಮನ್ವಯದಿಂದ ಕೆಲಸ ಮಾಡಿದವು.

1998ರಲ್ಲಿ ದೊಡ್ಡ ಚಂಡಮಾರುತವೊಂದು ಅಪ್ಪಳಿಸಿದಾಗ ಗುಜರಾತ್‌ನಲ್ಲಿ 10 ಸಾವಿರ ಜನ ಜೀವ ಕಳೆದುಕೊಂಡಿದ್ದರು. ಈ ಬಾರಿ ಜೀವಹಾನಿಯನ್ನು ಕನಿಷ್ಠ ಮಟ್ಟದಲ್ಲಿ ಇರಿಸಲಾಗಿದೆ. ಇದಕ್ಕೆ ಕಾರಣ, ಚಂಡಮಾರುತದ ಅಪಾಯಗಳನ್ನು ಎದುರಿಸುವಲ್ಲಿ ದೇಶವು ಗಳಿಸಿರುವ ಅನುಭವ. 1999ರಲ್ಲಿ ಒಡಿಶಾ ರಾಜ್ಯಕ್ಕೆ ಭಾರಿ ಚಂಡಮಾರುತ ಅಪ್ಪಳಿಸಿದಾಗ 10 ಸಾವಿರಕ್ಕೂ ಹೆಚ್ಚು ಜನ ಬಲಿಯಾಗಿದ್ದರು. ಆದರೆ, ಆ ನಂತರದಲ್ಲಿ ದೇಶದಲ್ಲಿ ಚಂಡಮಾರುತಗಳನ್ನು ನಿಭಾಯಿಸುವ ವಿಚಾರದಲ್ಲಿ ಸುಧಾರಣೆಗಳು ಆಗಿವೆ. ಜನರನ್ನು ಸುರಕ್ಷಿತ ಸ್ಥಳಗಳಿಗೆ ಕರೆದೊಯ್ಯುವ ಹಾಗೂ ಇತರ ಹಲವು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಚಂಡಮಾರುತಗಳನ್ನು ನಿಭಾಯಿಸುವಲ್ಲಿ ಒಡಿಶಾ ಮಾದರಿಯು ಇತರ ಕಡೆಗಳಲ್ಲಿಯೂ ಪರಿಣಾಮಕಾರಿ ಆಗಿದೆ. ಚಂಡಮಾರುತಗಳ ಅಪಾಯಗಳನ್ನು ಕಡಿಮೆ ಮಾಡುವ ಹಾಗೂ ಅವುಗಳ ತೀವ್ರತೆ ಹೆಚ್ಚುತ್ತಿರುವುದು ಸ್ಪಷ್ಟವಾಗಿರುವಾಗ ಬದಲಿ ಕಾರ್ಯತಂತ್ರದ ಕಡೆಯೂ ಗಮನ ನೀಡಬೇಕು. ಕರಾವಳಿ ಪ್ರದೇಶದ ನಿಯಂತ್ರಣಕ್ಕೆ ಇರುವ ಯೋಜನೆಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಬೇಕು. ಅಪಾಯ ಹೆಚ್ಚಿರುವ ಪ್ರದೇಶಗಳಲ್ಲಿ ನಿರ್ಮಾಣ ಆಗುವ ಕಟ್ಟಡಗಳು ಚಂಡಮಾರುತದ ಪ್ರಭಾವವನ್ನು ತಾಳಿಕೊಳ್ಳುವಂತೆ ಇರಬೇಕು. ನಿಸರ್ಗ ಸಹಜ ತಡೆಗೋಡೆಯಾಗಿರುವ ಕಾಂಡ್ಲಾ ಕಾಡುಗಳನ್ನು ಬೆಳೆಸಲು ಹೆಚ್ಚಿನ ಗಮನ ನೀಡಬೇಕು. ಇವೆಲ್ಲ ವಿಪತ್ತು ನಿರ್ವಹಣೆ ಯೋಜನೆಯ ಭಾಗವಾಗಬೇಕು.

ದಿನದ ಟ್ವೀಟ್

ಪ್ರತಿನಿತ್ಯ ಮೊಟ್ಟೆ ಕೊಡಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ, ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರೇ, 2007ರಿಂದಲೇ ಶಾಲಾ ಮಕ್ಕಳಿಗೆ ಬಿಸಿಯೂಟದಲ್ಲಿ ಮೊಟ್ಟೆಗಾಗಿ ಹೋರಾಡುತ್ತಿದ್ದೇವೆ. ಬಹಳ ತಡವಾಗಿ ಕೊಡಲಾರಂಭಿಸಿದ್ದನ್ನು ಈಗ ಕಡಿತ ಮಾಡಿರುವುದು ಸರಿಯಲ್ಲ. ಮೊಟ್ಟೆಗೆ ಬಾಳೆಹಣ್ಣು, ಚಿಕ್ಕಿ ಪರ್ಯಾಯವಲ್ಲ, ಆರೋಗ್ಯಕರವೂ ಅಲ್ಲ. ಪ್ರತಿನಿತ್ಯ ಮೊಟ್ಟೆ ಕೊಡಿ.

ಡಾ. ಶ್ರೀನಿವಾಸ ಕಕ್ಕಿಲ್ಲಾಯ, ವೈದ್ಯ

ಕಿಡಿನುಡಿ



ಯಾವನೋ ಎಲೆಕ್ಷನ್ ಸ್ಟ್ರ್ಯಾಟಜಿಸ್ಟ್ ಐಡಿಯಾ ಕೊಟ್ಟ ಅಂತ ನೀವು ಫ್ರೀ ಫ್ರೀ ಅಂದ್ರಿ. 'ಸಚಿವರ ಹೆಂಡ್ತಿಗೂ ಫ್ರೀ, ನನ್ನ ಹೆಂಡತಿಗೂ ಫ್ರೀ' ಎಂದು ಹೇಳಿ ಎಲ್ಲರೂ ಅರ್ಜಿ ಹಾಕಿಕೊಳ್ಳಬಹುದು ಎಂದ್ರಿ. ಈಗ ನೋಡಿದರೆ ಬೇರೆ ವರಸೆ ಶುರು ಮಾಡಿಕೊಂಡಿದ್ದೀರಿ.

ಎಚ್‌.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ
ಸೋಮವಾರ, 22-6-1998

● **ಪ್ರಧಾನಿಯಾಗುವ ಬಯಕೆ ಇಲ್ಲ: ಎಲ್.ಕೆ. ಅಡ್ವಾಣಿ**

ನವದೆಹಲಿ, ಜೂನ್ 21 (ಯುಎನ್‌ಐ)– ಭಾರತದ ಪ್ರಧಾನಿಯಾಗಲು ತಾವೆಂದೂ ಬಯಸಿಲ್ಲ ಎಂದು ಗೃಹಸಚಿವ ಎಲ್.ಕೆ. ಅಡ್ವಾಣಿ ಅವರು ಇಂದು ರಾತ್ರಿ ಸ್ಪಷ್ಟಪಡಿಸಿದರು.

ಖಾಸಗಿ ಟಿವಿ ಚಾನೆಲ್‌ವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಈ ಬಗ್ಗೆ ಸ್ಪಷ್ಟೀಕರಣ ನೀಡಿದ ಅವರು, ಕೆಲವು ಪತ್ರಿಕೆಗಳು ಹಾಗೂ ವಿಮರ್ಶಕರು ಈ ಬಗ್ಗೆ ಟೀಕೆ ಮಾಡುತ್ತಿರುವುದು ಹಾಗೂ ತಮ್ಮನ್ನು ಸರ್ದಾರ್ ಪಟೇಲರಿಗೆ ಹೋಲಿಸುತ್ತಿರುವುದನ್ನು ಪ್ರಸ್ತಾಪಿಸುತ್ತಾ ಈ ಹೇಳಿಕೆ ನೀಡಿದರು.

'ನಾನೊಬ್ಬ ರಾಜಕೀಯ ಕಾರ್ಯಕರ್ತ ಮತ್ತು ನನ್ನ ಕರ್ತವ್ಯವನ್ನು ಶ್ರದ್ಧೆಯಿಂದ ಮಾಡುತ್ತಿದ್ದೇನೆ' ಎಂದು ಅವರು ಹೇಳಿದರು.

● **ಭಾರತ– ಪಾಕ್ ಪಡೆಗಳ ನಡುವೆ ಗುಂಡಿನ ಕಾಳಗ**

ಶ್ರೀನಗರ, ಜೂನ್ 21 (ಯುಎನ್‌ಐ)– ಭಾರತ ಮತ್ತು ಪಾಕಿಸ್ತಾನದ ಭದ್ರತಾ ಪಡೆಗಳು ಕೇರನ್ ಪ್ರದೇಶದಲ್ಲಿ ಇಂದು ಬೆಳಿಗ್ಗೆ ಸುಮಾರು ಎರಡು ಗಂಟೆಗಳ ಕಾಲ ಗುಂಡಿನ ಕಾಳಗ ನಡೆಸಿದವು.

ಪಾಕಿಸ್ತಾನಿ ಆಕ್ರಮಿತ ಕಾಶ್ಮೀರದ ಕಡೆಯಿಂದ ಪಾಕಿಸ್ತಾನಿ ಪಡೆಗಳು ಬೆಳಿಗ್ಗೆ 7.25ರ ಸಮಯದಲ್ಲಿ ಏಕಾಏಕಿ ಗುಂಡು ಹಾರಿಸಿದವು. ಇದಕ್ಕೆ ಪ್ರತಿಯಾಗಿ ಭಾರತದ ಪಡೆಗಳೂ ಗುಂಡು ಹಾರಿಸಿದವು. ಸುಮಾರು ಎರಡು ಗಂಟೆ ಕಾಲ ಗುಂಡಿನ ಚಕಮಕಿ ನಡೆಯಿತು ಎಂದು ಅಧಿಕೃತ ಮೂಲಗಳು ತಿಳಿಸಿವೆ.

50 ವರ್ಷಗಳ ಹಿಂದೆ
ಶುಕ್ರವಾರ, 22-6-1973

● **ಮನೆ ಬಳಕೆ ವಿದ್ಯುತ್ ಖೋತಾ ಪೂರಾ ರದ್ದು: ಉದ್ಯಮಕ್ಕೂ ಇಳಿತ**

ಬೆಂಗಳೂರು, ಜೂನ್ 21– ರಾಜ್ಯದಾದ್ಯಂತ ಜಾರಿಯಲ್ಲಿರುವ ಶೇ 25ರಷ್ಟು ವಿದ್ಯುತ್ ಖೋತಾ ನಾಳೆಯಿಂದ ಮನೆಮಾರುಗಳ ಮಟ್ಟಿಗೆ ಸಂಪೂರ್ಣ ರದ್ದು; 'ಹೈಟೆನ್ಷನ್' ವಿದ್ಯುಚ್ಛಕ್ತಿ ಬಳಸುವ 560 ಕೈಗಾರಿಕಾ ಸಂಪರ್ಕಗಳಿಗೂ ಖೋತಾ ಶೇ 25ರಿಂದ 10ಕ್ಕೆ ಇಳಿತ.

ಕಳೆದ ಒಂಬತ್ತು ತಿಂಗಳುಗಳಿಂದ ವಿದ್ಯುತ್ ಖೋತಾದಿಂದಾಗಿ, ಹಲವು ವಿಧಗಳಲ್ಲಿ ತೊಂದರೆಗೆ ಈಡಾಗಿರುವ ಜನತೆಗೆ, ನಿರೀಕ್ಷಿಸಿದ ಒಂದೆರಡು ವಾರಗಳಿಗಿಂತ ಮುಂಚಿತವಾಗಿಯೇ ತಂಪು ನೀಡಿದ ಈ ಸುದ್ದಿಯನ್ನು ಲೋಕೋಪಯೋಗಿ ಸಚಿವ ಶ್ರೀ ಎಚ್.ಎಂ. ಚನ್ನಬಸಪ್ಪ ಅವರು ಇಂದು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು.

● **ನಗರದಲ್ಲಿ ಕಾರ್ಡುದಾರರಿಗೆ ಹೆಚ್ಚು ಅಕ್ಕಿ**

ಬೆಂಗಳೂರು, ಜೂನ್ 21– ಬೆಂಗಳೂರಿನ ಅನೌಪಚಾರಿಕ ಪಡಿತರ ಕ್ಷೇತ್ರದ ನಾಗರಿಕರು ಜೂನ್ ತಿಂಗಳಲ್ಲಿ ನಾಲ್ಕೂವರೆ ಕೆ.ಜಿ. ಅಕ್ಕಿಯ ವಿಶೇಷ ಕೋಟಾ ಪಡೆಯುವರು. ಇದರಲ್ಲಿ ಎರಡೂವರೆ ಕೆ.ಜಿ. ಉತ್ತಮ ಅಕ್ಕಿ ಮತ್ತು ಉಳಿದ 2 ಕೆ.ಜಿ. ಬೇರೆ ದರ್ಜೆಯ ಅಕ್ಕಿಯನ್ನು ಪಡೆಯುವರೆಂದು ರಾಜ್ಯದ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಜಂಟಿ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ.

ಈ ಮೊದಲು ಕೇವಲ ಎರಡೂವರೆ ಕೆ.ಜಿ. ಉತ್ತಮ ದರ್ಜೆಯ ಅಕ್ಕಿಯ ವಿಶೇಷ ಕೋಟಾ ನೀಡಲಾಗುವುದೆಂದು ತಿಳಿಸಲಾಗಿತ್ತು.

ಕಾಂಗ್ರೆಸ್ ನೇತೃತ್ವದ ಸರ್ಕಾರದಿಂದ ಭ್ರಷ್ಟಾಚಾರದ ಆರೋಪಗಳ ಸಮಗ್ರ ತನಿಖೆ ಸಾಧ್ಯವೇ?

ಆಟಕ್ಕಷ್ಟೇ ಆರೋಪ: ಲೆಕ್ಕಕ್ಕೆ ಲೋಪ!

ವಿಶ್ಲೇಷಣೆ
ಚಂದ್ರಕಾಂತ ವಡ್ಡು

ಹಿಂದೆಂದೂ ಕಂಡರಿಯದ ರೀತಿಯ ಚುನಾವಣೆ ಮುಗಿದು ಗೆದ್ದವರು ಗದ್ದುಗೆಯೇರಿ ಸೋತವರು ಸ್ವಾವಲೋಕನಕ್ಕಿಳಿದು ವಾರಗಳು ಉರುಳುತ್ತಿವೆ. ಈಗ ಹೊರಬಿದ್ದಿರುವ ಚುನಾವಣಾ ಫಲಿತಾಂಶಕ್ಕೆ 'ಆಡಳಿತವಿರೋಧಿ ಅಲೆ' ಬಹುಮುಖ್ಯವಾದ ಮೊದಲ ಕಾರಣವೆಂಬುದು ಸಾರ್ವತ್ರಿಕವಾಗಿ ಸಿದ್ಧಗೊಂಡಿರುವ ಸಂಗತಿ. ಅಗತ್ಯ-ವಸ್ತುಗಳ ಬೆಲೆಯೇರಿಕೆ, ಮಿತಿಮೀರಿದ ಭ್ರಷ್ಟಾಚಾರ, ಸೌಹಾರ್ದ ಕದಡುವ ಹುನ್ನಾರ, ಎಲ್ಲವನ್ನೂ ದಕ್ಕಿಸಿಕೊಳ್ಳ-ಬಲ್ಲೆವೆಂಬ ದುರಹಂಕಾರ… ಹೀಗೆ ಆಡಳಿತ ವಿರೋಧದ ಕಾರಣಗಳು ಹಲವಾರು. ವರ್ಷವಿಡೀ ಮರೆಯಲ್ಲಿ ಅಡಗಿ ಕುಳಿತಿದ್ದ ಜನರ ದುಸ್ತರ ಬದುಕು ಈ ಅಲೆಯನ್ನೇರಿ ದಡಕ್ಕೆ ರಾಚಿದೆ. ಮರಳು ಹಾಸಿನ ದಡದಲ್ಲಿ ರಾಶಿ ರಾಶಿ ನಿರೀಕ್ಷೆಗಳ ಕಪ್ಪೆಚಿಪ್ಪುಗಳು.

ಈಗ ಆ ಎಲ್ಲಾ ನಿರೀಕ್ಷೆಗಳನ್ನು ಒಂದೊಂದಾಗಿ ಆಯುವ, ಕಾಯುವ, ಈಡೇರಿಸುವ ಅವಕಾಶವೂ ಸವಾಲೂ ಹೊಸದಾಗಿ ಆಡಳಿತದ ಚುಕ್ಕಾಣಿ ಹಿಡಿದಿರುವ ಪಕ್ಷದ ಹೆಗಲೇರಿದೆ. ಹಲವು ಗೊಂದಲಗಳ ನಡುವೆಯೂ ಐದು ಗ್ಯಾರಂಟಿಗಳನ್ನು ಜಾರಿಗೊಳಿಸುವ ಸಾಹಸವಂತೂ ಅಗತ್ಯಕ್ಕಿಂತ ಹೆಚ್ಚೇ ಸದ್ದು ಮಾಡುತ್ತಿದೆ. ಈ ಕಲ್ಯಾಣ ಕಾರ್ಯಕ್ರಮಗಳು ಬಸವಳಿದ ಜನಸಮುದಾಯಕ್ಕೆ ತಾತ್ಕಾಲಿಕ ಪರಿಹಾರವಾಗಿ ಅತ್ಯಗತ್ಯ ಎಂಬುದರಲ್ಲಿ ಎರಡನೇ ಮಾತಿಲ್ಲ. ಒಂದು ಪಕ್ಷದ ಹೆಗ್ಗಳಿಕೆಗೆ, ರಾಜಕೀಯ ಲಾಭ ಗಳಿಕೆಗೆ ಗ್ಯಾರಂಟಿಗಳ ಅಬ್ಬರದ ಪ್ರಚಾರ ನೆರವಾಗುವುದು ಕೂಡ ವಾಸ್ತವವೇ. ಹಾಗಾಗಿ ಗ್ಯಾರಂಟಿಗಳ ಈಡೇರಿಕೆಗೆ ಆಡಳಿತ ಪಕ್ಷ ಅವಸರಿಸುತ್ತಿರುವುದರ ಹಿಂದೆ ಮುಂಬರುವ ಲೋಕಸಭಾ ಚುನಾವಣೆಯ ಸಿದ್ಧತೆ ಇದೆ ಎಂಬುದರಲ್ಲಿ ರಹಸ್ಯವೇನಿಲ್ಲ.

ಆದರೆ ಜನಪ್ರಿಯ ಕೊಡುಗೆಗಳ ಘೋಷಣೆ, ಈಡೇರಿಕೆಯ ಪರದಾಟ, ರಾಜಕೀಯ ಲಾಭದಾಟದ ನಡುವೆಯೂ ಯಾವುದೇ ನೈಜ ಜನಪರ ಸರ್ಕಾರವು ವ್ಯವಸ್ಥೆಯನ್ನು ಕಾಡುತ್ತಿರುವ ಘೋರ ಸಮಸ್ಯೆಗಳ ಆಳಕ್ಕೆ ಇಳಿಯಲೇಬೇಕಾಗುತ್ತದೆ. ಇಂದು ಎಲ್ಲಾ ರಂಗಗಳನ್ನೂ ಆವರಿಸಿಕೊಂಡಿರುವ ಭ್ರಷ್ಟಾಚಾರವು ಅಂತಹ ಘೋರ ಸಮಸ್ಯೆಗಳ ಮೂಲಪುರುಷನಂತೆ ವಿರಾಜಮಾನವಾಗಿದೆ. ಆಡಳಿತ ವ್ಯವಸ್ಥೆಯನ್ನು ನೆಟ್ಟಗಾಗಿಸುವ ನಿಟ್ಟಿನಲ್ಲಿ ಈ ಮೂಲಪುರುಷನನ್ನು ಮೆತ್ತಗೆ ಮಾಡುವುದು ಆಡಳಿತಾರೂಢರ ಮೂಲಭೂತ ಕರ್ತವ್ಯ. ಕಾಂಗ್ರೆಸ್ ನೇತೃತ್ವದ ಇಂದಿನ ಸರ್ಕಾರಕ್ಕೆ ಆಡಳಿತದ ಕೀಲಿಕೈ ದೊರಕಿಸಿಕೊಡುವಲ್ಲಿ ಮಹತ್ವದ ಪಾತ್ರ ವಹಿಸಿದ ಆಡಳಿತ ವಿರೋಧಿ ಅಲೆ ಮತ್ತು ಗ್ಯಾರಂಟಿ ಭರವಸೆಗಳ ಜೊತೆಗೆ ಕೂಡಿಕೊಳ್ಳುವ ಅಷ್ಟೇ ಮಹತ್ವದ ಸಂಗತಿಯೆಂದರೆ ಕಾಂಗ್ರೆಸ್ ಪಕ್ಷದ 'ಪೇಸಿಎಂ' ಪ್ರಚಾರ.

'ಫಾರ್ಟಿ ಪರ್ಸೆಂಟ್ ಸರ್ಕಾರ' ಎಂಬ ಚುನಾವಣಾ ಪೂರ್ವದ ಕಾಂಗ್ರೆಸ್ ಕೂಗಿಗೆ ಬಿಜೆಪಿ ನೇತೃತ್ವದ ಈ ಹಿಂದಿನ ಸರ್ಕಾರದ ಬಳಿ ಸಮರ್ಥ ಉತ್ತರವೇ ಇರಲಿಲ್ಲ. ಆಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 'ಸಾಕ್ಷ್ಯ ಕೊಡಿ' ಎಂದೋ, 'ನೀವೇನು ಕಮ್ಮಿ…' ಎಂದೋ ತೇಲಿಸುತ್ತ ಮರೆಗೆ ಸರಿದರು. 'ನಿಮ್ಮದೇ ಸರ್ಕಾರವಿದೆ, ತನಿಖೆ ನಡೆಸಿ' ಎಂದು ಕಾಲ ಕಳೆದರು ಕಾಂಗ್ರೆಸ್ ನಾಯಕರು. ಬೊಮ್ಮಾಯಿ ಅವರು ತಮ್ಮ ಅಧಿಕಾರ ಅವಧಿಯ ಕೊನೆಯ ಹಂತದಲ್ಲಿ ಹಿಂದಿನ ಸರ್ಕಾರದ 59 ಹಗರಣಗಳನ್ನು ಲೋಕಾಯುಕ್ತ ತನಿಖೆಗೆ ವಹಿಸುವುದಾಗಿ ಘೋಷಿಸಿದ್ದೂ ಉಂಟು.

ಈಗ ಬಸವರಾಜ ಬೊಮ್ಮಾಯಿಯವರು, 'ನಮ್ಮ ಸರ್ಕಾರದ ಅವಧಿಯಲ್ಲಿ ಸುಳ್ಳು ಆರೋಪಗಳನ್ನು ಮಾಡಿದ್ದ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಎಲ್ಲಿ ಹೋಗಿದ್ದಾರೆ?' ಎಂಬ ತರ್ಕಬದ್ಧ ಪ್ರಶ್ನೆ ಎತ್ತಿದ್ದಾರೆ. 'ಈಗ ಕಾಂಗ್ರೆಸ್ ಸರ್ಕಾರ ಬಂದಿದೆಯಲ್ಲ… 40 ಪರ್ಸೆಂಟ್ ಸತ್ಯಾಂಶ ಹೊರಗಿಡ್ತಾರಾ…?' ಎಂಬುದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಅವರ ಪ್ರಶ್ನೆ.

ಸಂಸದ ಪ್ರತಾಪ ಸಿಂಹ ಅವರಂತೂ ಹಲವಾರು ಹೆಜ್ಜೆ ಮುಂದೆ ಹೋಗಿ, 'ಬಿಜೆಪಿಯ ಕೆಲ ಮಹಾನ್ ನಾಯಕರು ಹಾಗೂ ಕಾಂಗ್ರೆಸ್ ನಡುವೆ ಹೊಂದಾಣಿಕೆ ರಾಜಕಾರಣ ನಡೆಯುತ್ತಿದೆ. ಹಾಗಾಗಿ ಹಗರಣಗಳ ತನಿಖೆ ನಡೆಸುವ ಗೋಜಿಗೆ ಯಾರೂ ಹೋಗುತ್ತಿಲ್ಲ. ಸಿದ್ದರಾಮಯ್ಯ ವಿರುದ್ಧ ರೀಡೂ, ಅರ್ಕಾವತಿ ಡಿನೋಟಿಫಿಕೇಷನ್, ಕೆಂಪಣ್ಣ ಆಯೋಗ ವರದಿ ಇದೆ ಎಂದು ನಮ್ಮ ಹಿರಿಯ ನಾಯಕರು ಅಬ್ಬರಿಸುತ್ತಿದ್ದರು. ಆದರೆ, ಒಂದು ದಿನವೂ ಬುಟ್ಟಿಯಿಂದ ಹಾವನ್ನು ಹೊರಗೆ ಬಿಡಲೇ ಇಲ್ಲ. ಸಿದ್ದರಾಮಯ್ಯ ಕೂಡ ಬಿಜೆಪಿ ಮೇಲೆ ಪಿಎಸ್‌ಐ ಹಗರಣ, ಬಿಟ್ ಕಾಯಿನ್ ಅಂತ ಅಬ್ಬರಿಸುತ್ತಿದ್ದರು. ಈಗ ತುಟಿ ಬಿಚ್ಚುತ್ತಿಲ್ಲ' ಎಂದು ಸ್ವಪಕ್ಷದ ವಿರುದ್ಧವೇ ದನಿ ಎತ್ತಿದ್ದಾರೆ.

ಸಂಸದರ ಈ ದನಿಯ ಹಿಂದೆ ಯಾರೇ ಇರಲಿ ಅಥವಾ ಭಾರತೀಯ ಜನತಾ ಪಕ್ಷದ ಆಂತರಿಕ ತಿಕ್ಕಾಟ ಏನೇ ಇರಲಿ ಅವರು ಎತ್ತಿರುವ ಪ್ರಶ್ನೆ ಮತ್ತು ಮಾಡಿರುವ ಆರೋಪ ಗಂಭೀರ ಸ್ವರೂಪದ್ದು. 'ನಿಮಗೆ ಬಿಜೆಪಿಯ ಕೆಲ ನಾಯಕರ ಜೊತೆ ಹೊಂದಾಣಿಕೆ ಇಲ್ಲ ಅಂದರೆ ನೀವು ಮಾಡಿದ ಆರೋಪಗಳ ಬಗ್ಗೆ ತನಿಖೆಗೆ ಆದೇಶ ಮಾಡಿ' ಎಂಬುದು ಸಿದ್ದರಾಮಯ್ಯ ಅವರಿಗೆ ಪ್ರತಾಪ ಸಿಂಹ ಅವರ ನೇರ ಸವಾಲು. ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲು ಕೆಲವು ಬಿಜೆಪಿ ನಾಯಕರು ಕಾಂಗ್ರೆಸ್ ನಾಯಕರೊಂದಿಗೆ ರಹಸ್ಯಮೈತ್ರಿ ಮಾಡಿಕೊಂಡಿದ್ದಾರೆ ಎಂಬ ಆರೋಪ ಸಿ.ಟಿ.ರವಿ, ಸುನೀಲ್ ಕುಮಾರ್ ಮತ್ತು ಪ್ರತಾಪ ಸಿಂಹ ಮೂವರ ಬಾಯಿಯಿಂದಲೂ ಹೊರಬಿದ್ದಿರುವುದು ವಿಶೇಷ. ಇಷ್ಟೆಲ್ಲಾ ಆದರೂ, 'ತನಿಖೆಯನ್ನು ಯಾವಾಗ, ಯಾರಿಂದ ಎಷ್ಟು ಹೊತ್ತಿಗೆ ಮಾಡಿಸಬೇಕು ಎನ್ನುವುದು ನಮಗೆ ಸೇರಿದ್ದು' ಎಂದು ಹೇಳಿ ಮುಂದಕ್ಕೆ ಸಾಗುತ್ತಾರೆ ಮುಖ್ಯಮಂತ್ರಿ ಸಿದ್ದರಾಮಯ್ಯ.

ಇದು, ಹಾಲಿ ಸಿದ್ದರಾಮಯ್ಯ ನೇತೃತ್ವದ ಆಡಳಿತ ಪಕ್ಷ ಎದುರಿಸುತ್ತಿರುವ ವಿಶೇಷ ಸಂದಿಗ್ಧವೇನಲ್ಲ. ವಿರೋಧ ಪಕ್ಷವಾಗಿ ಆರೋಪ ಹೊರೆಸುವುದು, ಆಡಳಿತ ಪಕ್ಷವಾಗಿ ಆರೋಪ ಮರೆಯುವುದು ಬಹಳ ಸಮಯದಿಂದ ಸಂಪ್ರದಾಯದಂತೆಯೇ ನಡೆದುಕೊಂಡು ಬರುತ್ತಿದೆ. ಆರೋಪ ಹೊರಿಸುವಾಗ, ಅದರಲ್ಲೂ ಚುನಾವಣಾ ಸಮಯದಲ್ಲಿ ವೀರಾವೇಶದಿಂದ ಅರ್ಭಟಿಸುವ ಬಾಯಿಯೇ ಕ್ರಮ ಕೈಗೊಳ್ಳಬೇಕಾದಾಗ ತೊದಲುವುದು ಸೋಜಿಗದ ಸಂಗತಿ. ಇನ್ನೂ ವಿಚಿತ್ರವೆಂದರೆ ಈಗಿನ ಪಕ್ಷಾಂತರ ಯುಗದಲ್ಲಿ ಆರೋಪ ಮಾಡಿದವರೇ ಸಮರ್ಥಿಸಿಕೊಳ್ಳುವ ಜಾಗೆಯಲ್ಲಿ ಆಸೀನರಾಗುವ ಸನ್ನಿವೇಶ.

'ನೀವೇನು ಕಡಿಮೆ, ನಿಮ್ಮ ಅವಧಿಯಲ್ಲಿ ಮಾಡಿಲ್ಲವೇ…?' ಎಂಬ ಸಮರ್ಥನೆಗಳು ಸಾಮಾನ್ಯವಾಗಿ ಕೇಳಿಬರುತ್ತವೆ. 'ಅವನ ಭ್ರಷ್ಟಾಚಾರದ ಜಾತಕವೇ ನನ್ನ ಬಳಿ ಇದೆ. ಸಮಯ ಬಂದಾಗ ದಾಖಲೆಗಳನ್ನು ಬಿಡುಗಡೆ ಮಾಡುವೆ…' ಎಂದು ಬೀಗಿದ ಅನೇಕ ಮಹಾನುಭಾವರನ್ನು ನೆನಪಿಸಿಕೊಳ್ಳಬಹುದು. ಅದೇಕೋ ಅಂತಹ ಗುಳಿಕ ಕಾಲ ಕೂಡಿ ಬರುವುದೇ ಇಲ್ಲ; ಆ ಆನಂದಮಯ ಸಮಯ ಎಂದು ಬರುವುದೆಂದು ಕಾದು ಕುಳಿತರೆ ಅಷ್ಟೇ ಗತಿ! ವೃತ್ತಿನಿರತ ರಾಜಕಾರಣಿಗಳು ಭ್ರಷ್ಟಾಚಾರದಂತಹ ಅನಾಹುತಕಾರಿ ವಿಚಾರವನ್ನು ಕೂಡ ಆರೋಪ ಪ್ರತ್ಯಾರೋಪ, ಬೆದರಿಕೆಯ ಕಾಲ್ಚೆಂಡು ಎಂದು ಭಾವಿಸಿ ಆಟವಾಡುವುದನ್ನು ಕಾಣುತ್ತೇವೆ. ಇವೆಲ್ಲಾ ಕಾರಣಗಳಿಗಾಗಿ ಆರೋಪ ಚಿರಾಯು ಆಗಿ ಉಳಿಯುತ್ತದೆಯೇ ಹೊರತು ಅಪರಾಧವಾಗಿ, ಶಿಕ್ಷೆಯಾಗಿ ಮಾರ್ಪಡುವುದಿಲ್ಲ.

ಅಂತಿಮವಾಗಿ, ಆರೋಪ ಎಂಬುದು, ಅದರಲ್ಲೂ ಅಧಿಕಾರಸ್ಥರ ಮೇಲಿನ ಭ್ರಷ್ಟಾಚಾರದ ಆರೋಪ, ಇಬ್ಬರು ರಾಜಕಾರಣಿಗಳು ಅಥವಾ ಎರಡು ರಾಜಕೀಯ ಪಕ್ಷಗಳು ಅಥವಾ ಒಂದೇ ರಾಜಕೀಯ ಪಕ್ಷದೊಳಗಿನ ಎರಡು ಬಣಗಳ ನಡುವಿನ ಖಾಸಗಿ ಆಟವಲ್ಲ; ಅದು ನೇರವಾಗಿ ಸಾರ್ವಜನಿಕ ಒಳಿತು-ಕೆಡಕು ನಿರ್ಣಯಿಸುವ ಸಂಗತಿ. ಆಡಳಿತ ನಡೆಸುವವರಿಗೆ ಈ ಕುರಿತು ಎಚ್ಚರ ಮೂಡಿ ಎಲ್ಲಾ ಆರೋಪಗಳ ಸಮಗ್ರ ತನಿಖೆ ನಡೆಯಲಿ ಎಂಬ ಆಸೆ ತಿರುಕನ ಕನಸಾಗದಿರಲಿ!

ಚುರುಮುರಿ

ಫೇಕ್ ನ್ಯೂಸ್ ಪಾರ್ಟಿ!

● ಗುರು ಪಿ.ಎಸ್.

'ಈ ಗ್ಯಾರಂಟಿಗಳು ಎಷ್ಟೊಳ್ಳೆ ಸ್ಕೀಮ್‌ಗಳು. ಬೇರೆ ಪಾರ್ಟಿಯವರಾದರೂ ಅವರನ್ನ ಮೆಚ್ಚಿಕೊಳ್ಳಲೇ ಬೇಕು. ಸರ್ಕಾರಿ ಸೇವೆಗಳ ಲಾಭ ಜನರಿಗೆ ಇಷ್ಟ್ ನೇರವಾಗಿ ಸಿಕ್ಕಿದ್ದನ್ನ ನಾನು ಈಗಲೇ ನೋಡ್ತಿರೋದು' ತನ್ನ ಪಾರ್ಟಿ ಮೀಟಿಂಗ್‌ನಲ್ಲೇ ಎದುರು ಪಾರ್ಟಿಯನ್ನು ಹೊಗಳ್ತಿದ್ದ ಮುದ್ದಣ್ಣ.

'ಬಾಯ್ಮುಚ್ರಿ ಸಾಕು. ಜನರ ಮುಂದೆಯೂ ಹೀಗೇ ಮಾತಾಡಿಬಿಟ್ಟೀರಾ. ನಾವು ಅಪೋಸಿಷನ್ ಪಾರ್ಟಿಯವರು, ಎಲ್ಲವನ್ನೂ ವಿರೋಧಿಸಬೇಕು' ಬೈದ್ರು ಪಾರ್ಟಿ ಲೀಡರ್. ಅಲ್ಲಿಂದ ಬಂದವನೇ ಜನರ ಮುಂದೆ ನಿಂತ ಮುದ್ದಣ್ಣ, 'ಬಿಟ್ಟಿ ಭಾಗ್ಯಗಳಿಂದ ರಾಜ್ಯಕ್ಕೆ ಹೊರೆ ಆಗುತ್ತೆ. ಬಸ್‌ಗಳಲ್ಲಿ ಓಡಾಡಬೇಡಿ, ಕರೆಂಟ್ ಬಳಸಬೇಡಿ, ಅಕ್ಕಿ ತಗೋಬೇಡಿ' ಭಾಷಣ ಶುರುವಾಯ್ತು.

'ನೀವೂ ಕೊಡಲಿಲ್ಲ, ಈಗ ಫ್ರೀ ಆಗಿ ಕೊಡ್ತಿರೋದನ್ನೂ ಬಳಸಬೇಡಿ ಅಂತೀಯಲ್ಲೋ ಬೇವರ್ಸಿ' ಅಜ್ಜಿಯೊಬ್ಬರು ಕೆರಳಿದರು.

'ಇದ್ಯಾಕೋ ಉಲ್ಟಾ ಆಯ್ತು' ಅಂದ್ಕೊಂಡ ಮುದ್ದಣ್ಣ, 'ಆಯ್ತು, ಆಯ್ತು. ಎಲ್ಲ ಮಹಿಳೆಯರು ರಾಜ್ಯ ಪೂರ್ತಿ ಬಸ್‌ನಲ್ಲಿ ಸುತ್ತಿ. ಸಂಪೂರ್ಣ 200 ಯೂನಿಟ್ ಕರೆಂಟ್ ಬಳಸಿ. ಇದರ ಜೊತೆಗೆ, ಹತ್ತಲ್ಲ, 15 ಕೇಜಿ ಅಕ್ಕಿ ಫ್ರೀ ಕೊಡಿ ಅಂತಾ ನಾವು ರಾಜ್ಯ ಸರ್ಕಾರವನ್ನ ಒತ್ತಾಯಿಸ್ತೀವಿ' ಭಾಷಣ ಬಿರುಸಾಯ್ತು.

'ಬಿಟ್ಟಿ ಭಾಗ್ಯಗಳಿಂದ ರಾಜ್ಯಕ್ಕೆ ಹೊರೆ ಅಂತೀಯಾ, ಈಗ ಎಲ್ಲವನ್ನೂ ಜಾಸ್ತಿ ಬಳಸಿ ಅಂತಾನೂ ಹೇಳ್ತೀಯಾ, ನಿನಗೆ ರಾಜ್ಯದ ಹಿತಕ್ಕಿಂತ ರಾಜಕೀಯವೇ ಮುಖ್ಯವಾಯ್ತಾ ಮೂದೇವಿ' ಹಿರಿಯರೊಬ್ಬರು ಗದರಿದರು.

'ಥೋ, ಈ ಗ್ಯಾರಂಟಿ ಪರ ಮಾತಾಡಿದ್ರೆ ಪಾರ್ಟಿಯವರು ಬೈತಾರೆ, ವಿರುದ್ಧ ಮಾತಾಡಿದ್ರೆ ಜನ ಉಗೀತಾರೆ' ಅಂತಾ ಗೊಣಗಿದ ಮುದ್ದಣ್ಣ, 'ಮುಂದೆ ನಾವು ಬೇರೆ ವಿಷಯ ಇಟ್ಕೊಂಡು ಹೋರಾಟ ಮಾಡ್ತೀವಿ' ಎಂದ.

'ಯಾವ ವಿಷಯ ಸರ್?' ಕೇಳ್ದ ಅಸಿಸ್ಟೆಂಟ್ ವಿಜಿ.

'ಫೇಕ್ ನ್ಯೂಸ್ ಹರಡುವವರಿಗೆ ಜೈಲು ಶಿಕ್ಷೆ ಕೊಡೋ ಕಾನೂನನ್ನ ಈ ಸರ್ಕಾರ ತರೋಕೆ ಹೊರಟಿದೆ. ಅದರ ವಿರುದ್ಧ ಹೋರಾಡ್ತೀವಿ'.

'ಸರ್, ಆಗ ಫೇಕ್ ನ್ಯೂಸ್ ಜನಕರು ನಿಮ್ಮ ಪಾರ್ಟಿಯವರೇ ಅನ್ನಂಗಾಗುತ್ತೆ ಸರ್' ನಕ್ಕ ವಿಜಿ.

ಸ್ವಲ್ಪ ದಿನ ಸುಮ್ನಿರೋದೇ ವಾಸಿ ಎಂದು ತಲೆ ಮೇಲೆ ಟವೆಲ್ ಹಾಕ್ಕೊಂಡು ಹೊರಟ ಮುದ್ದಣ್ಣ.

ಸಂಗತ

ಕನ್ನಡ ಕಲಿಯಬೇಕು, ಕಲಿಸುವವರು ಯಾರು?

ಅನಿವಾರ್ಯ, ಅಗತ್ಯ, ಪ್ರಯೋಜನ, ಕಲಿಯದಿದ್ದರೆ ನಷ್ಟ ಎನ್ನುವಂಥ ಸ್ಥಿತಿಗಳಿದ್ದರೆ ಮಾತ್ರ ಒಂದು ಭಾಷೆಯನ್ನು ಕಲಿಯುವ ಪ್ರೇರಣೆ ಉಂಟಾಗುತ್ತದೆ…

● ಪ್ರೊ.ಎಂ. ಅಬ್ದುಲ್ ರೆಹಮಾನ್ ಪಾಷ

'ಕನ್ನಡ ಭಾಷೆ ಈಗ ಅಪಾಯಕ್ಕೆ ಸಿಲುಕಿದೆ. ಬೆಂಗಳೂರಿನಲ್ಲಿ ಶೇ 60ರಷ್ಟು ಮಂದಿಗೆ ಕನ್ನಡ ಭಾಷೆ ಮಾತನಾಡಲು ಬರುವುದೇ ಇಲ್ಲ' ಎಂದು ರಾಜಧಾನಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿದ್ದ ಕಾರ್ಯಕ್ರಮವೊಂದರಲ್ಲಿ ಗೃಹ ಸಚಿವ ಡಾ. ಜಿ.ಪರಮೇಶ್ವರ ಹೇಳಿದ್ದಾರೆ. ಇಲ್ಲಿ ಎರಡು ಅಂಶಗಳನ್ನು ಗಮನಿಸಬೇಕು. ಒಂದು– ಕನ್ನಡ ಭಾಷೆ ಅಪಾಯದಲ್ಲಿಯೇ ಎಂಬುದು. ಎರಡನೆಯದು– ಹಲವರಿಗೆ ಕನ್ನಡ ಮಾತನಾಡಲು ಬರವುದಿಲ್ಲ ಎಂಬುದು.

ಮೊದಲನೆಯದಾಗಿ ಕನ್ನಡವು ಖಂಡಿತಾ ಅಪಾಯದಲ್ಲಿ ಸಿಲುಕಿಲ್ಲ. ರಾಜ್ಯದ ಜನಸಂಖ್ಯೆ ಏಳು ಕೋಟಿ ತಲುಪುತ್ತಿದೆ. 56ಕ್ಕೂ ಹೆಚ್ಚು ಮಾತೃಭಾಷೆಗಳನ್ನು ಮಾತಾಡುವ ಜನ ಇದ್ದರೂ ಶೇ 80ಕ್ಕೂ ಹೆಚ್ಚಿನ ಜನರಿಗೆ ಕನ್ನಡ ಬರುತ್ತದೆ. ಸಾಕ್ಷರತೆಯ ಪ್ರಮಾಣ ಶೇ 75ಕ್ಕೂ ಹೆಚ್ಚು, 30ಕ್ಕೂ ಹೆಚ್ಚು ರಾಜ್ಯ ಮಟ್ಟದ ದೈನಿಕ, ಸಾಪ್ತಾಹಿಕ, ಮಾಸ ಪತ್ರಿಕೆಗಳು, ಜೊತೆಗೆ ಸ್ಥಳೀಯ ಪತ್ರಿಕೆಗಳು, ವರ್ಷಕ್ಕೆ 1,500ಕ್ಕೂ ಹೆಚ್ಚು ಹೊಸ ಪುಸ್ತಕಗಳು, ಸುಮಾರು 200 ಹೊಸ ಚಲನಚಿತ್ರಗಳು, 67 ಆಕಾಶವಾಣಿ ಮತ್ತು ಖಾಸಗಿ ರೇಡಿಯೊ ಸ್ಟೇಷನ್‌ಗಳು, 20 ಸಮುದಾಯ ರೇಡಿಯೊ ಸ್ಟೇಷನ್‌ಗಳು, 38ಕ್ಕೂ ಹೆಚ್ಚು ರಾಜ್ಯಮಟ್ಟದ ಟಿ.ವಿ. ಚಾನೆಲ್‌ಗಳು, ಜೊತೆಗೆ ಸ್ಥಳೀಯ ಟಿ.ವಿ. ಚಾನೆಲ್‌ಗಳು ಮತ್ತು ಯುಟ್ಯೂಬರ್‌ಗಳು- ಕನ್ನಡವು ಹೊಸ ಹೊಸ ಸವಾಲುಗಳು ಎದುರಾದಾಗ ಹಾಗೆ ಅವನ್ನೂ ಮೈಗೂಡಿಸಿಕೊಂಡು ಬೆಳೆಯುತ್ತಾ ಇದೆ. ನಿಜವೆಂದರೆ ಕನ್ನಡ ಭಾಷೆಯು ವಿವಿಧ ಪ್ರಾದೇಶಿಕ ಭಾಷೆಗಳ ರೂಪದಲ್ಲಿ ಗ್ರಾಮೀಣರಲ್ಲಿ ಜೀವಂತವಿದೆ. ಹೀಗಾಗಿ ಕನ್ನಡ ಭಾಷೆ ಅಳಿಯುವ ಕುರಿತ ಆತಂಕ ಅನಗತ್ಯ.

ಆದರೆ, ಇನ್ನೊಂದು ಕಡೆ, ರಾಜ್ಯದಲ್ಲಿ ಕನ್ನಡ ಬಾರದವರ ಸಂಖ್ಯೆ ಕ್ರಮೇಣ ಹೆಚ್ಚಾಗುತ್ತಿದೆ ಎಂಬ ಮಾತೂ ಸತ್ಯ. ಆದರೆ, ಬೆಂಗಳೂರಿನಲ್ಲಿ ಶೇ 60 ರಷ್ಟು ಜನರಿಗೆ ಕನ್ನಡ ಬರುವುದಿಲ್ಲ ಎಂಬುದಕ್ಕೆ ಆಧಾರವಾಗಿ ನಮ್ಮಲ್ಲಿ ಸಮೀಕ್ಷೆಗಳೇನೂ ಆದಂತಿಲ್ಲ. ರಾಜ್ಯದಲ್ಲಿ ಕನ್ನಡ ಬಾರದೇ ಇರುವವರಲ್ಲಿ ಕೆಲವು ಬಗೆಗಳಿವೆ. ಕೆಲವು ತಿಂಗಳುಗಳ ಹಿಂದಷ್ಟೇ ವಿವಿಧ ಬಗೆಯ ಜೀವನೋಪಾಯಗಳನ್ನು ಹುಡುಕಿಕೊಂಡು ರಾಜ್ಯಕ್ಕೆ ಬಂದು ನೆಲೆಸಿರುವವರು, ರಾಜ್ಯದಲ್ಲಿ ನೆಲೆಸಿ ಬಹಳ ವರ್ಷಗಳೇ ಆಗಿದ್ದರೂ ಹಲವು ಕಾರಣಗಳಿಗಾಗಿ ಕನ್ನಡ ಕಲಿಯದೇ ಇರುವವರು, ಕರ್ನಾಟಕದವರೇ ಆಗಿದ್ದರೂ ತಮ್ಮ ತಮ್ಮ ಸಮುದಾಯಗಳ ವ್ಯಾಪ್ತಿಗಳಲ್ಲಿ ಬದುಕಿದವರು ಮತ್ತು ಶಾಲಾ ಶಿಕ್ಷಣದ ಸಮಯದಲ್ಲಿ ತಮ್ಮ ಮಾತೃಭಾಷೆ ಅಥವಾ ಇಂಗ್ಲಿಷ್ ಮಾಧ್ಯಮದ ಮೋಹಕ್ಕೆ ಮರುಳಾಗಿ ಕನ್ನಡ ಕಲಿಯುವ ಅವಕಾಶ ಇದ್ದರೂ ಕಲಿಯದೇ ಇದ್ದವರು.

ಬೆಂಗಳೂರು ನಾವೇ ಒಪ್ಪಿಕೊಂಡಿರುವ ಹಾಗೆ ಒಂದು ರೀತಿ ಆಧುನಿಕ ಜಗತ್ತಿಗೆ ಸೇರಿದ ಮಹಾನಗರ. ಕನ್ನಡೇತರರು ಇಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಆದರೆ ಅವರಿಗೆ ಕನ್ನಡವನ್ನು ಕಲಿಯುವ ಅನಿವಾರ್ಯ ಇರುವುದಿಲ್ಲ. ಇಂತಹ ಸ್ಥಿತಿ ಬೇರೆ ಕಡೆಯೂ ಇದೆ. ಮೈಸೂರು, ತುಮಕೂರು ಮುಂತಾದ ಅಭಿವೃದ್ಧಿಶೀಲ ನಗರಗಳು ಮತ್ತು ಇತರ ರಾಜ್ಯಗಳೊಂದಿಗೆ ಗಡಿಯನ್ನು ಹಂಚಿಕೊಳ್ಳುವ ಪಟ್ಟಣಗಳು, ಗ್ರಾಮಗಳಲ್ಲಿಯೂ ಕನ್ನಡ ಬಾರದಿರುವ ಜನ ದೊಡ್ಡ ಸಂಖ್ಯೆಯಲ್ಲಿದ್ದಾರೆ.

ಕನ್ನಡ ಭಾಷೆ ಕುರಿತ ಅಭಿಮಾನವನ್ನು ನಾವು ಪ್ರೇರಕವಾಗಿ ಬಳಸಲು ನೋಡಿದರೆ ಅದು ಅವರವರ ಮಾತೃಭಾಷೆಗಳ ಕುರಿತು ಜನರ ಅಭಿಮಾನವನ್ನು ಕೆರಳಿಸುವ ಸಾಧ್ಯತೆ ಹೆಚ್ಚಾಗಿರುತ್ತದೆ. ದಖನಿ ಉರ್ದು, ತೆಲುಗು, ತಮಿಳು, ಕೊಡವ, ಮಲಯಾಳಂ, ಮರಾಠಿ, ಬಂಜಾರ ಇತ್ಯಾದಿ ಮಾತೃಭಾಷೆ ಜನ ತಮ್ಮ ಭಾಷೆ, ಸಂಸ್ಕೃತಿ, ಲಿಪಿಯ ಬಗ್ಗೆ ಹೆಚ್ಚು ಅಭಿಮಾನವನ್ನು ಬೆಳೆಸಿಕೊಂಡಿರುತ್ತಾರೆ. ಅವುಗಳ ಸಂರಕ್ಷಣೆ, ಬೆಳವಣಿಗೆ ಅವರ ಹಕ್ಕೂ ಕೂಡ. ಇದನ್ನು ಮೊದಲು ನಾವು ಗುರುತಿಸುವುದನ್ನು ಕಲಿಯಬೇಕು. ಅಲ್ಲದೇ, ಅನಿವಾರ್ಯ, ಅಗತ್ಯ, ಪ್ರಯೋಜನ, ಕಲಿಯದಿದ್ದರೆ ನಷ್ಟ ಎನ್ನುವಂಥ ಸ್ಥಿತಿಗಳಿದ್ದರೆ ಮಾತ್ರ ಒಂದು ಭಾಷೆಯನ್ನು ಕಲಿಯುವ ಪ್ರೇರಣೆ ಉಂಟಾಗುತ್ತದೆ ಎಂಬುದನ್ನೂ ನಾವು ತಿಳಿದುಕೊಳ್ಳಬೇಕು. ಕನ್ನಡದ ಕುರಿತು ಈ ಅನಿವಾರ್ಯವನ್ನು ಸೃಷ್ಟಿಸುವ ಕೆಲಸ ನಮ್ಮಿಂದಲೇ ಆಗಬೇಕು. ಹಾಗೆ ನೋಡಿದರೆ ಕರ್ನಾಟಕದಲ್ಲಿ ಸರ್ವೇಸಾಮಾನ್ಯವಾಗಿ ಕನ್ನಡವನ್ನು ಕಲಿಯುವುದು ಕಷ್ಟದ ಕೆಲಸವೇನೂ ಅಲ್ಲ. ಆದರೆ, ವ್ಯವಸ್ಥಿತ ರೀತಿಯಲ್ಲಿ ಕನ್ನಡವನ್ನು ಕಲಿಯುವ, ಕಲಿಸುವ ಅವಕಾಶಗಳೂ ಇರಬೇಕು.

ಕನ್ನಡ ಮಾತನಾಡಲೂ ಬರುವುದಿಲ್ಲ, ಇನ್ನು ಓದು– ಬರಹದ ಮಾತು ದೂರವೇ ಎಂದು ನಾವು ಕನ್ನಡೇತರರನ್ನು ದೂಷಿಸುತ್ತಾ ಕೂರುವುದರಲ್ಲಿ ಅರ್ಥವಿಲ್ಲ. ಪ್ರಸ್ತುತ ಆರ್ಥಿಕ, ರಾಜಕೀಯ ಸ್ಥಿತಿಯಲ್ಲಿ ರಾಜ್ಯದಲ್ಲಿ ದುಡಿಮೆಯಲ್ಲಿ ತೊಡಗಿರುವವರೆಲ್ಲರೂ ಇಲ್ಲಿನ ಸಂಪತ್ತು, ಸೇವೆ, ಸೌಕರ್ಯಗಳನ್ನು ಅಭಿವೃದ್ಧಿ-ಪಡಿಸುವುದರಲ್ಲಿ ತೊಡಗಿರುತ್ತಾರೆ. ಕನ್ನಡ ಬಾರದೇ ಇರುವವರಿಗೆ ಕನ್ನಡ ಕಲಿಸುವ ಅಧಿಕೃತ ವ್ಯವಸ್ಥೆ ಮಾತ್ರ ಇಲ್ಲ.

ಮೈಸೂರಿನ ಭಾರತೀಯ ಭಾಷಾ ಸಂಸ್ಥೆಯು ಐಎಎಸ್, ಐಪಿಎಸ್, ಬ್ಯಾಂಕು, ಕಾರ್ಖಾನೆ ಅಧಿಕಾರಿಗಳಿಗೆ ಕನ್ನಡ ಕಲಿಸುತ್ತಿತ್ತು. ಈಗ ಅದು ಇಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೊದಲು ಕನ್ನಡೇತರರಿಗೆ ಕನ್ನಡ ಕಲಿಸುವುದನ್ನೇ ಪ್ರಮುಖ ಗುರಿಯನ್ನಾಗಿ ಹೊಂದಿತ್ತು. ಈಗ ಅಲ್ಲಿ ಆ ಯೋಜನೆ ಇಲ್ಲ. ಕನ್ನಡ ಅಭಿವೃದ್ಧಿ ಪ್ರಾಧಿಕಾರದಲ್ಲಿ ಕೆಲವು ಆಶಾದಾಯಕ ಯೋಜನೆಗಳು ಆರಂಭವಾದವು, ಅವೂ ಹಣಕಾಸಿನ ಕೊರತೆಯಿಂದಾಗಿ ಅರ್ಧಕ್ಕೇ ನಿಂತುಹೋದವು. ಕನ್ನಡ ಸಾಹಿತ್ಯ ಪರಿಷತ್ತು ಈ ಕುರಿತು ಒಂದು ಸಭೆಯನ್ನು ನಡೆಸಿತು. ಆದರೆ ಕೆಲಸ ಮುಂದುವರಿಯಲಿಲ್ಲ. ತಮ್ಮದೇ ನೆಲೆಗಟ್ಟಿನಲ್ಲಿ ಖಾಸಗಿ ಸಂಸ್ಥೆಗಳು ಮತ್ತು ವ್ಯಕ್ತಿಗಳು ಕನ್ನಡೇತರರಿಗೆ ಕನ್ನಡ ಕಲಿಸುವ ಕಾಯಕದಲ್ಲಿ ತೊಡಗಿದ್ದಾರೆ. ಆದರೆ, ಕನ್ನಡವನ್ನು ಸರ್ವವ್ಯಾಪಿ ಭಾಷೆಯನ್ನಾಗಿ ಮಾಡುವ ಗುರಿ ಹೊಂದಿರುವ ಸರ್ಕಾರವು ಕನ್ನಡೇತರರಿಗೆ ಕನ್ನಡ ಕಲಿಸುವ ರಾಜ್ಯವ್ಯಾಪಿ ಯೋಜನೆಗಳನ್ನು ಹಾಕಿಕೊಳ್ಳಬೇಕು. ಶಾಲೆಗಳಲ್ಲಿ ಕನ್ನಡ ಭಾಷೆಯ ಕಲಿಕೆಯನ್ನು ಸುಧಾರಿಸಬೇಕು.

ವಾಚಕರ ವಾಣಿ

ಸುಳ್ಳುಸುದ್ದಿಗೆ ಕಡಿವಾಣ: ತುರ್ತು ಅಗತ್ಯ

ಸಾಮಾಜಿಕ ಜಾಲತಾಣಗಳಲ್ಲಿ ಫೇಕ್ ನ್ಯೂಸ್ ಹಾವಳಿ ಮಿತಿ ಮೀರಿದೆ. ಸುಳ್ಳು ಸುದ್ದಿಗಳಿಂದಾಗಿ ಜನರಲ್ಲಿ ಅನವಶ್ಯಕ ಗೊಂದಲ ಉಂಟಾಗುತ್ತಿದೆ. ಗುಂಪು ಗಲಭೆಗಳಿಗೆ ಇವು ಕಾರಣವಾಗುತ್ತಿವೆ. ಬೇರೆ ಬೇರೆ ಧರ್ಮದವರ ನಡುವೆ ಕಿಚ್ಚು ಹಚ್ಚಲು ಬಳಕೆಯಾಗುತ್ತಿವೆ. ಇಂತಹ ಸುಳ್ಳು ಸುದ್ದಿಗಳನ್ನು ಪತ್ತೆಹಚ್ಚಿ ಕ್ರಮ ಜರುಗಿಸಬೇಕು ಎಂದು ಮುಖ್ಯಮಂತ್ರಿಯವರು ಸೈಬರ್ ಪೊಲೀಸರಿಗೆ ಸೂಚನೆ ನೀಡಿರುವುದು ಸರಿಯಾಗಿದೆ.

ಈ ಸಂಬಂಧ ಈಗಾಗಲೇ ಬಹಳಷ್ಟು ಸೈಬರ್ ಪ್ರಕರಣಗಳು ದಾಖಲಾಗಿದ್ದು, ಪರಿಣತ ಅಧಿಕಾರಿಗಳ ಕೊರತೆಯಿಂದಾಗಿ ಹಲವಾರು ಪ್ರಕರಣಗಳು ಮೂಲೆ ಸೇರಿವೆ. ಅರ್ಹ ಅಧಿಕಾರಿಗಳಿಗೆ ಸೂಕ್ತ ತರಬೇತಿ ನೀಡಿದರೆ ಪ್ರಕರಣಗಳ ಶೀಘ್ರ ವಿಲೇವಾರಿಗೆ ಅನುಕೂಲವಾಗುತ್ತದೆ. ಸಾಮಾಜಿಕ ಜಾಲತಾಣಗಳನ್ನು ಹೆಚ್ಚು ಜನರು ಬಳಸುತ್ತಿದ್ದು, ಸುಳ್ಳು ಸುದ್ದಿಗಳು ಜನರ ಗಮನಕ್ಕೆ ಬಂದಲ್ಲಿ ಅಧಿಕಾರಿಗಳಿಗೆ ತಿಳಿಸಲು ಅನುಕೂಲವಾಗುವಂತೆ ಮೊಬೈಲ್ ಫೋನ್ ನಂಬರ್‌ಗಳನ್ನು ಒದಗಿಸಿದಲ್ಲಿ, ಜನಸಾಮಾನ್ಯರು ಸಹ ಅಧಿಕಾರಿಗಳೊಂದಿಗೆ ಕೈ ಜೋಡಿಸಬಹುದು. ಸುಳ್ಳು ಸುದ್ದಿಗಳಿಗೆ ಕಡಿವಾಣ ಹಾಕಬೇಕಾದುದು ಇಂದಿನ ತುರ್ತು.

ಜಿ.ನಾಗೇಂದ್ರ ಕಾವೂರು, ಸಂಡೂರು

ಸುಪ್ತ ಪ್ರತಿಭೆ ಗುರುತಿಸಲು ಬೇಕು ಪರಿಣತಿ

'ಪ್ರತಿಭೆ ಇದೆ, ಗುರುತಿಸುವವರು…?' ಅರವಿಂದ ಚೊಕ್ಕಾಡಿ ಅವರ ಲೇಖನವನ್ನು (ಪ್ರ.ವಾ., ಜೂನ್ 21) ಓದಿದಾಗ ನನ್ನ ನೆನಪು 54 ವರ್ಷಗಳ ಹಿಂದಕ್ಕೆ ಹೋಯಿತು. ಸಾಗರದ ಪ್ರೌಢಶಾಲೆಯಲ್ಲಿ ಉಪಾಧ್ಯಾಯನಾಗಿದ್ದ ನನ್ನ ಅಣ್ಣ ಎಸ್‌ಎಸ್‌ಎಲ್‌ಸಿ ಇಂಗ್ಲಿಷ್ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆಂದು ಬೆಂಗಳೂರಿಗೆ ಬಂದಿದ್ದರು. ಇನ್ನು ಮುಂದೆ ಮೌಲ್ಯಮಾಪನಕ್ಕೆ ಬರುವ ಬಗ್ಗೆ ಯೋಚಿಸಬೇಕು ಎಂದು ಬೇಸರಗೊಂಡು ಕಾರಣವನ್ನು ಸಹ ಹೇಳಿದರು. ಒಂದು ಉತ್ತರ ಪತ್ರಿಕೆಗೆ 96 ಅಂಕಗಳನ್ನು ಖುಷಿಯಿಂದ ಕೊಟ್ಟಿದ್ದರಂತೆ. ಆ ಪತ್ರಿಕೆಯನ್ನು ಮರುಪರಿಶೀಲನೆ ಮಾಡಿದ ಮೇಲಧಿಕಾರಿ ಅಣ್ಣನನ್ನು ಕರೆದು ಕೆಲವು ಉತ್ತರಗಳಿಗೆ ಪೂರ್ಣ ಅಂಕ ಜಾಸ್ತಿ ಎಂದು ತೋರುತ್ತದೆ, ಇಂಥಿಂಥಲ್ಲಿ ಸ್ವಲ್ಪ ಕಡಿಮೆ ಮಾಡಬೇಕು ಎಂದು ಸೂಚಿಸಿದರಂತೆ.

'ವ್ಯಾಕರಣ ದೋಷಗಳಿಲ್ಲದ ಸರಳ ಭಾಷೆ, ಸ್ವಂತಿಕೆಯಿಂದ ಕೂಡಿದ ಸಮರ್ಪಕ ಉತ್ತರಗಳು… ಮೌಲ್ಯಮಾಪಕರಿಗೆ ಒದಗಿಸುವ ಮಾದರಿ ಉತ್ತರಗಳಿಗಿಂತಲೂ ಈ ಉತ್ತರ ಪತ್ರಿಕೆಯ ಉತ್ತರಗಳು ಚೆನ್ನಾಗಿವೆ ಎಂದು ಮನವರಿಕೆಯಾಗಿ ಪೂರ್ಣ ಅಂಕಗಳನ್ನು ಕೊಟ್ಟಿದ್ದೇನೆ. ಹಾಗಾಗಿ, ಕ್ಷಮಿಸಿ. ನಾನು ಕೊಟ್ಟಿರುವ ಅಂಕಗಳನ್ನು ಬದಲಾಯಿಸಲಾರೆ. ಮರುಪರಿಶೀಲಿಸುವ ಅಧಿಕಾರ ತಮಗೆ ಹೇಗೂ ಇದೆಯಲ್ಲ' ಎಂದು ಹೇಳಿದ್ದಾಗಿ ಅವರು ನಮಗೆ ವಿವರಿಸಿದರು. ನಂತರದ ವರ್ಷಗಳಲ್ಲಿ ಅವರು ಮೌಲ್ಯಮಾಪನಕ್ಕೆ ಹೋದಂತಿಲ್ಲ. ಚೊಕ್ಕಾಡಿ ಅವರು ಹೇಳುವಂತೆ ವಿದ್ಯಾರ್ಥಿಗಳಲ್ಲಿರುವ ಸುಪ್ತಪ್ರತಿಭೆಯನ್ನು ಗುರುತಿಸಲು ಮೌಲ್ಯಮಾಪಕರು ಸ್ವತಃ ಪ್ರತಿಭೆ, ಪರಿಣತಿ ಉಳ್ಳವರಾಗಿರಬೇಕು.

ಸಾಮಗ ದತ್ತಾತ್ರಿ, ಬೆಂಗಳೂರು

ಚಿತ್ರನಗರಿ: ಇದರತ್ತಲೂ ಗಮನವಿರಲಿ

'ಚಿತ್ರನಗರಿ ನಿರ್ಮಾಣ ತುರ್ತು ಅಗತ್ಯವೇ?' ಲೇಖನದಲ್ಲಿ (ಸಂಗತ, ಜೂನ್ 16)) ಕೇಸರಿ ಹರವೂ ಅವರು ಎತ್ತಿರುವ ಸಂಗತಿಗಳು ವಾಸ್ತವಿಕವಾಗಿವೆ. ಇತರ ಕಲಾ ಪ್ರಕಾರಗಳ ಬಗ್ಗೆ ಇರುವ ಗಮನ ಗಂಭೀರ ಸಿನಿಮಾಗಳ ಕುರಿತು ಅಷ್ಟಾಗಿ ಇಲ್ಲದ್ದು, ಅದೊಂದು ವ್ಯವಹಾರ ವಲಯದ ವಿಚಾರವೆಂಬಂತೆ ಆಗಿಬಿಟ್ಟಿದೆ. ಈ ಕಾರಣಕ್ಕಾಗಿಯೇ, ಹರವೂ ಪ್ರಸ್ತಾಪಿಸಿರುವ ಸಂಗತಿಗಳನ್ನು ಜರೂರೆಂದು ಪರಿಗಣಿಸಿ ಸರ್ಕಾರದ ಗಮನ ಸೆಳೆಯುವ ಅಗತ್ಯವಿದೆ. ಹರವೂ ನಿರೂಪಿಸಿರುವ ಅಂಶಗಳ ಜೊತೆ ಮತ್ತೂ ಕೆಲವು ಅಂಶಗಳನ್ನು ಸೇರಿಸಲು ಇಚ್ಛಿಸುತ್ತೇನೆ.

ಚಲನಚಿತ್ರ ಅಕಾಡೆಮಿ ಸ್ವಾಯತ್ತವಾಗುವುದರ ಜೊತೆಗೆ ಸಿನಿಮಾ ಶಿಕ್ಷಣ ಕಾರ್ಯಕ್ರಮಗಳನ್ನು ನಿರಂತರವಾಗಿ ಮಾಡಬೇಕು. ಆ ಮೂಲಕ ಉತ್ತಮ ಸಿನಿಮಾಗಳ ರುಚಿ ಅರಿಯುವ ಬಗೆಯನ್ನು ಪ್ರೇಕ್ಷಕರ ಬುದ್ಧಿಭಾವಕ್ಕೆ ತರಬೇಕು. ಇದಾಗದೇ ಹೋದರೆ, ಉತ್ತಮ ಸಿನಿಮಾಗಳ ಬಗ್ಗೆ ಉದಾಸೀನ ಮಾತ್ರವಲ್ಲ, 'ಕ್ಲಾಸ್-ಮಾಸ್' ಎಂಬ ವಿಂಗಡಣೆಯನ್ನು ಸಹಜಗೊಳಿಸಿ, ಉತ್ತಮ ಸಿನಿಮಾಗಳು ನಮಗಲ್ಲ ಎಂಬ ಮನೋಭಾವವನ್ನು ಪ್ರೇಕ್ಷಕರಲ್ಲಿ ಸಹಜಗೊಳಿಸಲಾಗುತ್ತದೆ.

ಅಂತರರಾಷ್ಟ್ರೀಯ ಸಿನಿಮಾ ಹಬ್ಬವನ್ನು ವಿಕೇಂದ್ರೀಕರಿಸಿ, ನಾಡಿನ ಹತ್ತಾರು ಕಡೆ ಉತ್ತಮ ದೇಶಿ– ವಿದೇಶಿ ಸಿನಿಮಾಗಳನ್ನು ಪ್ರೇಕ್ಷಕರಿಗೆ ಪರಿಚಯಿಸಬೇಕು. ರಾಜ್ಯದ ಹಿಂದುಳಿದ ಜಾತಿಗಳ ಯುವಕರಿಗೆ ಬದುಕಿನ ಅನುಭವ ಹಾಗೂ ಸಿನಿಮಾಗಳನ್ನು ಮಾಡುವ ಆಸೆ ಎರಡೂ ಇವೆ. ಆದರೆ ಅವರಿಗೆ ಸಿನಿಮಾ ಮಾಡಲು ಬೇಕಾದ 'ಸಾಮಾಜಿಕ ಬಂಡವಾಳ'ದ ಕೊರತೆ ಇದೆ. ಅವರಿಗೆ ಸಿನಿಮಾ ನಿರ್ಮಾಣದ ತಾಂತ್ರಿಕ ಹಾಗೂ ಕಲಾ ಕೌಶಲಗಳ ತರಬೇತಿ ಅಗತ್ಯವಾಗಿದ್ದು, ಅದನ್ನು 'ಸಾಮಾಜಿಕ ಸಶಕ್ತೀಕರಣ ಯೋಜನೆ' ಎಂದು ಪರಿಗಣಿಸಿ, ಜಾರಿಗೊಳಿಸಬೇಕು. ಹಾಗಾದಲ್ಲಿ, ತಳಮಟ್ಟದ ಜನರ ಬದುಕಿನ ವೈವಿಧ್ಯಮಯ ಅನುಭವ ಕಥನಗಳು ಸಿನಿಮಾದಲ್ಲಿ ತೆರೆದುಕೊಂಡು, ಕನ್ನಡ ಸಿನಿಮಾಗಳ ಗುಣ ಸಿರಿ ಹಿಗ್ಗುತ್ತದೆ. ಈ ಬಗೆಯ ಶೈಕ್ಷಣಿಕ ಯೋಜನೆಯ ಜೊತೆ, ಸಿನಿಮಾ ಮಾಡುವ ತಳ ಸಮುದಾಯಗಳ ಕಲಾವಿದರಿಗೆ ಕ್ಯಾಮೆರಾ, ಲೈಟಿಂಗ್, ಎಡಿಟಿಂಗ್ ಸ್ಟುಡಿಯೊ, ರೆಕಾರ್ಡಿಂಗ್ ತಂತ್ರಜ್ಞಾನ ಲ್ಯಾಬ್‌ಗಳನ್ನು ಸಹಕಾರ ಮಾದರಿಯಲ್ಲಿ ಕಟ್ಟಿಕೊಡಬೇಕು. ಈ ಯೋಜನೆಗಳಿಗೆ ತಗಲುವ ವೆಚ್ಚವು ಚಿತ್ರನಗರಿಗಿಂತ ಕಡಿಮೆ ಆಗಿದ್ದು, ಹೆಚ್ಚು ಸಾಮಾಜಿಕ ಉತ್ಪಾದಕತೆಯ ಸಾಧ್ಯತೆಗಳನ್ನು ಹೊಂದಿದೆ. ಈ ಕಡೆ ಸರ್ಕಾರದ ಗಮನ ಸೆಳೆಯುವುದನ್ನು, ಚಲನಚಿತ್ರ ಸೊಸೈಟಿಗಳು ಹಾಗೂ ಸಿನಿಮಾ ಉತ್ಸಾಹಿಗಳು ಸಂಘಟಿತವಾಗಿ ಮಾಡಬೇಕು.

ಕೆ. ಫಣಿರಾಜ್, ಉಡುಪಿ

ವ್ಯತಿರಿಕ್ತ ಅನುಭವ!

'ಬಾರದ ಬಿಲ್; ತೀರದ ಗೊಂದಲ' ಎಂಬ ವರದಿಯ ವಿವರ (ಪ್ರ.ವಾ., ಜೂನ್ 21) ನನ್ನ ಅನುಭವಕ್ಕೆ ಸ್ವಲ್ಪ ವ್ಯತಿರಿಕ್ತ ಎನಿಸಿತು. ತಿಂಗಳ ವಿದ್ಯುತ್ ಬಿಲ್ ರವಾನೆಯಲ್ಲಿ ದಿನಗಟ್ಟಲೆ ನಿಧಾನವಾದದ್ದು ನಿಜ. ನನ್ನ ಈ ತಿಂಗಳ ಬಿಲ್ ಮೊತ್ತ ವರ್ಷದ ಸರಾಸರಿಗಿಂತ ಶೇ 10ರಷ್ಟು ಹೆಚ್ಚಾಗಿತ್ತು. ತಡವಾಗಿ ಮೀಟರ್ ಓದಿದ್ದರ ಮತ್ತು ಪೂರ್ವಾನ್ವಯವಾಗಿ ಎರಡು ತಿಂಗಳ ದರ ಪರಿಷ್ಕರಣೆಯ ಪರಿಣಾಮ ಇದು. ಬಿಟ್ಟರೆ ಹೆಚ್ಚಳ ಸುಮಾರು 7 ಪ್ರತಿಶತದಷ್ಟಾಗಬಹುದಷ್ಟೆ. ಬಿಲ್ ಪಾವತಿಗೂ ತೊಂದರೆ ಆಗಲಿಲ್ಲ.

ಆರ್.ಕೆ. ದಿವಾಕರ, ಯಲೇನಹಳ್ಳಿ, ಬೇಗೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನ್ಯೂಯಾರ್ಕ್‌ನಲ್ಲಿರುವ ವಿಶ್ವ ಸಂಸ್ಥೆಯ ಕೇಂದ್ರಕಚೇರಿಯಲ್ಲಿ ಪ್ರಧಾನಿ ಮೋದಿ ಅವರಿಂದ ಯೋಗಾಸನ

ಕೇರಳದ ಪಾಂಗೋಡೆ ಸೇನಾ ನೆಲೆಯಲ್ಲಿ ಸೈನಿಕರು ನೀರಿನಲ್ಲಿ ಯೋಗ ಮಾಡಿದರು

(ಪಿಟಿಐ ಮತ್ತು ಎಎಫ್‌ಪಿ ಚಿತ್ರಗಳು)



ಪೇಜಾವರ ಮಠಾಧೀಶರಾದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಚೆನ್ನೈನಲ್ಲಿ ಯೋಗಾಸನ ಮಾಡಿದರು

ಕಾರವಾರದ ನೌಕಾ ನೆಲೆಯಲ್ಲಿರುವ ಯುದ್ಧವಿಮಾನ ವಾಹಕ ನೌಕೆ ಐಎನ್‌ಎಸ್ ವಿಕ್ರಮಾದಿತ್ಯದ ಮೇಲೆ ನೌಕಾಪಡೆ ಸಿಬ್ಬಂದಿ ಯೋಗ ದಿನವನ್ನು ಆಚರಿಸಿದರು

ರಾಷ್ಟ್ರಪತಿ ಭವನದಲ್ಲಿ ನಡೆದ ಯೋಗ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು

ಸೂರತ್‌ನಲ್ಲಿ ನಡೆದ ಯೋಗಾಸನ ಕಾರ್ಯಕ್ರಮವು ಗಿನ್ನಿಸ್ ದಾಖಲೆ ಬರೆದಿದೆ. ಯೋಗ ಕಾರ್ಯಕ್ರಮವೊಂದರಲ್ಲಿ ದೊಡ್ಡ ಪ್ರಮಾಣದಲ್ಲಿ ಜನ ಸೇರಿದ್ದರಿಂದ ಈ ದಾಖಲೆ ನಿರ್ಮಾಣವಾಗಿದೆ

ವಾರಾಣಸಿಯಲ್ಲಿ ಮಕ್ಕಳಿಂದ ವೃಕ್ಷಾಸನ

ಮುಂಬೈನಲ್ಲಿ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಅವರಿಂದ ವೀರಭದ್ರಾಸನ

ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಜಗತ್ತಿನೆಲ್ಲೆಡೆ ಯೋಗ ದಿನವನ್ನು ಆಚರಿಸಲಾಯಿತು. ಭಾರತದಲ್ಲೂ ರಾಜಕೀಯ ನಾಯಕರು, ಸೈನಿಕರು, ವಿವಿಧ ಇಲಾಖೆ ಅಧಿಕಾರಿಗಳು ಸೇರಿದಂತೆ ಸಾರ್ವಜನಿಕರು ಯೋಗ ಮಾಡುವುದರ ಮೂಲಕ ಯೋಗ ದಿನ ಆಚರಿಸಿದರು

ಸಾಂಪ್ರದಾಯಿಕ ಒಂಬತ್ತು ಮೊಳದ ಸೀರೆ ಉಟ್ಟ ಮಹಿಳೆಯು ಗೇಟ್ ವೇ ಆಫ್ ಇಂಡಿಯಾ ಮುಂಭಾಗ ಯೋಗ ದಿನ ಆಚರಿಸಿದರು

ಜಮ್ಮು–ಕಾಶ್ಮೀರದ ರಾಜೌರಿಯಲ್ಲಿ ಸೈನಿಕರಿಂದ ಯೋಗ

ಮುಂಬೈನ ಲೋಕಲ್ ರೈಲಿನ ಬೋಗಿಯೊಂದರಲ್ಲಿ ಪ್ರಯಾಣಿಕರು ಯೋಗದ ಪೋಸು ನೀಡಿದರು

ಮೈಸೂರಿನ ಅರಮನೆ ಆವರಣದಲ್ಲಿ ಬುಧವಾರ ಯೋಗ ದಿನ ಅಂಗವಾಗಿ ಸಾವಿರಾರು ಆಸಕ್ತರು ಯೋಗಾಭ್ಯಾಸದಲ್ಲಿ ಪಾಲ್ಗೊಂಡರು ಪ್ರಜಾವಾಣಿ ಚಿತ್ರ



ರಾಜ್ಯಸಭೆ ಹಾಗೂ ಲೋಕಸಭೆಯ ಅಧಿಕಾರಿಗಳಿಂದ ಸಂಸತ್ತು ಭವನದ ಮುಂಭಾಗದಲ್ಲಿ ಸೇತು ಬಂಧಾಸನ ಹಾಕಿದರು

ವಿಜಯಪುರ ಜಿಲ್ಲಾಡಳಿತದಿಂದ ನಗರದ ಡಾ.ಬಿ.ಆರ್‌ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ ಯೋಗ ದಿನಾಚರಣೆಯಲ್ಲಿ ಶಾಲಾ, ಕಾಲೇಜು ವಿದ್ಯಾರ್ಥಿನಿಯರು ಯೋಗಾಸನ ಹಾಕಿದರು ಪ್ರಜಾವಾಣಿ ಚಿತ್ರ



ಶಹಾಪುರ ಓಂ ಯೋಗ ತರಬೇತಿ ಸಂಸ್ಥೆಯ ಮಕ್ಕಳಿಂದ ಯೋಗ ಪ್ರದರ್ಶನವು ಎಲ್ಲರ ಗಮನ ಸೆಳೆಯಿತು ಪ್ರಜಾವಾಣಿ ಚಿತ್ರ

ಬಿಜೆಪಿ ಸಂಸದ ಮನೋಜ್ ತಿವಾರಿ ಸೇರಿದಂತೆ ಹಲವರು ಯಮುನಾ ನದಿಯಲ್ಲಿ ವಿವಿಧ ಯೋಗಾಸನಗಳನ್ನು ಮಾಡಿ, ಯೋಗ ದಿನ ಆಚರಿಸಿದರು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಗುಂಪೊಂದು ಮಹಿಳೆಯೊಬ್ಬರಿಗೆ ಹಿಂಸೆ ನೀಡಿ, ಗುಂಡಿಕ್ಕಿ ಹತ್ಯೆ ಮಾಡುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದು ಮಣಿಪುರಲ್ಲಿ ನಡೆಯುತ್ತಿರುವ ಹಿಂಸಾಚಾರದಲ್ಲಿ ನಡೆದ ಘಟನೆ ಎಂದೂ ಹೇಳಲಾಗುತ್ತಿದೆ. 'ಈ ಮಹಿಳೆಯು ಮಣಿಪುರದ ಹಿಂದೂ ಮೈತೇಯಿ ಸಮುದಾಯಕ್ಕೆ ಸೇರಿದವರು. ಹಿಂದೂಗಳು ಅಲ್ಪಸಂಖ್ಯಾತರಾದರೆ, ಇದೇ ಸ್ಥಿತಿ ಎದುರಾಗುತ್ತದೆ. ಕರ್ನಾಟಕದಲ್ಲಿ ಮತಾಂತರ ನಿಷೇಧ ಕಾಯ್ದೆ ಹಿಂಪಡೆಯಲಾಗುತ್ತಿದೆ. ಕರ್ನಾಟಕದಲ್ಲೂ ಹಿಂದೂಗಳಿಗೆ ಇದೇ ಸ್ಥಿತಿ ಬರಲಿದೆ' ಎಂಬ ವಿವರವನ್ನು ಈ ಪೋಸ್ಟ್‌ಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗಿದೆ. ಆದರೆ ಇದು ಸುಳ್ಳು ಸುದ್ದಿ.

ಇದು 2022ರಲ್ಲಿ ಡಿ.8ರಂದು ನಡೆದ ಘಟನೆ. ಈ ಕುರಿತು 'ಮಿಜ್ಜಿಮಾ' ಎನ್ನುವ ಬರ್ಮಾದ ಸುದ್ದಿ ಸಂಸ್ಥೆ ವರದಿ ಮಾಡಿದೆ. ಮ್ಯಾನ್ಮಾರ್‌ನ ಪಿಡಿಎಫ್ ಪಕ್ಷದವರು ಈ ಹತ್ಯೆಯನ್ನು ಮಾಡಿದ್ದಾರೆ. 'ಆಂಗ್ ಸಾಂಗ್ ಸೂಕಿ ಅವರ ನೇತೃತ್ವದ ಎನ್‌ಎಲ್‌ಡಿ ಪಕ್ಷಕ್ಕೆ ತಮ್ಮ ಕುರಿತು ಮಾಹಿತಿ ನೀಡುತ್ತಿದ್ದಳು ಎಂದು ಪಿಡಿಎಫ್ ಪಕ್ಷದವರು ಆ ಮಹಿಳೆಯನ್ನು ಹತ್ಯೆ ಮಾಡಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ. ಭಾರತದ ಮಣಿಪುರಕ್ಕೂ, ಈ ವಿಡಿಯೊಗೂ ಸಂಬಂಧವಿಲ್ಲ' ಎಂದು ಆಲ್ಟ್ ನ್ಯೂಸ್ ಸಂಸ್ಥೆಯು ಫ್ಯಾಕ್ಟ್‌ಚೆಕ್ ಮಾಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಕರುಣೆಯ ನಡೆ

ರಣದಿ ಬಿದ್ದಾಸೈನ್ಯಪತಿ ಸಿಡ್ನಿಯುತ್ಕ್ರಮಣ |
ದೊಣಗುಬಾಯಿಗೆ ನೀರನೊಡ್ಡಲ್ ಅದನವನು ||
ತನಗಿಂತಂ ಕೆಲದ ಭಟಗದು ಸಲ್ಪುದೆಂದಿತ್ತು |
ತಣಿವನಾಂತುದ ನೆನೆಯೊ- ಮಂಕುತಿಮ್ಮ || 911 ||

ಪದ-ಅರ್ಥ: ಬಿದ್ದಾಸೈನ್ಯಪತಿ = ಬಿದ್ದ + ಆ + ಸೈನ್ಯಪತಿ, ಸಿಡ್ನಿಯುತ್ಕ್ರಮಣದೊಣಗು ಬಾಯಿಗೆ = ಸಿಡ್ನಿಯ + ಉತ್ಕ್ರಮಣ + ಒಣಗು + ಬಾಯಿಗೆ, ನೀರನೊಡ್ಡಲ್ = ನೀರನು + ಒಡ್ಡಲ್, ಅದನವನು = ಅದನು + ಅವನು, ಕೆಲದ = ಕೆಳಗಿನ, ಭಟಗದು = ಭಟಗೆ + ಅದು, ಸಲ್ಪುದೆಂದಿತ್ತು = ಸಲ್ಪುದು(ಸಲ್ಲುವುದು) + ಎಂದು + ಇತ್ತು, ತಣಿವನಾಂತುದ = ತಣಿವನು + ಅಂತುದ (ನಿವಾರಿಸಿದ್ದನ್ನು)

ವಾಚ್ಯಾರ್ಥ: ಸೈನ್ಯಪತಿ ಸಿಡ್ನಿ ಯುದ್ಧಭೂಮಿಯಲ್ಲಿ ಗಾಯಗೊಂಡಾಗ ಅವನ ಒಣಗುಬಾಯಿಗೆ ನೀರು ತಂದರೆ ಅವನು ತನಗಿಂತ ಅದು ಮತ್ತೊಬ್ಬನಿಗೆ ಹೆಚ್ಚು ಅವಶ್ಯಕ ಎಂದು ಹೇಳಿ ಕೆಳಗಿನ ಮಟ್ಟದ ಸೈನಿಕನಿಗೆ ನೀರು ಕೊಡಿಸಿ ಅವನನ್ನು ತಣಿಸಿದುದನ್ನು ನೆನೆಸಿಕೋ.

ವಿವರಣೆ: ಡಿ.ವಿ.ಜಿ ಈ ಕಗ್ಗದಲ್ಲಿ ಒಂದು ಸುಂದರ ಕಥಾನಕವನ್ನು ಪ್ರಸ್ತುತಪಡಿಸುತ್ತಾರೆ. ಈ ಕಥೆ ಸರ್ ಫಿಲಿಪ್ ಸಿಡ್ನಿಯದು (1554-1586). ಆತನೊಬ್ಬ ಇಂಗ್ಲೀಷ್ ಕವಿ, ಆಸ್ಥಾನ ವಿದ್ವಾಂಸ ಮತ್ತು ಸೈನ್ಯಾಧಿಕಾರಿ. ಆತ ಎಲಿಜಬೆತ್ ಕಾಲದ ಒಬ್ಬ ಪ್ರಮುಖ ವ್ಯಕ್ತಿ. ತನ್ನ ಹದಿನೆಂಟನೇ ವಯಸ್ಸಿಗೆ ಆತನೊಬ್ಬ ಮುಖ್ಯ ವ್ಯಕ್ತಿಯಾಗಿ ಒಂದನೇ ಎಲಿಜಬೆತ್‌ರ ಮದುವೆಯನ್ನು ಕುದುರಿಸಲು ಫ್ರಾನ್ಸ್‌ಗೆ ಹೋಗಿದ್ದನಂತೆ. ಆಗಿನ ಕಾಲದ ಪ್ರಮುಖರಂತೆ ಅವನಿಗೂ ಸೈನ್ಯದಲ್ಲಿ ಒಂದು ಮುಖ್ಯಸ್ಥಾನವಿತ್ತು. 1586 ರಲ್ಲಿ ಆತ ಸರ್ ಜಾನ್ ನೋರಿಸ್‌ರೊಂದಿಗೆ ಸೇರಿ ಸ್ಪೇನ್ ವಿರುದ್ಧದ ಯುದ್ಧದಲ್ಲಿ ಭಾಗಿಯಾದ. ಘನಘೋರಯುದ್ಧದಲ್ಲಿ ಅವನ ತೊಡೆಗೆ ಗುಂಡು ಬಡಿದು ದೊಡ್ಡ ಗಾಯವಾಯಿತು. ರಕ್ತ ಸುರಿದು ಅವನ ಬೂಟ್ಸುಗಳು ತುಂಬಿ ಹೋದವು. ರಕ್ತಹೀನತೆಯಿಂದ ಪ್ರಾಣ ಹೋಗುವಂತಾಯಿತು. ಆಗ ಅವನಿಗೆ ಸಹಾಯಕನೊಬ್ಬ ಕುಡಿಯಲು ನೀರು ತಂದ. ತನ್ನ ಪಕ್ಕದಲ್ಲೇ ಬಿದ್ದಿದ್ದ ಸೈನಿಕನೊಬ್ಬನನ್ನು ಕಂಡ ಸರ್ ಸಿಡ್ನಿ, ತನಗಿಂತ ಆ ಸೈನಿಕನಿಗೆ ನೀರಿನ ಅವಶ್ಯಕತೆ ಹೆಚ್ಚಾಗಿದೆಯೆಂದು ಹೇಳಿ ಅವನಿಗೆ ನೀರು ಕೊಡಿಸಿ ಅವನ ಪ್ರಾಣ ಉಳಿಸಿದ, ಆದರೆ ತಾನು ತೀರ ಅನಾರೋಗ್ಯಕ್ಕೆ ಜಾರಿ ಇಪ್ಪತ್ತಾರು ದಿನಗಳ ನಂತರ ಹದಿನೇಳನೇ ಅಕ್ಟೋಬರ್ 1586 ರಂದು ತೀರಿ ಹೋದ. ಹೀಗೆ ಮತ್ತೊಬ್ಬರಿಗೆ ಕರುಣೆ ತೋರಿಸಿ ತನ್ನ ಕಷ್ಟವನ್ನು ಮರೆದ ಸರ್ ಫಿಲಿಪ್ ಸಿಡ್ನಿಯವರ ನಡೆಯನ್ನು ನೆನಪಿಸಿಕೊಳ್ಳಬೇಕು ಎನ್ನುತ್ತದೆ ಕಗ್ಗ. ಇದು "ತೇನ ತ್ಯಕ್ತೇನ ಭುಂಜೀಥಾ:" ಎಂಬ ಉಪನಿಷತ್ತಿನ ಮಾತಿಗೆ ಧ್ವನಿಯಾಗಿದೆ. ನಮ್ಮ ಪುರಾಣಗಳಲ್ಲಿ, ಇತಿಹಾಸದಲ್ಲಿ ಇಂತಹ ಅನೇಕ ಮಹಾನುಭಾವರ ಕಥೆಗಳು ದೊರಕುತ್ತವೆ. ತನ್ನ ದೇಹದ ಮಾಂಸವನ್ನೇ ಕತ್ತರಿಸಿ ನೀಡಿದ ಶಿಬಿ ಚಕ್ರವರ್ತಿ, ವೃತ್ತಾಸುರನ ಸಂಹಾರಕ್ಕಾಗಿ ಇಂದ್ರನ ವಜ್ರಾಯುಧವನ್ನು ತಯಾರಿಸಲು ತನ್ನ ಬೆನ್ನಮೂಳೆಯನ್ನು ಕೊಟ್ಟು ಪ್ರಾಣತ್ಯಾಗ ಮಾಡಿದ ದಧೀಚಿ ಮಹರ್ಷಿ ಇವರೆಲ್ಲರ ನಡೆ ಆದರ್ಶವಾದದ್ದು. ಪ್ರಪಂಚಕ್ಕೆ ಒಳಿತಾಗಲು ತಮ್ಮ ಸಂತೋಷ, ನೆಮ್ಮದಿ, ಪ್ರಾಣಗಳನ್ನು ನೀಡಿದ ಕಾರ್ಯಗಳನ್ನು ನೆನೆಸಿಕೋ, ಅದರಂತೆ ನಡೆ ಎನ್ನುತ್ತದೆ ಕಗ್ಗ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜೂನ್ 22, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಆಷಾಢ ಶುದ್ಧ ಚತುರ್ಥಿ ಗಂ. 17-28, ನಕ್ಷತ್ರ: ಆಶ್ಲೇಷ ಗಂ. 28-18 ಯೋಗ: ಹರ್ಷಣ 27-31 ಕರಣ: ವಿಷ್ಟಿ, ಗಂ. 17-28, ಮಿಥುನ ಮಾಸದ 07 ನೇ ದಿನ, ಮಳೆನಕ್ಷತ್ರ: ಮೃಗಶಿರ 4.
00ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-09 ಸೂರ್ಯಾಸ್ತ : 06-56
ಮುಸ್ಲಿಂ ದಿನಾಂಕ : 03 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 3, 6

ಮೇಷ: ತೈಲ ಲೇಪನ, ಅಭ್ಯಂಗದಂತಹ ವಿಧಿಯ ಆಚರಣೆಯಿಂದ ಆರೋಗ್ಯ ಉತ್ತಮಗೊಳ್ಳುವುದು. ದುಡ್ಡಿನ ವಿಷಯದಲ್ಲಿ ಮೋಸ ಹೋಗುವ ಸಂಭವವಿದೆ. ಮನಸ್ಸಿನ ಭಾವನೆಗಳನ್ನು ಹೊರ ಹಾಕುವಂತಾಗಲಿದೆ.

ವೃಷಭ: ವೈದ್ಯರಿಗೆ ವೃತ್ತಿಯಲ್ಲಿ ಸವಾಲೆನಿಸುವ ವಿಷಯಗಳಲ್ಲಿ ಯಶಸ್ಸು ಕಂಡುಬರಲಿದೆ. ಕೌಟುಂಬಿಕವಾದ ವಿವಾದಗಳು ರಾಜೀ ಮನೋಭಾವಗಳಿಂದ ಸಮಾಪ್ತಿ ಹೊಂದಿಯಾವು. ಧಾನ್ಯಗಳ ಮಾರಾಟಗಾರರಿಗೆ ಉತ್ತಮ ಲಾಭ.

ಮಿಥುನ: ಮುಕ್ತಾಯ ಹಂತದ ಯೋಜನೆಗಳು ನಿಮ್ಮ ಗಡಿಬಿಡಿಯಿಂದಾಗಿ ವ್ಯತ್ಯಾಸವಾಗಬಹುದು. ಸುಪ್ತವಾಗಿ ಅಡಗಿರುವ ಪ್ರತಿಭೆ, ಕೌಶಲಗಳನ್ನು ಹೊರ ತೆಗೆಯಲು ಶಿಕ್ಷಕಿಯೊಬ್ಬರು ಸಹಾಯ ಮಾಡುವರು.

ಕರ್ಕಾಟಕ: ವಿದ್ಯಾರ್ಥಿಗಳಿಗೆ ನೀವು ನಿರ್ಮಿಸಿಕೊಂಡ ಅನುಕೂಲಕರ ವಾತಾವರಣವು ವಿದ್ಯಾಭ್ಯಾಸದಲ್ಲಿ ಮುನ್ನಡೆ ತಂದುಕೊಡಲಿದೆ. ವೈಯಕ್ತಿಕ ಕೆಲಸಗಳಿಗೆ ನೀವಂದುಕೊಂಡ ಯಾವುದೇ ಅಡಚಣೆ ಇರುವುದಿಲ್ಲ.

ಸಿಂಹ: ಜವಾಬ್ದಾರಿಯುಕ್ತ ನಡೆ, ದಿಟ್ಟತನದ ಜೊತೆಗೆ ಸ್ವಲ್ಪ ತಂತ್ರಗಾರಿಕೆ ತೋರಿದರೆ ಅಧಿಕಾರಿಗಳ ಗಮನ ಸೆಳೆಯುವುದು ಕಷ್ಟ ಆಗುವುದಿಲ್ಲ. ಸಾಹಿತ್ಯ ವಿದ್ವಾಂಸರು ಅನವಶ್ಯಕ ಮಾತುಗಳಿಂದ ದೂರವಿರುವುದು ಒಳಿತು.

ಕನ್ಯಾ: ಪಿತೃವರ್ಗದಲ್ಲಿ ಆರೋಗ್ಯ ನಷ್ಟದಿಂದಾಗಿ ಆಸ್ಪತ್ರೆಯ ತಿರುಗಾಟದ ಕ್ಲೇಶ ಉಂಟಾಗುವುದು. ಸಣ್ಣಪುಟ್ಟ ವಿಚಾರವಾಗಿ ಅಥವಾ ಇತರರ ಮಾತುಗಳಿಗೆ ಕಿವಿ ಕೊಟ್ಟು ಅತ್ತೆ ಸೊಸೆಯ ಸಂಬಂಧದಲ್ಲಿ ಭಿನ್ನಾಭಿಪ್ರಾಯ ಮೂಡಲಿದೆ.

ತುಲಾ: ಜೀವನದಲ್ಲಿ ವಿವಾಹದ ವಿಚಾರವಾಗಿ ಶುಭ ದಿನಗಳು ಪ್ರಾರಂಭವಾಗುವ ಲಕ್ಷಣಗಳು ಕಾಣಲಿವೆ. ಹೆಂಡತಿ ಮಕ್ಕಳೊಂದಿಗೆ ಕೈಗೊಂಡ ಪ್ರವಾಸ ಸುಖದಾಯಕವಾಗಿರುವುದು. ವರ್ತಕ ವರ್ಗಕ್ಕೆ ಸ್ವಲ್ಪ ಬಿಡುವು ಸಿಕ್ಕಿತು.

ವೃಶ್ಚಿಕ: ತಾಯಿಯವರ ಆರೋಗ್ಯ ಸುಧಾರಿಸಿ ಆಸ್ಪತ್ರೆಯಿಂದ ಮನೆಗೆ ಬರುವಂತಾಗಲಿದೆ. ಸ್ವಶಕ್ತಿಯಿಂದ ಜೀವನದಲ್ಲಿ ಮುಂಬರುವ ದಾರಿಯನ್ನು ಆರಿಸಿಕೊಳ್ಳಿ. ಎಂಥ ಜವಾಬ್ದಾರಿ ನಿಭಾಯಿಸಲು ಸರ್ವಸಿದ್ಧರಾಗಿ.

ಧನು: ಬುದ್ಧಿವಂತಿಕೆಯ ಬಲದಿಂದ ಶತ್ರು ಬಾಧೆ ಉಪಶಮನಗೊಳಿಸಿಕೊಳ್ಳುವ ಮಾರ್ಗವನ್ನು ಹುಡುಕಿರಿ. ಕೃಷಿಯನ್ನು ಮಾಡುವವರು ಸಂಬಂಧ ಪಟ್ಟಂಥ ಇಲಾಖೆಯವರಿಂದ ಸಹಾಯವನ್ನು ಪಡೆದುಕೊಳ್ಳಿರಿ.

ಮಕರ: ಸಂಘದಲ್ಲಿ ನಾಯಕತ್ವವನ್ನು ವಹಿಸುತ್ತಿರುವುದರಿಂದ ತಪ್ಪುಗಳಿಗೆ ನೇರವಾಗಿ ಅಲ್ಲದಿದ್ದರೂ ಹೊಣೆಗಾರಿಕೆ ಆಗಿರುತ್ತದೆ. ಮಹಾಗಣಪತಿಯನ್ನು ಭಾವಪೂರ್ವಕವಾಗಿ ಪೂಜಿಸಿ ಪುಣ್ಯ ಸಂಪಾದನೆ ಮಾಡಿ.

ಕುಂಭ: ಈ ದಿನ ಮನಸ್ಸಿನಲ್ಲಿ ಹಲವು ದಿನಗಳಿಂದ ಇದ್ದಂಥ ಹಂಬಲವು ಮಿತ್ರರ ಸಹಾಯದಿಂದ ನೆರವೇರುವುದು. ಉತ್ತಮ ಸಂಸ್ಕೃತಿಯನ್ನು ಪಡೆದಿರುವ ಕೆಲಸ ಕಾರ್ಯಗಳಲ್ಲಿ ಖಂಡಿತವಾಗಿ ಜಯ ಸಿಗುವುದು.

ಮೀನ: ಮಾರ್ಗದರ್ಶಕರ ಸಲಹೆ ಸೂಚನೆ ಪಡೆದು ಆರಂಭಿಸಿದ ಯೋಜನಾ ಬದ್ಧ ಕೆಲಸಗಳಲ್ಲಿ ಹೆಚ್ಚಿನ ಅನುಕೂಲ ಉಂಟಾಗಲಿದೆ. ಉದ್ಯೋಗದಲ್ಲಿ ವದಂತಿಗೆ ಕಿವಿಗೊಡದಿರಿ, ಸಹೋದ್ಯೋಗಿಗಳು ದಾರಿ ತಪ್ಪಿಸಲಿದ್ದಾರೆ.

ಪದಬಂಧ 5357

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಜೀರುಗುಣಿಕೆಯ ಹಗ್ಗ (3)
2.ಕತ್ತಲೆಯನ್ನು ಕಳೆಯುವವನು (4)
4.ದಾರ ಹಿಡಿದುಕೊಂಡಿರುವ ಬಾಧ್ಯಸ್ಥ (4)
6.ಸಂಬಳವಲ್ಲ!ಮೇಲು ಸಂಪಾದನೆ! (3)
7.ಉಲ್ಟಾಪಲ್ಟಾ ಕಾಣುತ್ತಿರುವ ನೊಸಲು (2)
9.ಕಚೇರಿಯ ನೌಕರ ವರ್ಗ (3)
11.ಹವಿಸ್ಸು ನೀಡುವಾಗ ಕಾಣಿಸಿದ ಆಕಳು (2)
13.ಪ್ರಾಣಿಗಳು ಅರ್ಧ ತಿಂದುದನ್ನು ಪುನಃನುರಿಸಿ ತಿನ್ನುವಿಕೆ (3)
14.ಸಂಪೂರ್ಣವಾದುದನ್ನು ಹೀಗೆನ್ನಿ (4)
16.ನಡುವೆ ಧ್ವನಿಯಿದ್ದಾಗಿನ ಆಶ್ವಾಸನೆ! (4)
17.ಅಂಬು ಬಿದ್ದಿರುವ ಸಮುದ್ರ (3)

ಮೇಲಿಂದ ಕೆಳಕ್ಕೆ
1.ದಾಹವಿದ್ದಾಗ ನೀಡಿದ ದೃಷ್ಟಾಂತ (5)
2.ಅತ್ತಿತ್ತ ನೋಡುತ್ತಲೇ ಕಾಣಿಸಿದ ಅಂಡ! (2)
3.ಲಲಾಟಲಿಖಿತವಿದು (5)
5.ರಾಕ್ಷಸಿ ಇಲ್ಲಿದ್ದಾಳೆ (3)
8.ಹರನಲ್ಲೇ ಅಡಗಿದ್ದಾನೆ ಈ ಠಕ್ಕ! (5)
10.ಸೂರ್ಯನ ಇನ್ನೊಂದು ಹೆಸರು (3)
12.ಒಳ್ಳೆಯ ಅವಕಾಶ (5)
15.ಚಿನ್ನ ಬೆಳ್ಳಿ ಮುಂತಾದ ಲೋಹಗಳನ್ನು ಕರಗಿಸುವ ಪಾತ್ರೆ (2)



5356ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುಸ್ವಾರ 3.ಗರ್ಭಕೋಶ
5.ತಕ್ಕಡಿ 6.ನೆನಪು
8.ಬಸದಿ
9.ಸಕಲ 10.ವರಾಹ
12.ಪದವಿ 14.ಚಿರಂಜೀವಿ
15.ದಸಕತ್ತು

ಮೇಲಿಂದ ಕೆಳಕ್ಕೆ:
1.ಅರಮನೆ 2.ರಜತ
3.ಗರಡಿ 4.ಶತಪದಿ
7.ಪುಕ್ಕಲ 8.ಬಡವ
9.ಸವ್ಯಸಾಚಿ 11.ಹಕೀಕತ್ತು
12.ಪಲ್ಲವಿ 13.ವಿವಾದ

ಸುಡೊಕು 5743

2				9		7		
	1		4		7		5	2
		9		5			6	
	9			2		8		6
3		7	1		6			
	2			7		1		4
1			9	8			4	
	7					2		8
8		2		1				

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5742 ಸುಡೊಕು

9	6	4	1	3	8	7	2	5
1	5	3	7	6	2	8	9	4
2	8	7	5	4	9	1	6	3
3	9	1	2	7	4	6	5	8
6	2	5	9	8	3	4	7	1
7	4	8	6	1	5	2	3	9
5	7	2	8	9	1	3	4	6
4	1	9	3	2	6	5	8	7
8	3	6	4	5	7	9	1	2

ನ್ಯಾಟೊ ಪ್ಲಸ್‌ಗೆ ಭಾರತ: ಮಸೂದೆ ಮಂಡನೆಗೆ ಸಿದ್ಧತೆ

ವಾಷಿಂಗ್ಟನ್ (ಪಿಟಿಐ): ಭಾರತವನ್ನು ನ್ಯಾಟೊ ಪ್ಲಸ್ ಗುಂಪಿನ ಭಾಗವನ್ನಾಗಿಸಲು ಸೆನೆಟ್‌ನಲ್ಲಿ ಮಸೂದೆ ಮಂಡಿಸಲು ಯೋಜಿಸಿರುವುದಾಗಿ ಅಮೆರಿಕದ ಪ್ರಭಾವಿ ಸೆನೆಟರ್‌ಗಳು ಹೇಳಿದ್ದಾರೆ.

ಹೆಚ್ಚುತ್ತಿರುವ ಚೀನಾದ ಸವಾಲುಗಳನ್ನು ಮೆಟ್ಟಿನಿಲ್ಲಲು ಭಾರತಕ್ಕೆ ಅಮೆರಿಕದ ಅತ್ಯುನ್ನತ ತಂತ್ರಜ್ಞಾನ ಮತ್ತು ರಕ್ಷಣಾ ಸಾಧನಗಳನ್ನು ಯಾವುದೇ ಅಧಿಕಾರಶಾಹಿಯ ಅಡೆತಡೆ ಇಲ್ಲದೆ ವರ್ಗಾಯಿಸಲು ಈ ಮಸೂದೆಯಿಂದ ಅವಕಾಶ ಸಿಗಲಿದೆ ಎಂದು ಅವರು ಹೇಳಿದ್ದಾರೆ.

'ಅಮೆರಿಕದ ರಕ್ಷಣಾ ಸಂಬಂಧಗಳ ಒಪ್ಪಂದ ಜತೆಗೆ ಭಾರತವನ್ನು ರಕ್ಷಣಾ ಕ್ಷೇತ್ರದಲ್ಲಿ ಮೇಲ್ದರ್ಜೆಗೇರಿಸುವ ರಕ್ಷಣಾ ಅಧಿಕಾರ ಕಾಯ್ದೆಗೆ ತಿದ್ದುಪಡಿ ತರಲಾದ ಸ್ವತಂತ್ರ ಮಸೂದೆಯನ್ನು ಈ ವಾರ ಮಂಡಿಸಲಾಗುವುದು' ಎಂದು ಸೆನೆಟರ್ ಮಾರ್ಕ್ ವಾರ್ನರ್ ಸುದ್ದಿಗಾರರಿಗೆ ತಿಳಿಸಿದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

6th YEAR REMEMBRANCE

Dr. Mrs. M.P. SHREE
DOB: 16.02.1954 • DOD: 22.06.2017
Retd. Prof. (Plant Pathology), Dept. of Sericulture & Life Sciences, Bangalore University, Bangalore - 54.
Though Your presence is virtual, memories that you have left are immortal.
H.A. Hareesha & H.Pramodini: 97403 34325

10ನೇ ವರ್ಷದ ಪುಣ್ಯ ಸ್ಮರಣೆ

ಪ್ರೊ.ಕೆ.ಎಸ್.ರತ್ನಕುಮಾರಿ.
24-04-1954 - 22-06-2013
ನಿವೃತ್ತ ಸಮಾಜಶಾಸ್ತ್ರ ಪ್ರಾಧ್ಯಾಪಕರು,
ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜು,ಮಲ್ಲೇಶ್ವರ.
ನೀವು ನಮ್ಮನ್ನಗಲಿ ಇಂದಿಗೆ ಒಂದು ದಶಕವಾಗಿದ್ದು ನಿಮ್ಮ ನೆನಪಿಲ್ಲದ ದಿನವೇ ಇಲ್ಲ.ಅನುದಿನ ನಿಮ್ಮನ್ನು ಸ್ಮರಿಸುತ್ತಾ ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಸದಾ ಪ್ರಾರ್ಥಿಸುವ ಹಾಗೂ
ತಮ್ಮ ಸ್ಮರಣೆಯಲ್ಲಿರುವ :
ಪತಿ–ಪ್ರೊ.ವಿ.ಮುನಿಯಪ್ಪ,
ನಿವೃತ್ತ ಪ್ರಾಂಶುಪಾಲರು, ಸ.ಪ್ರ.ದ.ಕಾಲೇಜು
ಮಕ್ಕಳು–ಎಂ.ಭರತ್,ಡಾ|| ಬೀನಾ,ಡಾ|| ಬೃಂದಾ.
ಅಳಿಯಂದಿರು–ಅಲ್ವಿನ್ ರಿತೇಶ್ ,ನಾಗಭೂಷಣ್.
ಮೊಮ್ಮಕ್ಕಳು–ಉನ್ನತಿ ಮತ್ತು ಉತ್ಸವಿ ರಿತೇಶ್.

ಭಾರತದ ಸಾಧನೆ ತೆರೆದಿಟ್ಟ ಮೋದಿ

ಅಮೆರಿಕದ ಗಣ್ಯರೊಂದಿಗೆ ಮಾತುಕತೆ • ಆಧಾರ್, ಡಿಜಿಲಾಕರ್, ಬಾಹ್ಯಾಕಾಶ ನೀತಿಯ ವಿವರಣೆ

ನ್ಯೂಯಾರ್ಕ್(ಪಿಟಿಐ): ಮೂರು ದಿನಗಳ ಅಮೆರಿಕ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ವಿವಿಧ ಕ್ಷೇತ್ರಗಳ ಗಣ್ಯರೊಂದಿಗೆ ಬುಧವಾರ ಮಾತುಕತೆ ನಡೆಸಿದರು. ಆರ್ಥಿಕತೆ, ಶಿಕ್ಷಣ, ಬಾಹ್ಯಾಕಾಶ ಹಾಗೂ ವಾಣಿಜ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಭಾರತ ಮಾಡಿರುವ ಸಾಧನೆಯನ್ನು ವಿವರಿಸಿದರು.

ಖ್ಯಾತ ಹೂಡಿಕೆದಾರ ರೇ ಡಲಿಯೊ ಅವರೊಂದಿಗೆ ಮಾತುಕತೆ ನಡೆಸಿದ ಮೋದಿ, 'ದೇಶದ ಆರ್ಥಿಕ ಪ್ರಗತಿಗೆ ವೇಗ ನೀಡುವ ನಿಟ್ಟಿನಲ್ಲಿ ಹಲವಾರು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ' ಎಂದು ವಿವರಿಸಿದ್ದಾರೆ.

'ಹೂಡಿಕೆಗೆ ಸಂಬಂಧಿಸಿ ಹಲವಾರು ಕಾನೂನುಗಳನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕಾಗುತ್ತಿತ್ತು. ಇಂಥ ಕಠಿಣ ಹಾಗೂ ಅನಗತ್ಯವಾಗಿದ್ದ ಕಾನೂನುಗಳನ್ನು ಕಡಿಮೆ ಮಾಡಲಾಗಿದೆ' ಎಂದು ವಿವರಿಸಿದ ಮೋದಿ, ಭಾರತದಲ್ಲಿ ಹೂಡಿಕೆ ಮಾಡುವಂತೆ ಡಲಿಯೊ ಅವರಿಗೆ ಆಹ್ವಾನ ನೀಡಿದರು' ಎಂದು ವಿದೇಶಾಂಗ ಸಚಿವಾಲಯ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನೊಬೆಲ್ ಪ್ರಶಸ್ತಿ ಪುರಸ್ಕೃತ ಅರ್ಥಶಾಸ್ತ್ರಜ್ಞ ಪ್ರೊ.ಪಾಲ್ ರೋಮರ್ ಅವರೊಂದಿಗೆ ನಡೆಸಿದ ಚರ್ಚೆ ವೇಳೆ, ಆಧಾರ್ ಕಾರ್ಡ್, ಡಿಜಿಲಾಕರ್‌ನಂತಹ ಸೌಲಭ್ಯಗಳ ಕುರಿತು ವಿವರಿಸಿದರು. ದೇಶದ ನಗರ ಪ್ರದೇಶಗಳ ಅಭಿವೃದ್ಧಿಗೆ ಕೈಗೊಂಡ ಕ್ರಮಗಳ ಕುರಿತು ಮಾಹಿತಿ ನೀಡಿದರು ಎಂದು ಪ್ರಕಟಣೆ ತಿಳಿಸಿದೆ.

ಖಭೌತವಿಜ್ಞಾನಿ, ವಿಜ್ಞಾನ ಸಂವಹನಕಾರ ನೀಲ್ ಡಿ 'ಗ್ರೇಸ್ ಟೈಸನ್ ಅವರೊಂದಿಗೆ ಚರ್ಚೆ ನಡೆಸಿದ ಪ್ರಧಾನಿ, ಯುವ ಜನತೆಯಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ಕುರಿತು ಚರ್ಚಿಸಿದರು.

'ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತದ ಸಾಧನೆ ಕುರಿತು ಚರ್ಚಿಸಿದ ಮೋದಿ, ನೂತನ ಬಾಹ್ಯಾಕಾಶ ನೀತಿಯಡಿ ಈ ಕ್ಷೇತ್ರದಲ್ಲಿ ಖಾಸಗಿ ಮತ್ತು ಶೈಕ್ಷಣಿಕ ಸಹಭಾಗಿತ್ವಕ್ಕೆ ಇರುವ ಅವಕಾಶಗಳ ಕುರಿತು ವಿವರಿಸಿದರು'.

ಭೇಟಿ: ವಿವಿಧ ಕ್ಷೇತ್ರಗಳ ಗಣ್ಯರು ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡಿ ಚರ್ಚಿಸಿದರು. ಬೌದ್ಧ ವಿದ್ವಾಂಸ ಹಾಗೂ ಪದ್ಮಶ್ರೀ ಪುರಸ್ಕೃತ ಪ್ರೊ. ರಾಬರ್ಟ್ ಥರ್ಮನ್, ಖ್ಯಾತ ಗಣಿತ ತಜ್ಞ, ಲೇಖಕ ಪ್ರೊ.ನಸ್ಸೀಮ್ ನಿಕೋಲಾಸ್ ತಲೇಬ್ ಅವರೊಂದಿಗೆ ಮಾತಕತೆ ನಡೆಸಿದರು.

'ಅಬಂಡನ್ಸ್ ಇನ್ ಮಿಲೆಟ್ಸ್' ಗೀತೆ ಖ್ಯಾತಿಯ, ಗ್ರ್ಯಾಮಿ ಪ್ರಶಸ್ತಿ ವಿಜೇತೆ ಫಲ್ಗುಣಿ ಶಾ ಅವರನ್ನು ಮೋದಿ ಭೇಟಿ ಮಾಡಿದರು. 'ಸಂಗೀತದ ಮೂಲಕ ಭಾರತ ಮತ್ತು ಅಮೆರಿಕ ಜನರನ್ನು ಒಂದುಗೂಡಿಸಿದ ಶಾ ಅವರ ಕಾರ್ಯವನ್ನು ಮೋದಿ ಶ್ಲಾಘಿಸಿದರು' ಎಂದು ಪ್ರಕಟಣೆ ತಿಳಿಸಿದೆ.

ಶಿಕ್ಷಣ, ಕೃಷಿ, ಮಾರುಕಟ್ಟೆ, ಎಂಜಿನಿಯರಿಂಗ್, ಆರೋಗ್ಯ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳ ತಜ್ಞರೊಂದಿಗೂ ಮೋದಿ ಸಭೆ ನಡೆಸಿದರು. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಡಿ ಶೈಕ್ಷಣಿಕ ವಿನಿಮಯ ಕಾರ್ಯಕ್ರಮ ಕುರಿತು ಚರ್ಚಿಸಿದರು ಎಂದೂ ಸಚಿವಾಲಯದ ಪ್ರಕಟಣೆ ತಿಳಿಸಿದೆ.



ಅಮೆರಿಕದ ಖ್ಯಾತ ಹೂಡಿಕೆದಾರ ರೇ ಡಲಿಯೊ ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ನ್ಯೂಯಾರ್ಕ್‌ನಲ್ಲಿ ಮಾತುಕತೆ ನಡೆಸಿದರು —ಪಿಟಿಐ ಚಿತ್ರ

'ಪ್ರಮುಖ ಪಾಲುದಾರ ದೇಶ'

ವಾಷಿಂಗ್ಟನ್: 'ಬರುವ ದಿನಗಳಲ್ಲಿ ಭಾರತವು ನಮ್ಮ ಪ್ರಮುಖ ಪಾಲುದಾರ ದೇಶವಾಗಲಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಈ ಭೇಟಿಯು ಉಭಯ ದೇಶಗಳ ನಡುವಿನ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಲಿದೆ' ಎಂದು ಶ್ವೇತಭವನ ಹೇಳಿದೆ.

'ಭಾರತವು ಜಾಗತಿಕವಾಗಿ ಮಹತ್ವದ ಪಾತ್ರ ವಹಿಸುತ್ತಿದೆ. ಹಿಂದೂಮಹಾಸಾಗರ–ಪೆಸಿಫಿಕ್ ಪ್ರದೇಶ ರಕ್ಷಣೆ, ಕ್ವಾಡ್‌ಗೆ ಸಂಬಂಧಿಸಿ ತನ್ನ ಬದ್ಧತೆಯನ್ನು ಪ್ರದರ್ಶಿಸುತ್ತಿದೆ. ಆ ಮೂಲಕ ಮುಕ್ತ, ಸ್ವತಂತ್ರ ಹಾಗೂ ನಿಯಮಗಳನ್ನು ಆಧರಿಸಿದ ಜಾಗತಿಕ ವ್ಯವಸ್ಥೆಯನ್ನು ರೂಪಿಸುವ ಪ್ರಯತ್ನದಲ್ಲಿ ಅಮೆರಿಕದೊಂದಿಗೆ ಕೈಜೋಡಿಸುವ ಇಚ್ಛೆ ವ್ಯಕ್ತಪಡಿಸಿದೆ' ಎಂದು ಕಾರ್ಯತಂತ್ರ ಸಂವಹನ ಕುರಿತ ರಾಷ್ಟ್ರೀಯ ಭದ್ರತಾ ಮಂಡಳಿಯ (ಎನ್‌ಎಸ್‌ಸಿಎಸ್‌ಸಿ) ಸಮನ್ವಯಕಾರ ಜಾನ್ ಕಿರ್ಬಿ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

'ಕೃತಕ ಬುದ್ಧಿಮತ್ತೆ, ಕ್ವಾಂಟಮ್ ಕಂಪ್ಯೂಟಿಂಗ್, ಸುಲಲಿತ ಸಾಗಾಣಿಕೆ ವ್ಯವಸ್ಥೆ, ಸೆಮಿಕಂಡಕ್ಟರ್‌ಗಳು ಸೇರಿದಂತೆ ವಿವಿಧ ತಂತ್ರಜ್ಞಾನ/ಕ್ಷೇತ್ರಗಳ ಭವಿಷ್ಯದ ಬಗ್ಗೆ ಜಗತ್ತೇ ಮಾತನಾಡುತ್ತಿದೆ. ಈ ವಿಚಾರಗಳಲ್ಲಿ ಭಾರತಕ್ಕಿಂತ ಹೆಚ್ಚು ಪರಿಣಾಮಕಾರಿ ಪಾಲುದಾರ ದೇಶ ಮತ್ತೊಂದಿಲ್ಲ' ಎಂದು ಹೇಳಿದ್ದಾರೆ.

'ಭಾರತದಲ್ಲಿ ಪ್ರಜಾತಾಂತ್ರಿಕ ಮೌಲ್ಯ ಕುಸಿತ': ಪ್ರಸ್ತಾಪ ನಿರೀಕ್ಷೆ

ವಾಷಿಂಗ್ಟನ್: 'ಪ್ರಧಾನಿ ನರೇಂದ್ರ ಮೋದಿ ಜೊತೆಗಿನ ಮಾತುಕತೆ ವೇಳೆ, ಭಾರತದಲ್ಲಿ ಪ್ರಜಾತಾಂತ್ರಿಕ ಮೌಲ್ಯಗಳು ಕುಸಿಯುತ್ತಿರುವ ಕುರಿತು ಅಧ್ಯಕ್ಷ ಜೋ ಬೈಡನ್ ಪ್ರಸ್ತಾಪಿಸುವ ನಿರೀಕ್ಷೆ ಇದೆ. ಆದರೆ, ಈ ವಿಚಾರಕ್ಕೆ ಹೆಚ್ಚು ಒತ್ತು ನೀಡುವುದಿಲ್ಲ' ಎಂದು ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸಲ್ಲಿವನ್ ಹೇಳಿದ್ದಾರೆ.

ಅಮೆರಿಕ ಪ್ರವಾಸದಲ್ಲಿರುವ ಮೋದಿ ಹಾಗೂ ಅಧ್ಯಕ್ಷ ಬೈಡನ್ ನಡುವಿನ ಮಾತುಕತೆ ವೇಳೆ ಚರ್ಚೆಗೆ ಬರುವ ವಿಷಯಗಳ ಕುರಿತು ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಜೇಕ್ ಸಲ್ಲಿವನ್

'ಪತ್ರಿಕಾರಂಗ, ಧಾರ್ಮಿಕ ಹಾಗೂ ಇತರ ಸ್ವಾತಂತ್ರ್ಯಗಳಿಗೆ ಎದುರಾಗುವ ಸವಾಲುಗಳನ್ನು ಅಮೆರಿಕ ಗಮನಿಸುತ್ತದೆ. ಅದರಲ್ಲೂ, ಭಾರತದಲ್ಲಿನ ಪ್ರಜಾಸತ್ತಾತ್ಮಕ ಸಂಸ್ಥೆಗಳು ಹಾಗೂ ರಾಜಕೀಯ ಕುರಿತು ಪ್ರಶ್ನೆಗಳು ಉದ್ಭವಿಸಿದಾಗ, ಅದರ ಬಗ್ಗೆ ಭಾರತೀಯರೇ ನಿರ್ಧರಿಸಬೇಕಾಗುತ್ತದೆ. ಈ ವಿಚಾರವಾಗಿ ಅಮೆರಿಕ ನಿರ್ಧಾರ ತೆಗೆದುಕೊಳ್ಳುವುದಿಲ್ಲ' ಎಂದು ಹೇಳಿದರು.

ಭಾರತದಲ್ಲಿ ಮಾನವ ಹಕ್ಕುಗಳ ಸ್ಥಿತಿ ಕುರಿತು ಮೋದಿ ಜೊತೆಗಿನ ಸಭೆಯಲ್ಲಿ ಪ್ರಸ್ತಾಪಿಸುವಂತೆ ಡೆಮಾಕ್ರಟ್ ಪಕ್ಷದ ನಾಯಕರು ಬೈಡನ್ ಮೇಲೆ ಒತ್ತಡ ಹೇರಿರುವ ಹಿನ್ನೆಲೆಯಲ್ಲಿ ಸಲ್ಲಿವನ್ ಈ ಮಾಹಿತಿ ನೀಡಿದ್ದಾರೆ.

'ಹಿಂದೂಮಹಾಸಾಗರ–ಪೆಸಿಫಿಕ್ ಪ್ರದೇಶದಲ್ಲಿ ಚೀನಾ ತನ್ನ ಮಿಲಿಟರಿ ಪ್ರಾಬಲ್ಯ ಹೆಚ್ಚಿಸಿಕೊಳ್ಳುತ್ತಿದೆ. ಈ ವಿಷಯವನ್ನು ಅಮೆರಿಕ ಹಾಗೂ ಭಾರತ ಗಂಭೀರವಾಗಿಯೇ ಪರಿಗಣಿಸಿವೆ. ಆದರೆ, ಮೋದಿ ಅವರ ಭೇಟಿಗೂ, ಈ ವಿಷಯಕ್ಕೂ ಸಂಬಂಧ ಇಲ್ಲ' ಎಂದರು.

'ಮಿಲಿಟರಿ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಚೀನಾದ ಪಾತ್ರ ಕುರಿತು ಉಭಯ ನಾಯಕರ ಮಾತುಕತೆ ವೇಳೆ ಚರ್ಚೆ ನಡೆಯಲಿದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಉಕ್ರೇನ್ ಮೇಲಿನ ರಷ್ಯಾ ಯುದ್ಧವನ್ನು ಮೋದಿ ಬೆಂಬಲಿಸಿಲ್ಲ. ಆದರೆ, ದೊಡ್ಡ ಪ್ರಮಾಣದಲ್ಲಿ ರಷ್ಯಾ ತೈಲವನ್ನು ಖರೀದಿಸುತ್ತಿದೆ. ಹೀಗಾಗಿ, ವರ್ಷದ ಕೊನೆಗೆ ಜಿ–20 ಶೃಂಗಸಭೆ ನಡೆಯಲಿದ್ದು, ರಷ್ಯಾ ಮತ್ತು ಉಕ್ರೇನ್ ಬಿಕ್ಕಟ್ಟು ಕುರಿತ ಚರ್ಚೆಯನ್ನು ಬೈಡನ್ ಮುನ್ನೆಲೆಗೆ ತರಲಿದ್ದಾರೆ' ಎಂದು ಸಲ್ಲಿವನ್ ತಿಳಿಸಿದರು.

ಯೋಗಕ್ಕೆ ಹಕ್ಕುಸ್ವಾಮ್ಯದ ಹಂಗಿಲ್ಲ: ಪ್ರಧಾನಿ

ವಿಶ್ವಸಂಸ್ಥೆ (ಪಿಟಿಐ): ವಿಶ್ವಸಂಸ್ಥೆಯ ಕೇಂದ್ರ ಕಚೇರಿ ಆವರಣದ ಉತ್ತರದಲ್ಲಿರುವ ವಿಶಾಲವಾದ ಹಸಿರು ಹುಲ್ಲುಹಾಸು 9ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಗೆ ಬುಧವಾರ ಸಾಕ್ಷಿಯಾಯಿತು.

ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳು, ರಾಜತಾಂತ್ರಿಕರು, ಅಧಿಕಾರಿಗಳು ಹಾಗೂ ವಿಶೇಷ ಆಹ್ವಾನಿತರು ಪಾಲ್ಗೊಂಡಿದ್ದ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಪ್ರಧಾನಿ ನರೇಂದ್ರ ಮೋದಿ ಮುನ್ನಡೆಸಿದರು.

ನಂತರ ನಡೆದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಮೋದಿ, 'ಯೋಗ ಎಲ್ಲರಿಗೂ ಸೇರಿದ್ದು. ಇದಕ್ಕೆ ಹಕ್ಕುಸ್ವಾಮ್ಯಗಳ ಹಂಗಿಲ್ಲ' ಎಂದರು.

'ಬಹಳ ಹಳೆಯ ಪರಂಪರೆಯಾಗಿರುವ ಯೋಗ ಭಾರತದಲ್ಲಿ ಉಗಮವಾಗಿದೆ. ಇದಕ್ಕೆ ಯಾವುದೇ ಏಕಸ್ವಾಮ್ಯದ ಹಂಗಿಲ್ಲ, ಇದನ್ನು ಕಲಿಯಲು ಕಪ್ಪಕಾಣಿಕೆ ನೀಡಬೇಕಿಲ್ಲ. ಯಾವುದೇ ವಯಸ್ಸಿನವರೂ ಇದನ್ನು ಅಳವಡಿಸಿಕೊಳ್ಳಬಹುದು. ಯಾವ ಸ್ಥಳದಲ್ಲಿಯೂ ಮಾಡಬಹುದಾದ ಯೋಗವು ನಿಜವಾಗಿಯೂ ಸಾರ್ವತ್ರಿಕ' ಎಂದು ಹೇಳಿದರು.

'ಯೋಗದ ಅರ್ಥ ಏಕತೆ ಮೂಡಿಸುವುದು ಎಂದೂ ಆಗುತ್ತದೆ. ಪ್ರತಿ ವರ್ಷ ಜೂನ್ 21ರಂದು ಅಂತರರಾಷ್ಟ್ರೀಯ ಯೋಗ ದಿನ ಆಚರಿಸುವ ಕುರಿತು 9 ವರ್ಷಗಳ ಹಿಂದೆ ಇದೇ ಸ್ಥಳದಲ್ಲಿ ನಾನು ಪ್ರಸ್ತಾವ ಸಲ್ಲಿಸಿದ್ದು ನೆನಪಿದೆ. ನನ್ನ ಈ ಆಲೋಚನೆಗೆ ಈಗ ಇಡೀ ವಿಶ್ವವೇ ಒಟ್ಟುಗೂಡಿ ಬೆಂಬಲವಾಗಿ ನಿಂತಿದೆ' ಎಂದರು.

ಇದಕ್ಕೂ ಮುನ್ನ ಅವರು, ಆವರಣದಲ್ಲಿ ಸ್ಥಾಪಿಸಲಾಗಿರುವ ಮಹಾತ್ಮ ಗಾಂಧಿ ಪುತ್ಥಳಿಗೆ ಗೌರವ ಸಲ್ಲಿಸಿದರು. ಭಾರತವು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಅಧ್ಯಕ್ಷ ಸ್ಥಾನದಲ್ಲಿದ್ದಾಗ ಕಳೆದ ಡಿಸೆಂಬರ್‌ನಲ್ಲಿ ಈ ಪುತ್ಥಳಿಯನ್ನು ಸ್ಥಾಪಿಸಲಾಗಿತ್ತು.

ಯೋಗ ಮಾಡುವವರಿಗಾಗಿ ನೂರಕ್ಕೂ ಅಧಿಕ ಹಳದಿ ಬಣ್ಣದ ಮ್ಯಾಟ್‌ಗಳನ್ನು ಹಾಕಲಾಗಿತ್ತು.

> **ಜನರನ್ನು, ದೇಹ ಮತ್ತು ಮನಸ್ಸು, ಮನುಕುಲ ಮತ್ತು ನಿಸರ್ಗವನ್ನು ಯೋಗ ಒಂದುಗೂಡಿಸುತ್ತದೆ. ವಿಶ್ವದ ಎಲ್ಲರಿಗೂ ಶಕ್ತಿ, ಸೌಹಾರ್ದ, ಶಾಂತಿಯ ಸೆಲೆಯಾಗಿದೆ**
> **ಆಂಟೋನಿಯೊ ಗುಟೆರಸ್,** ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ

> **ಇಲ್ಲಿ ಮುಕ್ತ ಹಾಗೂ ಎಲ್ಲರನ್ನೂ ಒಳಗೊಳ್ಳುವ ಭಾವನೆ ಸ್ಫುರಿಸುತ್ತಿದೆ. ಈ ಕಾರ್ಯಕ್ರಮದಲ್ಲಿ ಭಾಗಿಯಾಗಿರುವುದೇ ಅದ್ಭುತ ಅನುಭೂತಿ ನೀಡುತ್ತಿದೆ**
> **ರಿಚರ್ಡ್ ಗೇರ್,** ಹಾಲಿವುಡ್ ನಟ

ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯನ್ನು ತೋರಿಸುವ ವಿಡಿಯೊಗಳನ್ನು ಪ್ರದರ್ಶಿಸಲಾಗಿತ್ತು. ಬೃಹತ್ ಎಲ್‌ಇಡಿ ಪರದೆಗಳಲ್ಲಿ ಪ್ರದರ್ಶನಗೊಂಡ ದೃಶ್ಯಗಳನ್ನು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದವರು ಕಣ್ತುಂಬಿಕೊಂಡರು.

ಗಿನ್ನಿಸ್ ದಾಖಲೆ (ನ್ಯೂಯಾರ್ಕ್ ವರದಿ): ವಿಶ್ವಸಂಸ್ಥೆಯ ಪ್ರಧಾನ ಕಚೇರಿಯ ಉತ್ತರ ದಿಕ್ಕಿನ ಹುಲ್ಲು ಹಾಸಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಬುಧವಾರ ನಡೆದ ವಿಶ್ವ ಯೋಗ ದಿನದ ಆಚರಣೆಯಲ್ಲಿ ಅತಿ ಹೆಚ್ಚು ದೇಶಗಳ ಪ್ರಜೆಗಳು ಭಾಗವಹಿಸುವ ಮೂಲಕ ಗಿನ್ನಿಸ್ ವಿಶ್ವ ದಾಖಲೆಯೊಂದು ನಿರ್ಮಾಣವಾಗಿದೆ.

ಅಮೆರಿಕ ಅಧ್ಯಕ್ಷ ಜೋ ಬೈಡನ್ ಮತ್ತು ಜಿಲ್ ಬೈಡನ್ ದಂಪತಿಯ ಆಹ್ವಾನದ ಮೇರೆಗೆ ಪ್ರಧಾನಿ ಮೋದಿ ಅವರು ಅಮೆರಿಕ ಪ್ರವಾಸ ಕೈಗೊಂಡಿದ್ದಾರೆ. ವಿಶ್ವ ಯೋಗ ದಿನದ 9ನೇ ವಾರ್ಷಿಕೋತ್ಸವದ ಸಂಸ್ಮರಣೆಯ ಅಂಗವಾಗಿ ವಿಶ್ವಸಂಸ್ಥೆಯ ಕೇಂದ್ರ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಐತಿಹಾಸಿಕ ಯೋಗ ಪ್ರದರ್ಶನದಲ್ಲಿ ವಿಶ್ವಸಂಸ್ಥೆಯ ಉನ್ನತ ಅಧಿಕಾರಿಗಳು, ರಾಜತಾಂತ್ರಿಕರು, ವಿವಿಧ ದೇಶದ ಗಣ್ಯರು ಭಾಗವಹಿಸಿದ್ದರು.

ಭಾರತದಲ್ಲಿ ಗಮನಾರ್ಹ ಹೂಡಿಕೆ: ಟೆಸ್ಲಾ

ನವದೆಹಲಿ (ಪಿಟಿಐ): ವಿದ್ಯುತ್ ಚಾಲಿತ (ಇ.ವಿ) ಕಾರುಗಳ ತಯಾರಿಕೆಯಲ್ಲಿ ಜಗತ್ತಿನ ಅತಿದೊಡ್ಡ ಕಂಪನಿಯಾಗಿರುವ ಟೆಸ್ಲಾ ಭಾರತದಲ್ಲಿ ಗಮನಾರ್ಹ ಪ್ರಮಾಣದಲ್ಲಿ ಹೂಡಿಕೆ ಮಾಡುವ ಆಲೋಚನೆ ಹೊಂದಿದೆ ಎಂದು ಕಂಪನಿಯ ಮುಖ್ಯಸ್ಥ ಎಲಾನ್ ಮಸ್ಕ್ ಹೇಳಿದ್ದಾರೆ.

ಅಮೆರಿಕ ಪ್ರವಾಸದಲ್ಲಿ ಇರುವ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ ನಂತರ ಮಸ್ಕ್ ಅವರು ತಾವು 2024ರಲ್ಲಿ ಭಾರತಕ್ಕೆ ಭೇಟಿ ನೀಡುವ ಇರಾದೆ ಹೊಂದಿರುವುದಾಗಿ ತಿಳಿಸಿದ್ದಾರೆ. 'ಟೆಸ್ಲಾ ಭಾರತಕ್ಕೆ ಬರುತ್ತದೆ ಎಂಬ ವಿಚಾರದಲ್ಲಿ ನನಗೆ ವಿಶ್ವಾಸವಿದೆ. ಸಾಧ್ಯವಾದಷ್ಟು ಬೇಗ ಇದನ್ನು ಮಾಡಲಾಗುತ್ತದೆ' ಎಂದು ಮಸ್ಕ್ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಮಸ್ಕ್ ಅವರು ಟೆಸ್ಲಾ ಕಂಪನಿಯ ಕಾರ್ಖಾನೆಯನ್ನು ಆರಂಭಿಸಲು ಫ್ರಾನ್ಸ್, ದಕ್ಷಿಣ ಕೊರಿಯಾ ಮತ್ತು ಇಂಡೊನೇಷ್ಯಾದಲ್ಲಿ ಸ್ಥಳ ಹುಡುಕುತ್ತಿದ್ದಾರೆ ಎನ್ನಲಾಗಿದೆ.

> **ನಾನು ನರೇಂದ್ರ ಮೋದಿ ಅವರ ಅಭಿಮಾನಿ. ಭಾರತದಲ್ಲಿ ಗಮನಾರ್ಹ ಪ್ರಮಾಣದ ಹೂಡಿಕೆಗೆ ನಮ್ಮ ಮನವೊಲಿಸುತ್ತಿರುವ ಮೋದಿ ಅವರು ದೇಶದ ಬಗ್ಗೆ ಕಾಳಜಿ ಹೊಂದಿದ್ದಾರೆ.**
> **ಎಲಾನ್ ಮಸ್ಕ್,** ಟೆಸ್ಲಾ ಮುಖ್ಯಸ್ಥ

'ಇಂಧನದಿಂದ ಅಧ್ಯಾತ್ಮದ ವರೆಗೆ ನಾವು ಹಲವು ವಿಷಯಗಳ ಬಗ್ಗೆ ಮಾತುಕತೆ ನಡೆಸಿದೆವು' ಎಂದು ಮೋದಿ ಅವರು ಮಸ್ಕ್ ಅವರನ್ನು ಭೇಟಿ ಮಾಡಿದ ನಂತರ ಟ್ವೀಟ್ ಮಾಡಿದ್ದಾರೆ. ಟೆಸ್ಲಾ ಕಂಪನಿಯು ಭಾರತದ ಅಧಿಕಾರಿಗಳ ಜೊತೆ ತಿಂಗಳುಗಳಿಂದ ಮಾತುಕತೆಯಲ್ಲಿ ತೊಡಗಿದೆ. ಕಂಪನಿಯು ಭಾರತದಲ್ಲಿ ಟೆಸ್ಲಾ ಇಂಡಿಯಾ ಮೋಟರ್ಸ್ ಆ್ಯಂಡ್ ಎನರ್ಜಿ ಪ್ರೈ.ಲಿ. ಹೆಸರಿನಲ್ಲಿ ನೋಂದಣಿ ಮಾಡಿಕೊಂಡಿದೆ. ಕಂಪನಿಯು ಭಾರತದಲ್ಲಿ ತನ್ನ ವಾಹನಗಳ ಪರೀಕ್ಷೆಯನ್ನು ಕೂಡ ನಡೆಸಿದೆ.

ಆದರೆ ಕೇಂದ್ರ ಸರ್ಕಾರವು, ವಿದ್ಯುತ್ ಚಾಲಿತ ವಾಹನಗಳು ಮತ್ತು ಅದರ ಬಿಡಿಭಾಗಗಳ ಮೇಲಿನ ಆಮದು ಸುಂಕವನ್ನು ಕಡಿಮೆ ಮಾಡಬೇಕು ಎಂದು ಕೇಳುತ್ತಿದೆ. ಇ.ವಿ. ತಯಾರಕರು ಭಾರತದಲ್ಲಿ ತಯಾರಿಕೆಯನ್ನು ಆರಂಭಿಸಿದ ನಂತರದಲ್ಲಿ ತೆರಿಗೆ ವಿನಾಯಿತಿಗಳ ಬಗ್ಗೆ ಪರಿಶೀಲಿಸಬಹುದು ಎಂದು ಕೇಂದ್ರ ಹೇಳಿದೆ.

ಭಾರತದಲ್ಲಿ ಭಾರಿ ಪ್ರಮಾಣದಲ್ಲಿ ಹಣ ತೊಡಗಿಸುವ ಮೊದಲು, ಸಂಪೂರ್ಣವಾಗಿ ಸಿದ್ಧವಾಗಿರುವ ವಾಹನಗಳನ್ನು ಇಲ್ಲಿನ ಮಾರುಕಟ್ಟೆಗೆ ಬಿಡುಗಡೆ ಮಾಡಿ, ಬೇಡಿಕೆ ಹೇಗಿರುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳುವ ಉದ್ದೇಶ ಕಂಪನಿಯದ್ದು.

ನಾಯಕರ ಭೇಟಿ...

ನವದೆಹಲಿಯಲ್ಲಿ ಬುಧವಾರ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ ರಾಜ್ಯದ ಹಲವು ವಿಷಯಗಳ ಬಗ್ಗೆ ಮಾತುಕತೆ ನಡೆಸಿದರು.

ಮೋದಿ, ಶಾ, ನಿತೀಶ್ ಹತ್ಯೆ ಬೆದರಿಕೆ: ಪೊಲೀಸರ ಹುಡುಕಾಟ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಹತ್ಯೆ ಮಾಡುವುದಾಗಿ ಪಾನಮತ್ತ ವ್ಯಕ್ತಿಯೊಬ್ಬ ದೆಹಲಿ ಪೊಲೀಸ್ ನಿಯಂತ್ರಣ ಕೊಠಡಿಗೆ ಬುಧವಾರ ಎರಡು ಬಾರಿ ಕರೆ ಮಾಡಿ, ಬೆದರಿಕೆ ಹಾಕಿದ ಘಟನೆ ನಡೆದಿದೆ. ಬೆದರಿಕೆ ಹಾಕಿದ ಆರೋಪಿಯ ಗುರುತು ಪತ್ತೆ ಹಚ್ಚಿರುವ ಪೊಲೀಸರು, ಆತನನ್ನು ಬಂಧಿಸಲು ಶೋಧ ನಡೆಸುತ್ತಿದ್ದಾರೆ.

ಆರೋಪಿಯು ಬೆಳಿಗ್ಗೆ 10.46ಕ್ಕೆ ಮೊದಲ ಕರೆ ಮಾಡಿ, ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ₹10 ಕೋಟಿ ನೀಡದಿದ್ದರೆ ಅವರನ್ನು ಕೊಲ್ಲುವುದಾಗಿ ಮತ್ತು ಬೆಳಿಗ್ಗೆ 10.54ಕ್ಕೆ ಎರಡನೇ ಬಾರಿಗೆ ಕರೆ ಮಾಡಿ ₹2 ಕೋಟಿ ನೀಡದಿದ್ದರೆ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿದ್ದಾನೆ ಎಂದು ಡಿಸಿಪಿ ಹರೇಂದ್ರ ಸಿಂಗ್ ತಿಳಿಸಿದ್ದಾರೆ.

ಆರೋಪಿಯು ನಂಗಲೋಯಿ ಪ್ರದೇಶದಿಂದ ಕರೆ ಮಾಡಿದ್ದು, ಮೇದಿಪುರದ ನಿವಾಸಿ ಸುಧೀರ್ ಶರ್ಮಾ ಎಂದು ಗುರುತಿಸಲಾಗಿದೆ. 'ಆರೋಪಿಯ ಮನೆಗೆ ಪೊಲೀಸರು ಹೋಗಿ ವಿಚಾರಿಸಿದಾಗ ಆತ ಮನೆಯಲ್ಲಿ ಇರಲಿಲ್ಲ. ಆತನ ಮಗ ಅಂಕಿತ್ ಅವರನ್ನು ವಿಚಾರಿಸಿದಾಗ, 'ನನ್ನ ತಂದೆ ಒಬ್ಬ ಬಡಗಿ, ಮದ್ಯವ್ಯಸನಿ. ಬೆಳಿಗ್ಗೆಯಿಂದಲೇ ಮದ್ಯಪಾನ ಮಾಡುತ್ತಾರೆ' ಎಂಬ ಹೇಳಿಕೆಯನ್ನು ಮಗ ನೀಡಿದ್ದಾರೆ. ಆರೋಪಿಗೆ ಮಗನಿಂದ ಮೊಬೈಲ್ ಕರೆಯಲ್ಲಿ ಮಾತನಾಡಿಸಿದಾಗ ಆರೋಪಿ ಸುಸಂಬದ್ಧವಾಗಿಯೇ ಉತ್ತರಿಸಿದ್ದಾನೆ' ಎಂದು ಡಿಸಿಪಿ ತಿಳಿಸಿದ್ದಾರೆ.

ಚೀನಾಗೆ ಭಾರತ ತರಾಟೆ

ವಿಶ್ವಸಂಸ್ಥೆ (ಪಿಟಿಐ): ಮುಂಬೈನ 26/11 ಭಯೋತ್ಪಾದಕ ದಾಳಿ ಹೊಣೆ ಹೊತ್ತಿರುವ ಪಾಕಿಸ್ತಾನದ ಲಷ್ಕರ್- ಎ- ತಯಬಾ ಸಂಘಟನೆಯ ಉಗ್ರ ಸಾಜಿದ್ ಮಿರ್‌ನನ್ನು ಜಾಗತಿಕ ಭಯೋತ್ಪಾದಕನೆಂದು ಘೋಷಿಸಲು ವಿಶ್ವಸಂಸ್ಥೆಯಲ್ಲಿ ಮಂಡಿಸಿದ್ದ ಪ್ರಸ್ತಾವನೆಗೆ ಮತ್ತೊಮ್ಮೆ ತಡೆಯೊಡ್ಡಿದ ಚೀನಾದ ನಡೆಯನ್ನು ಭಾರತ ಬುಧವಾರ ತೀವ್ರ ತರಾಟೆಗೆ ತೆಗೆದುಕೊಂಡಿತು.

ವಿಶ್ವಸಂಸ್ಥೆಯ ಭಯೋತ್ಪಾದನೆ ವಿರೋಧಿ ಸಭೆಯಲ್ಲಿ ಅತ್ಯಂತ ಕಠಿಣ ಶಬ್ದಗಳಿಂದ ಚೀನಾಕ್ಕೆ ತಿರುಗೇಟು ನೀಡಿದ ವಿಶ್ವಸಂಸ್ಥೆಯಲ್ಲಿನ ಭಾರತದ ಶಾಶ್ವತ ಮಿಷನ್‌ನ ಜಂಟಿ ಕಾರ್ಯದರ್ಶಿ ಪ್ರಕಾಶ್ ಗುಪ್ತಾ 'ಇದು ಭಯೋತ್ಪಾದನೆಯ ಪಿಡುಗಿನ ವಿರುದ್ಧ ಹೋರಾಡಲು ನಿಜವಾದ ರಾಜಕೀಯ ಇಚ್ಛಾಶಕ್ತಿಯ ಕೊರತೆಯನ್ನು ತೋರಿಸುತ್ತದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಇದು ಸಂಕುಚಿತ ಮನೋಭಾವದ ಭೌಗೋಳಿಕ ರಾಜಕೀಯ ಹಿತಾಸಕ್ತಿಯ ನಡೆ. ಇಂಥವುಗಳಿಂದಾಗಿ ಭಯೋತ್ಪಾದಕರನ್ನು ನಿಷೇಧಿಸುವ ಪ್ರಯತ್ನಗಳು ವಿಫಲವಾದರೆ, ಭಯೋತ್ಪಾದನೆ ಎದುರಿಸಲು ನಮಗೆ ನೈಜ ರಾಜಕೀಯ ಇಚ್ಛಾಶಕ್ತಿ ಇಲ್ಲವೆಂದೇ ಅರ್ಥ' ಎಂದು ಚೀನಾ ವಿರುದ್ಧ ಹರಿಹಾಯ್ದರು.

ಭಾರತವು ಭಯೋತ್ಪಾದಕರ ವಿರುದ್ಧ ಪ್ರತಿದಿನವು ನೈಜ ಹೋರಾಟ ನಡೆಸುತ್ತಿದೆ. ಈ ದಿನ, ಹೊಣೆಗಾರಿಕೆ ಮತ್ತು ಪಾರದರ್ಶಕತೆಯ ಯುಗದಲ್ಲಿ, ಸಾಕ್ಷ್ಯ ಆಧಾರಿತ ಪ್ರಸ್ತಾವಗಳನ್ನು ಯಾವುದೇ ಕಾರಣ ನೀಡದೆ ನಿರ್ಬಂಧಿಸಲಾಗಿದೆ ಎಂದು ಕಿಡಿಕಾರಿದರು.

ಮುಂಬೈ 26/11 ಭಯೋತ್ಪಾದಕ ದಾಳಿ ವೇಳೆ ಪಾಕ್ ಭಯೋತ್ಪಾದಕರಿಗೆ ಉಗ್ರ ಸಾಜಿದ್ ಮಿರ್ ನಿರ್ದೇಶನಗಳನ್ನು ನೀಡಿರುವ ಧ್ವನಿ ಸುರುಳಿಯನ್ನು ಸಭೆಯಲ್ಲಿ ಪ್ರಸಾರ ಮಾಡಲಾಯಿತು.

50 ದಿನಗಳಾದರೂ ನಿಲ್ಲದ ಸಂಘರ್ಷ

ನವದೆಹಲಿ (ಪಿಟಿಐ): ಮೈತೇಯಿ ಮತ್ತು ಕುಕಿ ಬುಡಕಟ್ಟು ಸಮುದಾಯದ ನಡುವಣ ಹಿಂಸಾಚಾರ ಆರಂಭವಾಗಿ ಬುಧವಾರಕ್ಕೆ 50 ದಿನಗಳು ಪೂರೈಸಿದರೂ ಶಾಂತಿ ಸ್ಥಾಪಿಸುವಲ್ಲಿ ಪ್ರಧಾನಿ ನರೇಂದ್ರ ಮೋದಿ ಸಂಪೂರ್ಣ ವಿಫಲರಾಗಿದ್ದಾರೆ ಎಂದು ಕಾಂಗ್ರೆಸ್ ಕಟುವಾಗಿ ಟೀಕಿಸಿದೆ.

'ಮೋದಿ ಅವರು ಉದ್ದೇಶಪೂರ್ವಕವಾಗಿಯೇ ಹಿಂಸಾಚಾರದ ಬಗ್ಗೆ ಮಾತನಾಡದೆ ನಿರ್ಲಕ್ಷ್ಯವಹಿಸಿದ್ದಾರೆ. ಮಣಿಪುರದ ಬಿಜೆಪಿ ರಾಜ್ಯ ಸರ್ಕಾರವೂ ಸಂಪೂರ್ಣ ಮೌನವಹಿಸಿದೆ. ಅಲ್ಲಿ 'ಗರಿಷ್ಠ ಮೌನ; ಕನಿಷ್ಠ ಆಡಳಿತ'ವಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟ್ವೀಟ್ ಮೂಲಕ ಆರೋಪಿಸಿದ್ದಾರೆ.

ಪ್ರಧಾನಿ ಅವರ ಅಮೆರಿಕ ಪ್ರವಾಸ ಹೆಚ್ಚು ಚರ್ಚಿತವಾಗುತ್ತಿದೆ. ಮಣಿಪುರದ ಜನರು ಐವತ್ತು ದಿನಗಳಿಂದಲೂ ನರಕಯಾತನೆ ಅನುಭವಿಸುತ್ತಿರುವ ಸುದ್ದಿ ನೇಪಥ್ಯಕ್ಕೆ ಸರಿದಿದೆ. ಸರ್ವಪಕ್ಷಗಳ ಭೇಟಿಗೂ ಸಮಯ ನೀಡಿಲ್ಲ ಎಂದು ದೂರಿದ್ದಾರೆ.

ತೃಣಮೂಲ ಕಾಂಗ್ರೆಸ್ ಟೀಕೆ

'ಮಣಿಪುರ ಹೊತ್ತಿ ಉರಿಯುತ್ತಿದ್ದರೂ ಮೋದಿ ಅವರು ಅಮೆರಿಕಕ್ಕೆ ಭೇಟಿ ನೀಡುವ ಅಗತ್ಯವಿತ್ತೇ' ಎಂದು ಪ್ರಶ್ನಿಸಿರುವ ತೃಣಮೂಲ ಕಾಂಗ್ರೆಸ್, ಸಂಘರ್ಷದ ಸ್ಥಿತಿ ನಿಭಾಯಿಸುವಲ್ಲಿ ಬಿಜೆಪಿ ವಿಫಲವಾಗಿದೆ' ಎಂದು ಟೀಕಿಸಿದೆ.

ಇದಕ್ಕೆ ಬಿಜೆಪಿ ವಕ್ತಾರ ಸಮಿಕ್ ಭಟ್ಟಾಚಾರ್ಯ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದು, 'ಪಂಚಾಯಿತಿ ಚುನಾವಣೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಡದಂತೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸರ್ಕಾರ ಮೊದಲು ಕ್ರಮಕೈಗೊಳ್ಳಲಿ' ಎಂದು ತಿರುಗೇಟು ನೀಡಿದ್ದಾರೆ.

ಸಾಮರಸ್ಯಕ್ಕೆ ಸೋನಿಯಾ ಮನವಿ

'ಈ ಹಿಂಸಾಚಾರವು ಹೃದಯ ವಿದ್ರಾವಕಗೊಳಿಸಿದೆ. ಜನರು ಶಾಂತಿ ಮತ್ತು ಸಾಮರಸ್ಯ ಕಾಪಾಡಲು ಸಹಕರಿಸಬೇಕು' ಎಂದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಮನವಿ ಮಾಡಿದೆ.

ಈ ಕುರಿತು ಅವರು ಮಾತನಾಡಿರುವ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಕಾಂಗ್ರೆಸ್ ಹಂಚಿಕೊಂಡಿದೆ.

'ಶಾಂತಿ, ಸಹಬಾಳ್ವೆ ನಡೆಸಿದ ಸಹೋದರ ಮತ್ತು ಸಹೋದರಿಯರು ಪರಸ್ಪರ ವಿರೋಧಿಗಳಾಗಿರುವುದು ನೋವು ತಂದಿದೆ. ಒಬ್ಬ ತಾಯಿಯಾಗಿ ನಿಮ್ಮ ನೋವು ನನಗೆ ಅರ್ಥವಾಗುತ್ತದೆ. ನಿಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ನಡೆಯಬೇಕು. ಸುಂದರ ನೆಲದಲ್ಲಿ ಸಾಮರಸ್ಯ ನೆಲೆಸಲು ನನ್ನ ಧೈರ್ಯವಂತ ಸಹೋದರಿಯರು ಸಹಕರಿಸಬೇಕು' ಎಂದು ಕೋರಿದ್ದಾರೆ.

ಕರಣ್ ಜೋಹರ್‌ಗೆ ಬ್ರಿಟನ್ ಸಂಸತ್ ಗೌರವ

ಲಂಡನ್ (ಪಿಟಿಐ): ಬಾಲಿವುಡ್ ಚಿತ್ರ ನಿರ್ದೇಶಕ ಕರಣ್ ಜೋಹರ್ ಅವರು 'ಜಾಗತಿಕ ಮನರಂಜನಾ ಕ್ಷೇತ್ರ'ಕ್ಕೆ ನೀಡಿರುವ ಕೊಡುಗೆ ಹಾಗೂ ನಿರ್ದೇಶಕರಾಗಿ ಅವರು 25 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಬ್ರಿಟನ್ ಸಂಸತ್ತು ಅವರನ್ನು ಮಂಗಳವಾರ ಗೌರವಿಸಿದೆ.

ಬ್ರಿಟನ್ ಸಂಸತ್ತಿನ 'ಹೌಸ್ ಆಫ್ ಲಾರ್ಡ್ಸ್' ಸದಸ್ಯೆ, ಭಾರತ ಮೂಲದ ಬಾರೊನೆಸ್ ಸ್ಯಾಂಡಿ ವರ್ಮ ಅವರು ಕರಣ್ ಅವರಿಗೆ ಪ್ರಶಸ್ತಿ ಫಲಕವನ್ನು ನೀಡಿ ಗೌರವಿಸಿದರು. ಈ ಮಾಹಿತಿಯನ್ನು ಕರಣ್ ತಮ್ಮ ಇನ್‌ಸ್ಟಗ್ರಾಂ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮಹಿಳಾ ಕಾರಾಗೃಹದಲ್ಲಿ ಹಿಂಸಾಚಾರ: 48 ಸಾವು

ತೆಗುಸಿಗಲ್ಪ (ಹೊಂಡುರಾಸ್) (ಎಪಿ): 'ತೆಗುಸಿಗಲ್ಪದ ಮಹಿಳಾ ಕಾರಾಗೃಹದಲ್ಲಿ ನಡೆದ ಹಿಂಸಾಚಾರದಲ್ಲಿ 48 ಮಹಿಳೆಯರು ಮೃತಪಟ್ಟಿದ್ದಾರೆ' ಎಂದು ಹೊಂಡುರಾಸ್‌ನ ರಾಷ್ಟ್ರೀಯ ಪೊಲೀಸ್ ತನಿಖಾ ಸಂಸ್ಥೆಯ ವಕ್ತಾರರಾದ ಯುರಿ ಮೊರಾ ಹೇಳಿದರು.

ತೆಗುಸಿಗಲ್ಪದ ತಮಾರ ನಗರದ ಕಾರಾಗೃಹದಲ್ಲಿ ಮಂಗಳವಾರ ಈ ಘಟನೆ ನಡೆದಿದೆ.

'ಹಲವರನ್ನು ಸುಟ್ಟುಹಾಕಲಾಗಿದೆ. ಆದರೆ, ಕಾರಾಗೃಹದಲ್ಲಿ ಕೈದಿಗಳು ಗುಂಡು ಹಾರಿಸಿದರೆಂಬ ವರದಿಗಳೂ ಇವೆ' ಎಂದು ಅವರು ಹೇಳಿದರು.

ಭ್ರಷ್ಟಾಚಾರ ಅಥವಾ ಗುಂಪುಗಾರಿಕೆ ನಿಯಂತ್ರಣ ವಿಚಾರವಾಗಿ ಹಿಂಸಾಚಾರ ನಡೆದಿರಬಹುದು ಎಂದು ಅಧಿಕಾರಿಗಳು ಹೇಳಿದ್ದಾರೆ.

ಬೈಡನ್ ಹೇಳಿಕೆ ಅಸಂಬದ್ಧ: ಚೀನಾ ತೀಕ್ಷ್ಣ ಪ್ರತಿಕ್ರಿಯೆ

ಬೀಜಿಂಗ್/ಮಾಸ್ಕೊ (ಎಪಿ/ರಾಯಿಟರ್ಸ್): ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಸರ್ವಾಧಿಕಾರಿಯೆಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಕರೆದಿರುವುದಕ್ಕೆ ಚೀನಾ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದು, 'ಇದು ಅತ್ಯಂತ ಅಸಂಬದ್ಧ ಮತ್ತು ಬೇಜವಾಬ್ದಾರಿಯುತ ಹೇಳಿಕೆ' ಎಂದು ಕಿಡಿಕಾರಿದೆ.

ವಿದೇಶಾಂಗ ಸಚಿವಾಲಯದ ವಕ್ತಾರ ಮಾವೊ ನಿಂಜ್ ಅವರು 'ಬೈಡನ್ ಅವರ ಹೇಳಿಕೆಯು ಸಂಪೂರ್ಣವಾಗಿ ವಾಸ್ತವಕ್ಕೆ ವಿರುದ್ಧವಾದುದು. ಒಟ್ಟಾರೆ ರಾಜತಾಂತ್ರಿಕ ಶಿಷ್ಟಾಚಾರವನ್ನು ಉಲ್ಲಂಘಿಸುತ್ತದೆ ಮತ್ತು ಚೀನಾದ ರಾಜಕೀಯ ಘನತೆಗೂ ಧಕ್ಕೆಯುಂಟು ಮಾಡುತ್ತದೆ' ಎಂದು ಹೇಳಿದ್ದಾರೆ.

'ಇದೊಂದು ಕ್ಷುಲ್ಲಕ ರಾಜಕೀಯ ಪ್ರಚೋದನೆ. ಬೈಡನ್ ಅವರ ಹೇಳಿಕೆಗೆ ಚೀನಾ ಬಲವಾದ ವಿರೋಧ ಮತ್ತು ಅಸಮಾಧಾನ ವ್ಯಕ್ತಪಡಿಸುತ್ತದೆ' ಎಂದು ಮಾವೋ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಉಭಯ ರಾಷ್ಟ್ರಗಳ ನಡುವೆ ಉಂಟಾಗಿರುವ ಉದ್ವಿಗ್ನ ಸ್ಥಿತಿಯನ್ನು ಶಮನಗೊಳಿಸಿ, ಬಾಂಧವ್ಯ ಸುಧಾರಿಸುವ ಪ್ರಯತ್ನವಾಗಿ ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಅವರು ಬೀಜಿಂಗ್‌ಗೆ ಭೇಟಿ ನೀಡಿದ್ದರು. ಒಂದು ದಿನದ ನಂತರ ಅಮೆರಿಕ ಅಧ್ಯಕ್ಷರಿಂದ ಈ ಕಟು ಹೇಳಿಕೆ ಹೊರಬಿದ್ದಿದೆ.

ಸ್ಥಿರ ಮತ್ತು ಅನಿಶ್ಚಿತ ವಿದೇಶಾಂಗ ನೀತಿ: ಷಿ ಜಿನ್ ಪಿಂಗ್ ಅವರನ್ನು ಬೈಡನ್ ಸರ್ವಾಧಿಕಾರಿ ಎಂದಿರುವುದು ಅನಿರೀಕ್ಷಿತ. ಅಲ್ಲದೆ, ಇದು ಅಮೆರಿಕ ವಿದೇಶಾಂಗ ನೀತಿಯ ಅಸ್ಥಿರತೆ ಮತ್ತು ಅನಿಶ್ಚಿತತೆ ತೋರಿಸುತ್ತದೆ ಎಂದು ರಷ್ಯಾ ಅಧ್ಯಕ್ಷ ಪುಟಿನ್ ಅವರ ವಕ್ತಾರ ಡಿಮಿಟ್ರಿ ಪೆಸ್ಕೊವ್ ಟೀಕಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

General

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್ ಲೈನ್ ಕಂಪನಿಗಳಿಗೆ SSLC,PUC, ಡಿಗ್ರಿ,ಡಿಪ್ಲೋಮಾದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000/- 65,000/- ವಸತಿಯೂಟದೊಂದಿಗೆ 9036125229

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು,ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/-. ಬೆಂಗಳೂರು- 56.ಸಂಪರ್ಕಿಸಿ : 9606523337, 9606385001

ಪ್ರವಾಸ

Travel

05/07/2023ರಿಂದ 12ದಿನಗಳ ವಿಮಾನ ಮತ್ತು AC ಬಸ್ಸಿನಲ್ಲಿ ಅಮರನಾಥ್, ಕಾಶ್ಮೀರ, ದಾಲ್ ಲೇಖ್, ವೈಷ್ಣೋದೇವಿ ಇತ್ಯಾದಿ ಹಾಗೂ 8/13/16 ದಿನಗಳ ಚಾರುಧಾಮ್, ಮುಕ್ತಿನಾಥ್,ಕಾಶಿ,ಪೋಕ್ರಾ, ಜನಕಪುರಿ ಯಾತ್ರೆಗಳಿಗೆ ವಿಚಾರಿಸಿ: ಏಷ್ಯನ್ ಟ್ರಾವೆಲ್ ಲೈನ್ಸ್. ಆರ್.ವಿ.ರಸ್ತೆ: 8105657052/ 9480182865

6.7.2023ರಿಂದ 10ದಿನಗಳು. ವೈಷ್ಣವಿದೇವಿ, ಕುಲುಮನಾಲಿ, ದೆಹಲಿ, ಶಿಮ್ಲಾ, ಅಮೃತಸರ, ವಾಘಾ ಬಾರ್ಡರ್17.7.2023ರಿಂದ 12ದಿನಗಳು. ಚಾರದಾಮ ಪ್ರವಾಸ ಕೇದಾರನಾಥ, ಗಂಗೋತ್ರಿ, ಬದರಿನಾಥ, ಯಮನೋತ್ರಿ, ದೆಹಲಿ23.7.2023ರಿಂದ 7ದಿನಗಳು. ಭದ್ರಾಚಲಂ, ಹೈದ್ರಾಬಾದ್, ಶ್ರೀಶೈಲ, ವಿಜಯವಾಡ, ಯಾದಗಿರಿಗುಡ್ಡ, ಸುರೇಂದ್ರಪುರಿ, ಅಮರಾವತಿ ಶ್ರೀ ಗುರುರಾಜ ಟ್ರಾವೆಲ್ಸ್, ಕೋಲಾರ- 9900124333, 9611082432, 8123099913

30.6.2023 7ದಿನಗಳು ರಾಮೇಶ್ವರಂ ನವಗ್ರಹಸಹಿತ ತಮಿಳುನಾಡು. 2.9.2023, 22.9.2023 14ದಿನಗಳ ಚಾರ್ ಧಾಮ್ ಯಾತ್ರೆ. ಅಕ್ಟೋಬರ್ ಕಾಶಿ. ನವೆಂಬರ್ ಗುಜರಾತ್. 9448792891.

ಭವಿಷ್ಯ

Astrology

ಕೇರಳ ಮಂತ್ರವಾದಿ ಶ್ರೀನಿವಾಸ್ ಎಂ. ಮುಗ್ಗೋಳ್, ತೀರ್ಥಹಳ್ಳಿ. 9632545506, 7892446291 ನಿಮ್ಮೆಲ್ಲಾ ಕಠಿಣ ಗುಪ್ತ ಸಮಸ್ಯೆಗೆ ಪರಿಹಾರ ಮಾಡುತ್ತಾರೆ.

'ವಶೀಕರಣ ಮಾಂತ್ರಿಕರು' ಪ್ರೇಮವಿಚಾರ, ಮದುವೆ, ಸಾಲಬಾಧೆ, ವ್ಯಾಪಾರ, ಮನೆಯಲ್ಲಿನ ಅಶಾಂತಿ, ಅನಾರೋಗ್ಯ, ಮಾನಸಿಕ ತೊಂದರೆಗಳಿಗೆ ದೈವಿಕ ಪೂಜಾ ಶಕ್ತಿಯಿಂದ ಫೋನಿನ ಮೂಲಕ ಪರಿಹಾರ.9964108888 (ವೀಡಿಯೋ ಕಾಲ್ ಗೆ ಲಭ್ಯವಿರುತ್ತಾರೆ).

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

Book Your Classifieds Ads
Online Log in to
dhclassifieds.com
Contact :
9845114560 : 9731810277
9901641752 : 9886213331
080 - 45557163 / 164

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,816
ಇಂದಿನ ಅಂತ್ಯ	18,856
▲	40
ದಿನದ ಕನಿಷ್ಠ	18,875

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹288-446
ದ್ವಿತಳಿ (ಬಿ.ವಿ)	₹266-619

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹600
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹603

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1660 (1670)
ಸೋಯಾ (ರಿಫೈನ್ಡ್)	₹940 (950)
ಸೂರ್ಯಕಾಂತಿ (ರಿಫೈನ್ಡ್)	₹940 (960)
ಪಾಮೋಲಿನ್	₹835 (855)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಬೆಂಗಳೂರು	₹9500-12500
ಪುತ್ತೂರು	₹4500-7300
ತುರುವೇಕೆರೆ	₹7900-7900

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹150
ಆರ್‌ಎಸ್‌ಎಸ್-5	₹145
ಗುಡ್ ಲಾಟ್	₹126

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1300-1500
ಮಧ್ಯಮ	₹1000-1300
ಸಣ್ಣ	₹500-1000

ಆ್ಯಷಸ್ ಟೆಸ್ಟ್: ಉಭಯ ತಂಡಗಳಿಗೂ ದಂಡ

ದುಬೈ (ಪಿಟಿಐ): ಆ್ಯಷಸ್ ಸರಣಿಯ ಮೊದಲ ಟೆಸ್ಟ್ ಪಂದ್ಯದಲ್ಲಿ ನಿಗದಿಯ ವೇಳೆಯೊಳಗೆ ಓವರ್‌ಗಳನ್ನು ಮುಗಿಸದ ಕಾರಣಕ್ಕೆ ಇಂಗ್ಲೆಂಡ್ ಹಾಗೂ ಆಸ್ಟ್ರೇಲಿಯಾ ತಂಡಗಳಿಗೆ ದಂಡ ವಿಧಿಸಲಾಗಿದೆ.

ಎಜ್‌ಬಾಸ್ಟನ್‌ನಲ್ಲಿ ನಡೆದ ಟೆಸ್ಟ್ ಮಂಗಳವಾರ ರೋಚಕ ಅಂತ್ಯ ಕಂಡಿತ್ತು. ಈ ಪಂದ್ಯದ ಶುಲ್ಕದ ಶೇ 40ರಷ್ಟನ್ನು ತಂಡಗಳು ದಂಡವಾಗಿ ನೀಡಬೇಕು. ಅಲ್ಲದೇ ಉಭಯ ತಂಡಗಳಿಗೂ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ (ಡಬ್ಲ್ಯುಟಿಸಿ) ಎರಡು ಪಾಯಿಂಟ್‌ಗಳನ್ನೂ ಕಡಿತ ಮಾಡಲಾಗಿದೆ.

'ಐಸಿಸಿ ಪಂದ್ಯ ರೆಫರಿಗಳ ಎಲೀಟ್ ಪ್ಯಾನೆಲ್‌ನ ಆ್ಯಂಡಿ ಪೈಕ್ರಾಫ್ಟ್ ಅವರು ದಂಡ ವಿಧಿಸುವ ನಿರ್ಣಯ ಕೈಗೊಂಡಿದ್ದಾರೆ. ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ ಹಾಗೂ ಆಸ್ಟ್ರೇಲಿಯಾ ನಾಯಕ ಪ್ಯಾಟ್ ಕಮಿನ್ಸ್ ಅವರು ದಂಡ ಪಾವತಿಸಲು ಸಮ್ಮತಿಸಿದ್ದಾರೆ' ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಬೆನ್ ಸ್ಟೋಕ್ಸ್

ಈ ಪಂದ್ಯದ ಗೆಲುವಿನಿಂದ ಆಸ್ಟ್ರೇಲಿಯಾ ಗಳಿಸಿದ್ದ 12 ರಲ್ಲಿ ಎರಡು ಅಂಕಗಳನ್ನು ಕಡಿತಗೊಳಿಸಲಾಗಿದೆ. ಮೂರನೇ ಡಬ್ಲ್ಯುಟಿಸಿಯ ಮೊದಲ ಪಂದ್ಯ ಇದಾಗಿದೆ. ಈ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು 2 ವಿಕೆಟ್‌ಗಳಿಂದ ಜಯಿಸಿತು. ಸರಣಿಯಲ್ಲಿ 1-0 ಮುನ್ನಡೆ ಸಾಧಿಸಿತು. ಉಸ್ಮಾನ್ ಖ್ವಾಜಾ ಮತ್ತು ನಾಯಕ ಪ್ಯಾಟ್ ಕಮಿನ್ಸ್ ಅವರ ಅಮೋಘ ಬ್ಯಾಟಿಂಗ್‌ನಿಂದ ಆಸ್ಟ್ರೇಲಿಯಾ ಗೆದ್ದಿತು. ಎರಡನೇ ಚಾಂಪಿಯನ್‌ಷಿಪ್‌ನಲ್ಲಿ ಆಸ್ಟ್ರೇಲಿಯಾ ಪ್ರಶಸ್ತಿ ಜಯಿಸಿತ್ತು.

ಐಸಿಸಿ ಟೆಸ್ಟ್ ರ‍್ಯಾಂಕಿಂಗ್: ಅಗ್ರಸ್ಥಾನ ಬಿಟ್ಟುಕೊಡದ ಅಶ್ವಿನ್

ದುಬೈ (ಪಿಟಿಐ): ಭಾರತದ ಆಫ್‌ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಟೆಸ್ಟ್ ಬೌಲರ್‌ಗಳ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಬ್ಯಾಟಿಂಗ್ ವಿಭಾಗದಲ್ಲಿ ಇಂಗ್ಲೆಂಡ್ ತಂಡದ ಜೋ ರೂಟ್ ಅವರು ಆಸ್ಟ್ರೇಲಿಯಾದ ಮಾರ್ನಸ್ ಲಾಬುಷೇನ್ ಅವರನ್ನು ಹಿಂದಿಕ್ಕಿ ಅಗ್ರಸ್ಥಾನಕ್ಕೇರಿದ್ದಾರೆ. ಬುಧವಾರ ಐಸಿಸಿಯು ಪಟ್ಟಿಯನ್ನು ಬಿಡುಗಡೆ ಮಾಡಿದೆ. ಇದರಲ್ಲಿ ಒಟ್ಟು 860 ಅಂಕಗಳನ್ನು ಹೊಂದಿರುವ ಅಶ್ವಿನ್ ತಮ್ಮ ಸ್ಥಾನ ಉಳಿಸಿಕೊಂಡಿದ್ದಾರೆ.

ಈಚೆಗೆ ನಡೆದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಆಡಿದ್ದ ಭಾರತ ತಂಡದ ಹನ್ನೊಂದರ ಬಳಗಕ್ಕೆ ಅಶ್ವಿನ್ ಆಯ್ಕೆಯಾಗಿರಲಿಲ್ಲ. ಆದರೂ ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ. ಇಂಗ್ಲೆಂಡ್ ತಂಡದ ವೇಗಿ ಜೇಮ್ಸ್ ಆ್ಯಂಡರ್ಸನ್ 829 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ.

ಭಾರತದ ಜಸ್‌ಪ್ರೀತ್ ಬೂಮ್ರಾ (772) ಮತ್ತು ರವೀಂದ್ರ ಜಡೇಜ (765) ಕ್ರಮವಾಗಿ ಎಂಟು ಹಾಗೂ ಒಂಬತ್ತನೇ ಸ್ಥಾನಗಳಲ್ಲಿದ್ದಾರೆ. ದಕ್ಷಿಣ ಆಫ್ರಿಕಾ ವೇಗಿ ಕಗಿಸೊ ರಬಾಡ (825) ಅವರು ಆಸ್ಟ್ರೇಲಿಯಾ ನಾಯಕ ಪ್ಯಾಟ್ ಕಮಿನ್ಸ್ (824) ಅವರನ್ನು ಹಿಂದಿಕ್ಕಿದ್ದಾರೆ.

ಬ್ಯಾಟಿಂಗ್ ವಿಭಾಗದಲ್ಲಿ ಭಾರತದ ವಿರಾಟ್ ಕೊಹ್ಲಿ 14ನೇ ಸ್ಥಾನದಲ್ಲಿದ್ದಾರೆ. ಒಂದು ಸ್ಥಾನ ಕಳೆದುಕೊಂಡಿದ್ದಾರೆ. ರೋಹಿತ್ ಶರ್ಮಾ 12ನೇ, ಚೇತೇಶ್ವರ್ ಪೂಜಾರ 25ನೇ ಸ್ಥಾನದಲ್ಲಿದ್ದಾರೆ. ಅಜಿಂಕ್ಯ ರಹಾನೆ ಮತ್ತು ಶ್ರೇಯಸ್

ಆರ್. ಅಶ್ವಿನ್ ಮತ್ತು ರವೀಂದ್ರ ಜಡೇಜ

ಇಂಗ್ಲೆಂಡ್ ತಂಡದ ಜೋ ರೂಟ್

ಅಯ್ಯರ್ ಕ್ರಮವಾಗಿ 36 ಹಾಗೂ 37ನೇ ಸ್ಥಾನಕ್ಕೆ ಬಡ್ತಿ ಪಡೆದುಕೊಂಡಿದ್ದಾರೆ.

ಆ್ಯಷಸ್ ಸರಣಿಯ ಮೊದಲ ಟೆಸ್ಟ್‌ನಲ್ಲಿ ಶತಕ ಗಳಿಸಿದ್ದ ಜೋ ರೂಟ್ ಅಗ್ರಸ್ಥಾನಕ್ಕೇರಿದ್ದಾರೆ. ಅವರು ಐದು ಸ್ಥಾನಗಳ ಬಡ್ತಿ ಗಳಿಸಿದರು. ಲಾಬುಷೇನ್ ಮೂರನೇ ಸ್ಥಾನಕ್ಕಿಳಿದಿದ್ದಾರೆ. ನ್ಯೂಜಿಲೆಂಡ್ ತಂಡದ ಕೇನ್ ವಿಲಿಯಮ್ಸನ್ 2ನೇ ಸ್ಥಾನಕ್ಕೆ ಜಿಗಿದಿದ್ದಾರೆ.

ಆಲ್‌ರೌಂಡರ್‌ಗಳ ವಿಭಾಗದಲ್ಲಿ ರವೀಂದ್ರ ಜಡೇಜ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ಅಶ್ವಿನ್ ಎರಡನೇ ಸ್ಥಾನದಲ್ಲಿದ್ದಾರೆ.

ಬಿಎಫ್‌ಸಿ ಸೇರಿದ ಗೋಲ್‌ಕೀಪರ್ ವಿಕ್ರಮ್ ಸಿಂಗ್

ಬೆಂಗಳೂರು: ಗೋಲ್‌ಕೀಪರ್ ವಿಕ್ರಮ್ ಸಿಂಗ್ ಅವರು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಮುಂಬರುವ ಆವೃತ್ತಿಯಲ್ಲಿ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ತಂಡದ ಪರ ಆಡಲಿದ್ದಾರೆ.

ಐ–ಲೀಗ್‌ನಲ್ಲಿ ಐಜ್ವಾಲ್ ಎಫ್‌ಸಿ ಪರ ಆಡಿದ್ದ 29 ವರ್ಷದ ವಿಕ್ರಮ್, ಒಂದು ವರ್ಷದ ಅವಧಿಗೆ ಬಿಎಫ್‌ಸಿ ಜತೆ ಒಪ್ಪಂದ ಮಾಡಿಕೊಂಡಿದ್ದಾರೆ ಎಂದು ತಂಡದ ಪ್ರಕಟಣೆ ತಿಳಿಸಿದೆ.

ಮುಂಬೈ ಮೂಲದ ವಿಕ್ರಮ್, ಮುಂಬೈ ಸಿಟಿ ಎಫ್‌ಸಿ ಅಕಾಡೆಮಿಯಲ್ಲಿ ತರಬೇತಿ ಪಡೆದಿದ್ದರು. ಈ ಹಿಂದೆ ಫತೇಹ್ ಹೈದರಾಬಾದ್ ಎಫ್‌ಸಿ ತಂಡಕ್ಕೆ ಆಡಿದ್ದರು. 2022–23ರ ಐ ಲೀಗ್ ಋತುವಿನಲ್ಲಿ ಐಜ್ವಾಲ್ ಪರ 12 ಪಂದ್ಯಗಳನ್ನು ಆಡಿದ್ದಾರೆ.

'ಬಿಎಫ್‌ಸಿ ತಂಡವನ್ನು ಸೇರಿಕೊಳ್ಳುವ ನಿರ್ಧಾರ, ಗೋಲ್ ಕೀಪರ್ ಆಗಿ ನನ್ನ ಬೆಳವಣಿಗೆಗೆ ನೆರವಾಗುತ್ತದೆ ಎಂದು ನಂಬಿದ್ದೇನೆ. ಹೊಸ ತಂಡದ ಸಹ ಆಟಗಾರರು, ತರಬೇತುದಾರರು ಮತ್ತು ಅಭಿಮಾನಿಗಳ ಭೇಟಿಯನ್ನು ಎದುರು ನೋಡುತ್ತಿದ್ದೇನೆ' ಎಂದು ವಿಕ್ರಮ್ ಪ್ರತಿಕ್ರಿಯಿಸಿದ್ದಾರೆ.

ವಿಂಬಲ್ಡನ್: ವೀನಸ್‌ಗೆ ವೈಲ್ಡ್ ಕಾರ್ಡ್ ಪ್ರವೇಶ

ಲಂಡನ್ (ಎಎಫ್‌ಪಿ): ಐದು ಬಾರಿಯ ವಿಂಬಲ್ಡನ್ ಸಿಂಗಲ್ಸ್ ಚಾಂಪಿಯನ್ ವೀನಸ್ ವಿಲಿಯಮ್ಸ್ ಅವರಿಗೆ ಮುಂದಿನ ತಿಂಗಳು ಆರಂಭವಾಗುವ ಪ್ರತಿಷ್ಠಿತ ಚಾಂಪಿಯನ್‌ಷಿಪ್‌ಗೆ 'ವೈಲ್ಡ್ ಕಾರ್ಡ್'ಪ್ರವೇಶ ನೀಡಲಾಗಿದೆ.

ಕಳೆದ ವರ್ಷದ ವಿಂಬಲ್ಡನ್‌ನಲ್ಲಿ ವೀನಸ್ ಅವರು ಮಿಶ್ರ ಡಬಲ್ಸ್‌ನಲ್ಲಿ ಆಡಿದ್ದರು. ಆದರೆ 2021ರಿಂದೀಚೆ ಸಿಂಗಲ್ಸ್‌ನಲ್ಲಿ ಆಡಿಲ್ಲ.

ಇತ್ತೀಚೆಗಷ್ಟೇ 43ನೇ ವರ್ಷಕ್ಕೆ ಕಾಲಿಟ್ಟ ವೀನಸ್, ಸೋಮವಾರ ಬರ್ಮಿಂಗ್‌ಹ್ಯಾಮ್ ಡಬ್ಲ್ಯುಟಿಎ ಟೂರ್ನಿಯಲ್ಲಿ ವಿಶ್ವದ 48ನೇ ಕ್ರಮಾಂಕದ ಆಟಗಾರ್ತಿ ಕ್ಯಾಮಿಲಾ ಗಿಯೋರ್ಗಿ ಅವರನ್ನು ಸೋಲಿಸಿದ್ದರು.

ಜಾಗತಿಕ ಮಾರುಕಟ್ಟೆಗಳ ಏರಿಕೆ; ಎಚ್‌ಡಿಎಫ್‌ಸಿ, ರಿಲಯನ್ಸ್ ಗಳಿಕೆ

ಸೆನ್ಸೆಕ್ಸ್, ನಿಫ್ಟಿ ಸಾರ್ವಕಾಲಿಕ ಗರಿಷ್ಠ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಬುಧವಾರ ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿ ವಹಿವಾಟು ನಡೆಸಿದವು. ಎಚ್‌ಡಿಎಫ್‌ಸಿ ಬ್ಯಾಂಕ್, ಎಚ್‌ಡಿಎಫ್‌ಸಿ ಲಿಮಿಟೆಡ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳನ್ನು ಹೂಡಿಕೆದಾರರು ಹೆಚ್ಚು ಖರೀದಿ ಮಾಡಿದ್ದರಿಂದ ಷೇರುಪೇಟೆಗಳಲ್ಲಿ ಗೂಳಿ ಓಟ ಜೋರಾಗಿತ್ತು.

ಯುರೋಪಿನ ಮಾರುಕಟ್ಟೆಗಳಲ್ಲಿ ನಡೆದ ಸಕಾರಾತ್ಮಕ ವಹಿವಾಟು ಸಹ ದೇಶಿ ಷೇರುಪೇಟೆಗಳಿಗೆ ಬಲ ನೀಡಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 195 ಅಂಶ ಏರಿಕೆ ಕಂಡು ಸಾರ್ವಕಾಲಿಕ ಗರಿಷ್ಠ ಮಟ್ಟವಾದ 63,523 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ವಹಿವಾಟಿನ ಒಂದು ಹಂತದಲ್ಲಿ 63,588 ಅಂಶಗಳ ದಾಖಲೆ ಮಟ್ಟವನ್ನೂ ತಲುಪಿತ್ತು. ಈ ಹಿಂದೆ 2022ರ ಡಿಸೆಂಬರ್ 1ರಂದು ಮಧ್ಯಂತರ ವಹಿವಾಟಿನಲ್ಲಿ 63,583 ಅಂಶಗಳ ಗರಿಷ್ಠ ಮಟ್ಟ ತಲುಪಿತ್ತು.

ಕಂಪನಿಗಳ ಗಳಿಕೆ	
ಪವರ್‌ಗ್ರಿಡ್	3.68%
ಎಚ್‌ಡಿಎಫ್‌ಸಿ ಬ್ಯಾಂಕ್	1.71%
ಎಚ್‌ಡಿಎಫ್‌ಸಿ	1.66%
ಟೆಕ್ ಮಹೀಂದ್ರ	1.13%

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 40 ಅಂಶ ಹೆಚ್ಚಾಗಿ ಸಾರ್ವಕಾಲಿಕ ಗರಿಷ್ಠ ಮಟ್ಟ 18,856 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ಮಧ್ಯಂತರ ವಹಿವಾಟಿನಲ್ಲಿ 18,876 ಅಂಶಗಳನ್ನು ತಲುಪಿತ್ತು. ಐ.ಟಿ., ಹಣಕಾಸು ಮತ್ತು ವಿದ್ಯುತ್ ವಲಯದ ಷೇರುಗಳ ಗಳಿಕೆಯು ನಿಫ್ಟಿ ಏರಿಕೆಗೆ ಕಾರಣವಾಯಿತು.

'ಜಾಗತಿಕ ಮಟ್ಟದಲ್ಲಿ ಹಲವು ಸವಾಲುಗಳು ಇದ್ದರೂ ಸೆನ್ಸೆಕ್ಸ್ ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿದೆ. ಜೂನ್ ತ್ರೈಮಾಸಿಕದ ಫಲಿತಾಂಶಕ್ಕಾಗಿ ಎದುರು ನೋಡುತ್ತಿದ್ದೇವೆ. ಫಲಿತಾಂಶವು ಮಾರುಕಟ್ಟೆಯ ನಿರೀಕ್ಷೆಯ ಮಟ್ಟದಲ್ಲಿಯೇ ಇರುವ ಭರವಸೆ ಇದೆ' ಎಂದು ಮೆಹ್ತಾ ಈಕ್ವಿಟೀಸ್‌ನ ಅಧ್ಯಕ್ಷ ರಾಕೇಶ್ ಮೆಹ್ತಾ ಹೇಳಿದ್ದಾರೆ.

ಜಾಗತಿಕ ಷೇರುಪೇಟೆಗಳ ಗಳಿಕೆಯನ್ನು ಅನುಸರಿಸಿ ಸೆನ್ಸೆಕ್ಸ್ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿದೆ. ಬಹುತೇಕ ಮಾರುಕಟ್ಟೆಗಳು 52 ವಾರಗಳ ಗರಿಷ್ಠ ಮಟ್ಟದಲ್ಲಿವೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ತಿಳಿಸಿದ್ದಾರೆ.

ತಯಾರಿಕಾ ವಲಯದ ಚಟುವಟಿಕೆ ಹೆಚ್ಚಾಗಿರುವುದರ ಜೊತೆಗೆ ಸರ್ಕಾರದ ಬಂಡವಾಳ ವೆಚ್ಚದಲ್ಲಿ ಏರಿಕೆ ಆಗುತ್ತಿರುವ ಹಿನ್ನೆಲೆಯಲ್ಲಿ ಷೇರುಪೇಟೆಗಳು ಹೊಸ ಎತ್ತರವನ್ನು ತಲುಪಿವೆ ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ ಎಸ್. ರಂಗನಾಥನ್ ಹೇಳಿದ್ದಾರೆ.

'ಪೂರ್ವನಿರ್ಧಾರಿತ ಬಂದ್ ಇಂದು'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ವಿದ್ಯುತ್ ದರ ಏರಿಕೆ ಖಂಡಿಸಿ ಈಗಾಗಲೇ ಕರೆ ನೀಡಿರುವಂತೆ ಗುರುವಾರ (ಜೂನ್ 22) ರಾಜ್ಯದಾದ್ಯಂತ ಸ್ವಯಂ ಪ್ರೇರಿತ ಬಂದ್ ಮಾಡಲಿದ್ದೇವೆ' ಎಂದು ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ (ಕೆಸಿಸಿಐ) ಅಧ್ಯಕ್ಷ ವಿನಯ ಜವಳಿ ಪುನರುಚ್ಚರಿಸಿದರು.

'ನಾವು ನಮ್ಮ ವ್ಯಾಪಾರ, ಉದ್ಯಮ, ಅಂಗಡಿ– ಮುಂಗಟ್ಟುಗಳನ್ನು ಬಂದ್ ಮಾಡುತ್ತೇವೆ. ಬೆಳಿಗ್ಗೆ ತಹಶೀಲ್ದಾರ್, ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸುತ್ತೇವೆ. ವಿದ್ಯುತ್ ದರ ಏರಿಕೆಯನ್ನು ಕೈಬಿಡುವಂತೆ ಆಗ್ರಹಿಸಲಿದ್ದೇವೆ. ಬಂದ್ ಶಾಂತಿಯುತವಾಗಿರುತ್ತದೆ. ಜೀವನಾವಶ್ಯಕ ವಸ್ತುಗಳ ವ್ಯಾಪಾರ– ವಹಿವಾಟು ಎಂದಿನಂತೆ ಮುಂದುವರಿಯಲಿದೆ' ಎಂದರು.



ವಿನಯ ಜವಳಿ

'ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು (ಕೆಇಆರ್‌ಸಿ) ನಿಗದಿಪಡಿಸಿದ ವಿದ್ಯುತ್ ದರ ಅವೈಜ್ಞಾನಿಕವಾಗಿದೆ. ಮುಖ್ಯಮಂತ್ರಿ ಅವರು ಮಧ್ಯೆಪ್ರವೇಶಿಸಿ, ಇದನ್ನು ತಡೆಯಬೇಕೆಂದು ಕೋರಿ ಈಗಾಗಲೇ ಅವರಿಗೆ ಮನವಿ ಸಲ್ಲಿಸಿದ್ದೇವೆ. ಸರ್ಕಾರದಿಂದ ಪ್ರತಿಕ್ರಿಯೆ ಬಂದಿಲ್ಲ' ಎಂದು ತಿಳಿಸಿದರು.

ಈ ಬಂದ್‌ಗೆ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ), ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ) ಬೆಂಬಲ ನೀಡಿಲ್ಲ.

ಮುಂಬೈ ಧಾರಣೆ

ಶೇಂಗಾ

21-6-2023

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12000-12100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1670(1680)
ಒಂದು ವಾರದ ಡೆಲಿವರಿ	1665(1675)
ಸೋಯಾ ಕಚ್ಚಾ	875(890)
ಪಾಮ್ ವಾರದ ಡೆಲಿವರಿ	833(853)
ಸೂರ್ಯಕಾಂತಿ ಎಣ್ಣೆ ಕಚ್ಚಾ	845(865)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,550 (58,950)
ಬೆಳ್ಳಿ ಕೆ.ಜಿ 69,900 (71,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎಕ್ಸಿಸ್ ಆ್ಯಪ್‌ನಲ್ಲಿ ಅನ್ಯ ಬ್ಯಾಂಕ್ ಖಾತೆಗಳ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಹಕರು ಬೇರೆ ಬೇರೆ ಬ್ಯಾಂಕ್‌ಗಳಲ್ಲಿ ಹೊಂದಿರುವ ಖಾತೆಗಳಲ್ಲಿ ಎಷ್ಟು ಮೊತ್ತ ಇದೆ ಹಾಗೂ ಯಾವುದಕ್ಕೆಲ್ಲಾ ಖರ್ಚು ಮಾಡಲಾಗಿದೆ ಎನ್ನುವ ಮಾಹಿತಿಯನ್ನು ಇನ್ನುಮುಂದೆ ಎಕ್ಸಿಸ್ ಬ್ಯಾಂಕ್‌ನ ಮೊಬೈಲ್ ಆ್ಯಪ್ ಮೂಲಕ ತಿಳಿದುಕೊಳ್ಳಬಹುದು.

ಖಾಸಗಿ ವಲಯದ ಎಕ್ಸಿಸ್ ಬ್ಯಾಂಕ್ ತನ್ನ ಮೊಬೈಲ್ ಆ್ಯಪ್‌ನಲ್ಲಿ 'ಒನ್–ವೀವ್' ಎನ್ನುವ ಹೊಸ ವೈಶಿಷ್ಟ್ಯವನ್ನು ಆರಂಭಿಸಿದೆ. ಇದರ ಮೂಲಕ ಗ್ರಾಹಕರು ಬೇರೆ ಬ್ಯಾಂಕ್‌ಗಳಲ್ಲಿ ತಾವು ಹೊಂದಿರುವ ಖಾತೆಗಳನ್ನು ಸುಲಭವಾಗಿ ಲಿಂಕ್ ಮಾಡಿ, ಆ ಖಾತೆಗಳ ಮಾಹಿತಿ ತಿಳಿಯಬಹುದು. ಈ ಸೌಲಭ್ಯವು ಸದ್ಯಕ್ಕೆ ಎಕ್ಸಿಸ್ ಬ್ಯಾಂಕ್‌ನಲ್ಲಿ ಖಾತೆ ಹೊಂದಿರುವವರಿಗೆ ಮಾತ್ರವೇ ಸೀಮಿತವಾಗಿದ್ದು, ಎಕ್ಸಿಸ್ ಬ್ಯಾಂಕ್‌ನಲ್ಲಿ ಖಾತೆ ಹೊಂದದೇ ಇರುವವರಿಗೆ ಕೂಡ ಶೀಘ್ರದಲ್ಲಿಯೇ ಲಭ್ಯವಾಗಲಿದೆ ಎಂದು ಬ್ಯಾಂಕ್‌ನ ಡಿಜಿಟಲ್ ವಹಿವಾಟಿನ ಅಧ್ಯಕ್ಷ ಸಮೀರ್ ಶೆಟ್ಟಿ ಅವರು ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಅಕೌಂಟ್ ಅಗ್ರಿಗೇಟರ್ ವ್ಯವಸ್ಥೆಯ ಮೂಲಕ ಇದು ಸಾಧ್ಯವಾಗಿದೆ. ಈ ವ್ಯವಸ್ಥೆ ಬಳಸಿ ವೈಯಕ್ತಿಕ ಸಾಲ, ಕ್ರೆಡಿಟ್ ಕಾರ್ಡ್, ವಾಹನ ಸಾಲ, ಸಣ್ಣ ಉದ್ದಿಮೆಗೆ ಸಾಲವನ್ನು ಬ್ಯಾಂಕ್ ನೀಡಲಿದೆ. ಬ್ಯಾಂಕ್‌ನ ಹಾಲಿ ಗ್ರಾಹಕರಿಗೆ ಮತ್ತು ಹೊಸ ಗ್ರಾಹಕರಿಗೆ ಡಿಜಿಟಲ್ ಮಾರ್ಗದ ಮೂಲಕವೇ ತಕ್ಷಣ ಸಾಲ ಮಂಜೂರು ಮಾಡಲಾಗುವುದು ಎಂದು ಸಮೀರ್ ತಿಳಿಸಿದರು.

ಬೇಡವೆಂದಾಗ ಖಾತೆಯನ್ನು ಸುಲಭವಾಗಿ ಡೀ–ಲಿಂಕ್ ಮಾಡಬಹುದು. ಲಿಂಕ್ ಆಗಿರುವ ಯಾವುದೇ ಖಾತೆಯಲ್ಲಿನ ವರ್ಗಾವಣೆಯ ಮಾಹಿತಿಯನ್ನು ಡೌನ್‌ಲೋಡ್ ಮಾಡಿಕೊಂಡು ಇ–ಮೇಲ್ ಸಹ ಮಾಡಿಕೊಳ್ಳಬಹುದು ಎಂದು ಅವರು ಹೇಳಿದರು.

₹2,000 ಮುಖಬೆಲೆಯ ನೋಟು ಸ್ವೀಕರಿಸಲಿರುವ ಅಮೆಜಾನ್ ಪೇ

ನವದೆಹಲಿ (ಪಿಟಿಐ): ಅಮೆಜಾನ್ ಗ್ರಾಹಕರು ₹2,000 ಮುಖಬೆಲೆಯ ನೋಟುಗಳನ್ನು ಬಳಸಿ ತಮ್ಮ ಅಮೆಜಾನ್ ಪೇ ವಾಲೆಟ್‌ಗೆ ಹಣ ಭರ್ತಿ ಮಾಡಿಕೊಳ್ಳಬಹುದು. ಅಮೆಜಾನ್ ಮೂಲಕ ಯಾವುದಾದರೂ ಉತ್ಪನ್ನವನ್ನು ಕ್ಯಾಷ್–ಆನ್–ಡೆಲಿವರಿ ಆಯ್ಕೆ ಬಳಸಿ ತರಿಸಿಕೊಂಡು, ಆ ಉತ್ಪನ್ನಕ್ಕೆ ಹಣ ಪಾವತಿ ಮಾಡುವ ಸಂದರ್ಭದಲ್ಲಿ, ₹2,000 ನೋಟು ನೀಡಿ ವಾಲೆಟ್‌ಗೆ ಹಣ ಭರ್ತಿ ಮಾಡಿಕೊಳ್ಳಬಹುದು.

₹2,000 ಮುಖಬೆಲೆಯ ನೋಟುಗಳನ್ನೂ ಒಳಗೊಂಡಂತೆ, ಗ್ರಾಹಕರು ತಿಂಗಳಿಗೆ ಗರಿಷ್ಠ ₹50 ಸಾವಿರದವರೆಗೆ ನಗದು ಜಮಾ ಮಾಡಬಹುದು ಎಂದು ಅಮೆಜಾನ್ ಹೇಳಿದೆ. 'ಯಾವುದಾದರೂ ಅಂಗಡಿ ₹2,000 ಮುಖಬೆಲೆಯ ನೋಟು ಸ್ವೀಕರಿಸಲು ನಿರಾಕರಿಸಿದರೆ ತಲೆಬಿಸಿ ಮಾಡಿಕೊಳ್ಳಬೇಡಿ. ಕ್ಯಾಷ್–ಆನ್–ಡೆಲಿವರಿ ಆಯ್ಕೆಯ ಮೂಲಕ ಖರೀದಿಸಿದ ಉತ್ಪನ್ನವನ್ನು ನಿಮಗೆ ತಲುಪಿಸಲು ಬರುವ ಅಮೆಜಾನ್ ಡೆಲಿವರಿ ಏಜೆಂಟ್‌ಗೆ ಆ ನೋಟನ್ನು ನೀವು ನೀಡಬಹುದು' ಎಂದು ಕಂಪನಿ ಹೇಳಿದೆ.

₹2,000 ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂದಕ್ಕೆ ಪಡೆಯುತ್ತಿರುವುದಾಗಿ ಆರ್‌ಬಿಐ ಹೇಳಿದೆ. ಈ ನೋಟುಗಳನ್ನು ಖಾತೆಗೆ ಜಮಾ ಮಾಡಲು ಅಥವಾ ವಿನಿಮಯ ಮಾಡಿಕೊಳ್ಳಲು ಸೆಪ್ಟೆಂಬರ್ 30ರವರೆಗೆ ಅವಕಾಶ ಇದೆ.

ಕೆವೈಸಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿರುವ ಗ್ರಾಹಕರು ಮಾತ್ರ ಅಮೆಜಾನ್ ಡೆಲಿವರಿ ಏಜೆಂಟ್‌ಗೆ ತಮ್ಮಲ್ಲಿನ ₹2,000 ಮುಖಬೆಲೆಯ ನೋಟುಗಳನ್ನು ಕೊಟ್ಟು, ಆ ಹಣವನ್ನು ಅಮೆಜಾನ್ ಪೇ ವಾಲೆಟ್‌ಗೆ ಭರ್ತಿ ಮಾಡುವಂತೆ ಹೇಳಬಹುದು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000 - 1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು -	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-40500
ಹಳತು	48000-53000
ಕುಂದಾಪುರ	
ಹಳೆಚಾಲಿ	43000-46000
ಹೊಸಚಾಲಿ	36000-39000
ಕಾರ್ಕಳ	
ಹೊಸತು	30000-40500
ಹಳತು	40000-53000
ಪುತ್ತೂರು	
ಕೋಕ	11000-25000
ಹೊಸತು	33500-41000
ಶಿವಮೊಗ್ಗ	
ಬೆಟ್ಟೆ	48499-55100
ಗೊರಬಲು	17009-39926
ರಾಶಿ	37499-53999
ಸರಕು	---
ಸರಕು	52399-86400
ಸಿದ್ದಾಪುರ	
ಬಿಳಿಗೋಟು	30119-33899
ಚಾಲಿ	36449-39500
ಕೋಕ	28909-32899
ಕೆಂಪುಗೋಟು	30112-35889
ರಾಶಿ	45869-51059
ಹಳೆಚಾಲಿ	----
ತಟ್ಟಿಬೆಟ್ಟೆ	40569-48099
ಶಿರಸಿ	
ಬೆಟ್ಟೆ	39399-48899
ಬಿಳಿಗೋಟು	24109-34899
ಚಾಲಿ	34671-40001
ಕೆಂಪುಗೋಟು	23596-37521
ರಾಶಿ	46099-51399
ಸೊರಬ	
ಬಿಳಿಗೋಟು	30499-30499
ರಾಶಿ	48709-51099
ಸಿಪ್ಪೆಗೋಟು	18600-20313
ಚಾಲಿ	32313-37899
ಗೊಬರಲು	30199-36099
ತುಮಕೂರು	
ರಾಶಿ	51000-52100

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15200	15000	15150	177.45
ಎಸಿ	7980	8000	7700	
ಆರ್‌ಪಿ	10800	10800	10750	ಲಂಡನ್
ಆರ್‌ಸಿ	6360	254 on OT	6275	2807 ಡಾಲರ್ಸ್

ಟಾಟಾ ಪವರ್: ಆಕರ್ಷಕ ಉದ್ಯೋಗದಾತ

ಮುಂಬೈ (ಪಿಟಿಐ): ಭಾರತದ ಅತ್ಯಂತ ಆಕರ್ಷಕ ಉದ್ಯೋಗದಾತ ಬ್ರ್ಯಾಂಡ್ ಎಂಬ ಖ್ಯಾತಿಗೆ ಟಾಟಾ ಪವರ್ ಕಂಪನಿ ಪಾತ್ರವಾಗಿದೆ. ಎರಡು, ಮೂರನೆಯ ಸ್ಥಾನಗಳಲ್ಲಿ ಕ್ರಮವಾಗಿ ಅಮೆಜಾನ್ ಮತ್ತು ಟಾಟಾ ಸ್ಟೀಲ್ ಇವೆ.

ಮಾನವ ಸಂಪನ್ಮೂಲ ಸೇವೆ ಒದಗಿಸುವ ರ‍್ಯಾಂಡ್‌ಸ್ಟಡ್ ಇಂಡಿಯಾ ಕಂಪನಿಯ ವಾರ್ಷಿಕ ವರದಿಯು, 'ಈ ಮೂರು ಕಂಪನಿಗಳು ಆರ್ಥಿಕ ಸ್ಥಿತಿಗತಿ, ಒಳ್ಳೆಯ ಹೆಸರು, ವೃತ್ತಿಯಲ್ಲಿ ಮುನ್ನಡೆ ಮಾನದಂಡಗಳಲ್ಲಿ ಅತಿಹೆಚ್ಚು ಅಂಕ ಗಳಿಸಿವೆ' ಎಂದು ಹೇಳಿದೆ.

ನಾಲ್ಕನೆಯ ಸ್ಥಾನದಲ್ಲಿ ಟಿಸಿಎಸ್ ಇದೆ. ನಂತರದ ಸ್ಥಾನಗಳಲ್ಲಿ ಮೈಕ್ರೊಸಾಫ್ಟ್, ಸ್ಯಾಮ್ಸಂಗ್ ಇಂಡಿಯಾ, ಇನ್ಫೊಸಿಸ್, ಟಾಟಾ ಮೋಟರ್ಸ್, ಐಬಿಎಂ ಮತ್ತು ರಿಲಯನ್ಸ್ ಇವೆ.

ನವೋದ್ಯಮಗಳ ಪೈಕಿ ಅತ್ಯಂತ ಆಕರ್ಷಕ ಉದ್ಯೋಗದಾತ ಕಂಪನಿ ಎಂಬ ಹೆಗ್ಗಳಿಕೆಯು ಟಾಟಾ ಸಮೂಹಕ್ಕೆ ಸೇರಿರುವ ಬಿಗ್‌ಬಾಸ್ಕೆಟ್ ಪಾಲಾಗಿದೆ.

ಸ್ಯಾಫ್ ಫುಟ್‌ಬಾಲ್: ಪಾಕಿಸ್ತಾನ ವಿರುದ್ಧ 4–0 ಗೋಲುಗಳ ಭರ್ಜರಿ ಗೆಲುವು

ಚೆಟ್ರಿ ಹ್ಯಾಟ್ರಿಕ್; ಭಾರತ ಜಯಭೇರಿ

• ಮಹಮ್ಮದ್ ನೂಮಾನ್

ಬೆಂಗಳೂರು: ನಾಯಕ ಸುನಿಲ್ ಚೆಟ್ರಿ ಅವರ ಹ್ಯಾಟ್ರಿಕ್ ನೆರವಿನಿಂದ ಭಾರತ ತಂಡ, ಸ್ಯಾಫ್ ಫುಟ್ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿಯೆಡೆಗಿನ ಅಭಿಯಾನವನ್ನು ಭರ್ಜರಿಯಾಗಿಯೇ ಆರಂಭಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ರಾತ್ರಿ ಕಿಕ್ಕಿರಿದಿದ್ದ ಪ್ರೇಕ್ಷಕರಿಗೆ ರಸದೌತಣ ಉಣಬಡಿಸಿದ ಪಂದ್ಯದಲ್ಲಿ ಆತಿಥೇಯರು 4-0 ಗೋಲುಗಳಿಂದ ಪಾಕಿಸ್ತಾನ ತಂಡವನ್ನು ಮಣಿಸಿದರು.

10 ನೇ ನಿಮಿಷದಲ್ಲಿ ಗೋಲಿನ ಖಾತೆ ತೆರೆದ ಚೆಟ್ರಿ, 14 ಮತ್ತು 74 ನೇ ನಿಮಿಷದಲ್ಲಿ ಪೆನಾಲ್ಟಿ ಕಿಕ್ ಅವಕಾಶದಲ್ಲಿ ಚೆಂಡನ್ನು ಗುರಿ ಸೇರಿಸಿದರು. ಮತ್ತೊಂದು ಗೋಲನ್ನು ಉದಾಂತ ಸಿಂಗ್ (81ನೇ ನಿ.) ತಂದಿತ್ತರು.

ಸುದೀರ್ಘ ಪ್ರಯಾಣದಿಂದ ಬಸವಳಿದಿದ್ದ ಪಾಕ್ ಆಟಗಾರರು, ಸಾಕಷ್ಟು ವಿಶ್ರಾಂತಿ ಇಲ್ಲದೆ ಕಣಕ್ಕಿಳಿದಿದ್ದರು. ಚೆಟ್ರಿ ಬಳಗದ ಶಿಸ್ತಿನ ಆಟಕ್ಕೆ ತಕ್ಕ ಪೈಪೋಟಿ ಒಡ್ಡದೇ ಶರಣಾದರು.

ಆಕರ್ಷಕ ಡ್ರಿಬ್ಲಿಂಗ್, ನಿಖರ ಪಾಸ್‌ಗಳು ಮತ್ತು ರಕ್ಷಣಾ ವಿಭಾಗದಲ್ಲಿ ಛಲದ ಆಟವಾಡಿದ ಭಾರತ, ಅರ್ಹ ಗೆಲುವು ಒಲಿಸಿಕೊಂಡಿತು. 10 ನಿಮಿಷ ಆಗುವಷ್ಟರಲ್ಲೇ ಗೋಲು ಗಳಿಸಿದ್ದು ಭಾರತದ ಆಟಗಾರರಲ್ಲಿ ಉತ್ಸಾಹ ಮೂಡಿಸಿತು. ಪಾಕ್ ಗೋಲ್‌ಕೀಪರ್ ಮಾಡಿದ ತಪ್ಪು ಈ ಗೋಲಿಗೆ ಹಾದಿಯೊದಗಿಸಿತು. ಅವರು ಸಹ ಆಟಗಾರನತ್ತ ಒದ್ದ ಚೆಂಡನ್ನು ಚಾಣಾಕ್ಷ ರೀತಿಯಲ್ಲಿ ನಿಯಂತ್ರಣಕ್ಕೆ ಪಡೆದುಕೊಂಡ ಚೆಟ್ರಿ, ಗುರಿ ಸೇರಿಸಿದರು.

ಅದಾದ ಬಳಿಕ ಭಾರತಕ್ಕೆ ದೊರೆತ ಎರಡೂ ಪೆನಾಲ್ಟಿ ಕಿಕ್ ಅವಕಾಶಗಳನ್ನು ಚೆಟ್ರಿ ಗೋಲಾಗಿ ಪರಿವರ್ತಿಸಿ, ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಗೋಲುಗಳ ಸಂಖ್ಯೆಯನ್ನು 90ಕ್ಕೆ ಹೆಚ್ಚಿಸಿಕೊಂಡರು. ಇರಾನ್‌ನ ಅಲಿ ದಾಯಿ (109 ಗೋಲು) ಬಳಿಕ ಅತಿಹೆಚ್ಚು ಗೋಲುಗಳನ್ನು ಗಳಿಸಿದ ಏಷ್ಯಾದ ಎರಡನೇ ಆಟಗಾರ ಎನಿಸಿಕೊಂಡರು.

ಪಾಕ್ ಸ್ಟ್ರೈಕರ್‌ಗಳಾದ ಹಸನ್ ಬಶೀರ್, ಹಾರುನ್ ಹಮೀದ್ ಮತ್ತು ಆತಿಸ್ ಖಾನ್ ಅವರನ್ನು ಕಟ್ಟಿಹಾಕಲು ಸಂದೇಶ್ ಜಿಂಘಾನ್ ಒಳಗೊಂಡ ಭಾರತದ ಡಿಫೆಂಡರ್‌ಗಳು ಯಶಸ್ವಿಯಾದರು.

2018ರ ಬಳಿಕ ಭಾರತ– ಪಾಕ್ ಫುಟ್‌ಬಾಲ್ ತಂಡಗಳು ಎದುರಾಗಿದ್ದು ಇದೇ ಮೊದಲು. ಅಂದು ನಡೆದಿದ್ದ ಸ್ಯಾಫ್ ಟೂರ್ನಿಯ ಪಂದ್ಯವನ್ನು ಭಾರತ 3–1 ಗೋಲುಗಳಿಂದ ಜಯಿಸಿತ್ತು.

ಮಳೆಯಲ್ಲೇ ಆಟ: ಪಂದ್ಯ ಆರಂಭವಾಗುತ್ತಿದ್ದಂತೆಯೇ ಸಣ್ಣದಾಗಿ ಮಳೆಯೂ ಶುರುವಾಯಿತು. 37ನೇ ನಿಮಿಷ ಆದಾಗ ಜೋರಾಗಿ ಸುರಿಯಲಾರಂಭಿಸಿತು. ಇದರಿಂದ ಆಟದ ವೇಗ ತಗ್ಗಿತು. ಚೆಂಡಿನ ಮೇಲೆ ನಿಯಂತ್ರಣ ಸಾಧಿಸಲು ಎರಡೂ ತಂಡಗಳ ಆಟಗಾರರು ಹರಸಾಹಸಪಟ್ಟರು.

ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಸ್ಯಾಫ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಭಾರತದ ನಾಯಕ ಸುನಿಲ್ ಚೆಟ್ರಿ ಮತ್ತು ಪಾಕಿಸ್ತಾನದ ಈಸಾ ಸುಲೈಮಾನ್ ಚೆಂಡಿಗಾಗಿ ಸೆಣಸುತ್ತಿರುವುದು –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌ಜಿ.

ಸ್ಟಿಮ್ಯಾಚ್‌ಗೆ ರೆಡ್ ಕಾರ್ಡ್

ಮೊದಲ ಅವಧಿಯ ಆಟ ಕೊನೆಗೊಳ್ಳಲು ಕೆಲವೇ ಸೆಕೆಂಡುಗಳು ಇದ್ದಾಗ ಭಾರತ ತಂಡದ ಕೋಚ್ ಇಗೋರ್ ಸ್ಟಿಮ್ಯಾಚ್ ‘ಅಶಿಸ್ತಿನ ವರ್ತನೆ’ ತೋರಿದರು. ಪಾಕ್ ಆಟಗಾರ ಅಬ್ದುಲ್ಲಾ ಇಕ್ಬಾಲ್ ಅವರು ಥ್ರೋ ಇನ್ ಮಾಡಲು ಮುಂದಾದಾಗ, ಅಲ್ಲೇ ಇದ್ದ ಸ್ಟಿಮ್ಯಾಚ್ ಚೆಂಡನ್ನು ಅನಗತ್ಯವಾಗಿ ಅವರ ಕೈಯಿಂದ ಕಿತ್ತುಕೊಂಡರು. ಈ ವೇಳೆ ಪಾಕ್ ಆಟಗಾರರು ಆಕ್ರೋಶ ವ್ಯಕ್ತಪಡಿಸಿ ಸ್ಟಿಮ್ಯಾಚ್ ಅವರತ್ತ ಧಾವಿಸಿ ಬಂದರು. ಉಭಯ ತಂಡಗಳ ಆಟಗಾರರು ಮತ್ತು ಕೋಚಿಂಗ್ ಸಿಬ್ಬಂದಿ ಮಧ್ಯೆ ಮಾತಿನ ಚಕಮಕಿ, ನೂಕಾಟ ನಡೆಯಿತು. ರೆಫರಿ ಮಧ್ಯಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು. ಸ್ಟಿಮ್ಯಾಚ್ ಅವರಿಗೆ ರೆಡ್ ಕಾರ್ಡ್ ತೋರಿಸಿದರು.

ಇಂದಿನ ಪಂದ್ಯ

Vs ಲೆಬನಾನ್– ಬಾಂಗ್ಲಾದೇಶ (ಮಧ್ಯಾಹ್ನ 3.30)

Vs ಮಾಲ್ದೀವ್ಸ್– ಭೂತಾನ್ (ರಾತ್ರಿ 7.30)

ಕಾವೇರಿದ ವಾತಾವರಣ

ಭಾರತ–ಪಾಕಿಸ್ತಾನ ಹಣಾಹಣಿಯೆಂದರೆ ಅಲ್ಲಿ ಕಾವೇರಿದ ವಾತಾವರಣ ಇರುತ್ತದೆ. ಈ ಪಂದ್ಯವೂ ಅದರಿಂದ ಹೊರತಾಗಿರಲಿಲ್ಲ. 90 ನಿಮಿಷಗಳ ಆಟವನ್ನೂ ಪ್ರೇಕ್ಷಕರು ಚೆನ್ನಾಗಿ ಆನಂದಿಸಿದರು. ಭಾರತ ತಂಡಕ್ಕೆ ಬೆಂಬಲ ನೀಡುವ ಜತೆಯಲ್ಲೇ, ಅವಕಾಶ ಸಿಕ್ಕಾಗ ಎದುರಾಳಿ ಆಟಗಾರರನ್ನು ಕೆಣಕಿದರು.

ಅಂಗಳಕ್ಕೆ ನುಗ್ಗಿದ ಮೂವರು ಪ್ರೇಕ್ಷಕರನ್ನು ಭದ್ರತಾ ಸಿಬ್ಬಂದಿ ಹೊರಕ್ಕೆ ಎಳೆದೊಯ್ದರು. ಪ್ರೇಕ್ಷಕರ ಕಡೆಯಿಂದ ತೂರಿ ಬಂದ ಒಂದೆರಡು ನೀರಿನ ಬಾಟ್ಲಿ ಅಂಗಳದ ಬದಿಗೆ ಬಿದ್ದವು.

ಕುವೈತ್‌ಗೆ ಗೆಲುವು: ಬುಧವಾರ ಮಧ್ಯಾಹ್ನ ನಡೆದ ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ಕುವೈತ್ 3–1 ಗೋಲುಗಳಿಂದ ನೇಪಾಳ ತಂಡವನ್ನು ಮಣಿಸಿತು. ಖಾಲಿದ್ ಎಲ್ ಇಬ್ರಾಹಿಂ (23ನೇ ನಿ.), ಶಬೀಬ್ ಅಲ್ ಖಾಲ್ದಿ (41ನೇ ನಿ.), ಮೊಹಮ್ಮದ್ ಅಬ್ದುಲ್ಲಾ ದಹಾಂ (65ನೇ ನಿ.) ಅವರು ಕುವೈತ್ ಪರ ಚೆಂಡನ್ನು ಗುರಿ ಸೇರಿಸಿದರೆ, ನೇಪಾಳ ತಂಡದ ಏಕೈಕ ಗೋಲನ್ನು ಅಂಜನ್ ಬಿಸ್ಟಾ (68) ಗಳಿಸಿದರು.

ಕರ್ನಾಟಕ ಮಹಿಳೆಯರ ಶುಭಾರಂಭ

ರಾಷ್ಟ್ರೀಯ ವಾಟರ್ ಪೋಲೊ: ರೋಹಿಣಿ ಮಿಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥೇಯ ಕರ್ನಾಟಕ ಮಹಿಳೆಯರ ತಂಡವು ಬುಧವಾರ ಆರಂಭವಾದ 76ನೇ ರಾಷ್ಟ್ರೀಯ ವಾಟರ್ ಪೋಲೊ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿತು. ಕರ್ನಾಟಕ ಪುರುಷರ ತಂಡವು ನಿರಾಶೆ ಅನುಭವಿಸಿತು.

ಕರ್ನಾಟಕ ಈಜು ಸಂಸ್ಥೆಯ ಆಶ್ರಯದಲ್ಲಿ ಬಸವನಗುಡಿ ಈಜು ಕೇಂದ್ರದಲ್ಲಿ ನಡೆಯುತ್ತಿರುವ ಸ್ಪರ್ಧೆಯಲ್ಲಿ ಎಸ್. ರೋಹಿಣಿ ಅವರ ಅಮೋಘ ಆಟದ ಬಲದಿಂದ ಕರ್ನಾಟಕ ತಂಡವು 18–0 ಯಿಂದ ಹರಿಯಾಣ ವಿರುದ್ಧ ಜಯಿಸಿತು.

ಪುರುಷರ ವಿಭಾಗದಲ್ಲಿ ಕರ್ನಾಟಕ ತಂಡವು 4–13ರಿಂದ ಬಂಗಾಳ ವಿರುದ್ಧ ಮಣಿಯಿತು. ಬಂಗಾಳದ ಸೌವಿಕ್ ಧಾಲಿ ಉತ್ತಮ ಆಟವಾಡಿದರು.

ಇದೇ ಮೊದಲ ಸಲ ಈಜುಕೂಟದಿಂದ ಪ್ರತ್ಯೇಕವಾಗಿ ವಾಟರ್ ಪೋಲೊ ಹಾಗೂ ಡೈವಿಂಗ್ ಚಾಂಪಿಯನ್ ಷಿಪ್ ಆಯೋಜಿಸಲಾಗಿದೆ. ಗುರುವಾರ ಭಾರತ ಕ್ರೀಡಾ ಪ್ರಾಧಿಕಾರದಲ್ಲಿ ಡೈವಿಂಗ್ ಸ್ಪರ್ಧೆ ಆರಂಭವಾಗಲಿವೆ. 50ಕ್ಕೂ ಹೆಚ್ಚು ಸ್ಪರ್ಧಿಗಳಿದ್ದಾರೆ.

ಫಲಿತಾಂಶಗಳು: ಪುರುಷರು: ಕೇರಳ 33–0ಯಿಂದ ಅಸ್ಸಾಂ ಎದುರು; ಆರ್‌ಎಸ್‌ಪಿಬಿ 13–1ರಿಂದ ಪಂಜಾಬ್ ಎದುರು; ಎಸ್‌ಎಸ್‌ಸಿಬಿ 9–4ರಿಂದ ಮಹಾರಾಷ್ಟ್ರ ವಿರುದ್ಧ; ಪೊಲೀಸ್ 22–0ಯಿಂದ ತಮಿಳುನಾಡು ಎದುರು ಹಾಗೂ ಹರಿಯಾಣ 19–0ಯಿಂದ ತೆಲಂಗಾಣದ ವಿರುದ್ಧ ಗೆದ್ದಿತು.

ಮಹಿಳೆಯರು: ಕೇರಳ ತಂಡವು 19–0ಯಿಂದ ಹರಿಯಾಣ ಎದುರು; ಮಹಾರಾಷ್ಟ್ರವು 22–0ಯಿಂದ ತಮಿಳುನಾಡು ಎದುರು; ದೆಹಲಿ ತಂಡವು 12–0ಯಿಂದ ತೆಲಂಗಾಣ ವಿರುದ್ಧ ಜಯಿಸಿದವು.

ಪಶ್ಚಿಮ ಬಂಗಾಳ ತಂಡದ ಅಲ್ವಿ ರಿಜ್ ಗೋಲು ಗಳಿಸಲು ಮಾಡಿದ ಪ್ರಯತ್ನಕ್ಕೆ ಕರ್ನಾಟಕದ ಗೋಲ್‌ಕೀಪರ್ ಶಶಾಂಕ್ ಪಿ. ತಡೆಯೊಡ್ಡಲು ಪ್ರಯತ್ನಿಸಿದರು ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ಭಾರತ ಕುಸ್ತಿ ಫೆಡರೇಷನ್ ಚುನಾವಣೆ ಮುಂದೂಡಿಕೆ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್‌ಗೆ ಜುಲೈ 6ರಂದು ನಡೆಯಬೇಕಿದ್ದ ಚುನಾವಣೆಯನ್ನು ಭಾರತ ಒಲಿಂಪಿಕ್ ಸಂಸ್ಥೆಯ ಅಡ್ ಹಾಕ್ ಸಮಿತಿ ಬುಧವಾರ ಮುಂದೂಡಿದ್ದು, ಪರಿಷ್ಕೃತ ವೇಳಾಪಟ್ಟಿಯಂತೆ ಜುಲೈ 11ರಂದು ನಡೆಯಲಿದೆ.

ಡಬ್ಲ್ಯುಎಫ್‌ಐನಿಂದ ಮಾನ್ಯತೆ ಕಳೆದುಕೊಂಡ ಐದು ರಾಜ್ಯಗಳ ಘಟಕಗಳು ಮತದಾನದ ಹಕ್ಕು ಕೋರಿ ಅಹವಾಲು ಸಲ್ಲಿಸಿದ್ದವು.

ಮಹಾರಾಷ್ಟ್ರ, ಹರಿಯಾಣ, ತೆಲಂಗಾಣ, ರಾಜಸ್ಥಾನ ಮತ್ತು ಹಿಮಾಚಲ ಪ್ರದೇಶ ಘಟಕಗಳು, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಂ.ಎಂ.ಕುಮಾರ್ ಅವರನ್ನು ಒಳಗೊಂಡ ಮೂವರು ಸದಸ್ಯರ ಸಮಿತಿ ಮುಂದೆ ಮತದಾನದ ಹಕ್ಕು ಕೋರಿದ್ದವು.

ಬುಧವಾರ ಅವುಗಳ ಅಹವಾಲು ಆಲಿಸಲಾಯಿತು.

ಮಹಿಳಾ ಎಮರ್ಜಿಂಗ್ ಏಷ್ಯಾ ಕಪ್: ಬಾಂಗ್ಲಾ ವಿರುದ್ಧ ಗೆದ್ದ ಭಾರತಕ್ಕೆ ಪ್ರಶಸ್ತಿ

ಮಾಂಗ್ ಕಾಕ್ (ಹಾಂಗ್‌ಕಾಂಗ್), (ಪಿಟಿಐ): ಕನ್ನಡತಿ ಶ್ರೇಯಾಂಕ ಪಾಟೀಲ ಮತ್ತು ಮನ್ನತ್ ಕಶ್ಯಪ್ ಅವರ ಸ್ಪಿನ್ ದಾಳಿಯ ನೆರವಿನಿಂದ ಭಾರತ ತಂಡ 31 ರನ್‌ಗಳಿಂದ ಬಾಂಗ್ಲಾದೇಶವನ್ನು ಸೋಲಿಸಿ ಮಹಿಳಾ ಎಮರ್ಜಿಂಗ್ ಏಷ್ಯಾ ಕಪ್ ಟಿ–20 ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿತು.

ಬುಧವಾರ ನಡೆದ ಫೈನಲ್‌ನಲ್ಲಿ ಟಾಸ್ ಗೆದ್ದು ಬ್ಯಾಟ್ ಮಾಡಿದ ಭಾರತ 7 ವಿಕೆಟ್‌ಗೆ 127 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ಆದರೆ ಆಫ್ ಸ್ಪಿನ್ನರ್ ಶ್ರೇಯಾಂಕಾ (13ಕ್ಕೆ4) ಮತ್ತು ಎಡಗೈ ಸ್ಪಿನ್ನರ್ ಮನ್ನತ್ ಕಶ್ಯಪ್ (20ಕ್ಕೆ3) ಅವರ ಪರಿಣಾಮಕಾರಿ ದಾಳಿ ಎದುರು ಪರದಾಡಿದ ಬಾಂಗ್ಲಾದೇಶ ತಂಡ 19.2 ಓವರುಗಳಲ್ಲಿ 96 ರನ್ನಿಗೆ ಕುಸಿಯಿತು. ಆಫ್ ಬ್ರೇಕ್ ಬೌಲರ್ ಕನಿಕಾ ಅಹುಜಾ ಎರಡು ವಿಕೆಟ್ ಪಡೆದರು.

ಬಾಂಗ್ಲಾ ಪರ ಶೋಭನಾ ಮೊಸ್ತರಿ (16) ಮತ್ತು ನಹೀದಾ ಅಖ್ತರ್ (ಔಟಾಗದೇ 17) ಮಾತ್ರ ಕೊಂಚ ಪ್ರತಿರೋಧ ತೋರಿದರು.

ಇದಕ್ಕೆ ಮೊದಲು, ದಿನೇಶ್ ವೃಂದಾ (29 ಎಸೆತಗಳಲ್ಲಿ 36) ಭಾರತ ತಂಡದ ಪರ ಉಪಯುಕ್ತ ಆಟವಾಡಿದ್ದರು. ಕನಿಕಾ ಅಹುಜಾ (23 ಎಸೆತಗಳಲ್ಲಿ ಅಜಯೇ 30) ಕೊನೆಯಲ್ಲಿ ಇನಿಂಗ್ಸ್‌ಗೆ ವೇಗ ನೀಡಿದರು. ಬಾಂಗ್ಲಾ ಪರ ಎಡಗೈ ಸ್ಪಿನ್ನರ್ ನಹೀದಾ ಅಖ್ತರ್ (13ಕ್ಕೆ2) ಮತ್ತು ಆಫ್ ಸ್ಪಿನ್ನರ್ ಸುಲ್ತಾನಾ ಖಾತುನ್ (30ಕ್ಕೆ2) ಎದುರಾಳಿಗಳಿಗೆ ಕಡಿವಾಣ ಹಾಕಿದರು.

ಶ್ರೇಯಾಂಕ ಪಾಟೀಲ

ಕೆಲವೇ ಗಂಟೆ ಮುಂಚೆ ಬಂದಿಳಿದ ಪಾಕ್ ತಂಡ

ಬೆಂಗಳೂರು: ಪಾಕಿಸ್ತಾನ ತಂಡದ ಆಟಗಾರರು ಸ್ಯಾಫ್ ಫುಟ್‌ಬಾಲ್ ಟೂರ್ನಿಯ ಪಂದ್ಯದ ಆರಂಭಕ್ಕೆ ಕೆಲವೇ ಗಂಟೆಗಳಿಗೆ ಮುಂಚೆ ಬೆಂಗಳೂರು ತಲುಪಿದ್ದಾರೆ.

ಮಾರಿಷಸ್‌ನಲ್ಲಿದ್ದ ಪಾಕ್ ತಂಡ ಮಂಗಳವಾರ ತಡರಾತ್ರಿ ಮುಂಬೈಗೆ ಬಂದಿಳಿದಿದೆ. ಆಟಗಾರರು ಮತ್ತು ಕೋಚಿಂಗ್ ಸಿಬ್ಬಂದಿ ಸೇರಿದಂತೆ 32 ಸದಸ್ಯರಿಗೆ ಮುಂಬೈನಿಂದ ಒಂದೇ ವಿಮಾನದಲ್ಲಿ ಬೆಂಗಳೂರಿಗೆ ಬರಲು ಟಿಕೆಟ್ ಸಿಗಲಿಲ್ಲ. ಆದ್ದರಿಂದ ಎರಡು ಬ್ಯಾಚ್‌ಗಳಲ್ಲಿ ಉದ್ಯಾನನಗರಿಗೆ ಬಂದರು.

ಮೊದಲ ಬ್ಯಾಚ್, ಬುಧವಾರ ಬೆಳಿಗ್ಗೆ 4 ಗಂಟೆಗೆ ಮುಂಬೈನಿಂದ ಹೊರಟು ಬೆಂಗಳೂರು ತಲುಪಿತು. ಮುಂಬೈ ವಿಮಾನ ನಿಲ್ದಾಣದಲ್ಲಿ ಇಮಿಗ್ರೇಷನ್ ಪ್ರಕ್ರಿಯೆ ಮುಗಿಸಲು ತಡವಾದ್ದರಿಂದ ಉಳಿದವರು 9.15ರ ವಿಮಾನದಲ್ಲಿ ಬಂದರು. ಎರಡನೇ ಬ್ಯಾಚ್‌ನಲ್ಲಿ ಬಂದವರು ಹೋಟೆಲ್ ತಲುಪುವಾಗ ಮಧ್ಯಾಹ್ನ 1 ಗಂಟೆಯಾಗಿತ್ತು. ಅಂದರೆ ಪಂದ್ಯ ಆರಂಭಕ್ಕೆ (ರಾತ್ರಿ 7.30) ಕೇವಲ ಆರೂವರೆ ಗಂಟೆಗಳು ಬಾಕಿಯಿದ್ದವು.

ಟೂರ್ನಿಯ ಆರಂಭಕ್ಕೆ ಎರಡು ದಿನ ಮುಂಚಿತವಾಗಿ ಬೆಂಗಳೂರಿಗೆ ಬರಬೇಕಿದ್ದ ಪಾಕ್ ತಂಡದ ಪ್ರಯಾಣ, ವೀಸಾ ಸಮಸ್ಯೆಯ ಕಾರಣ ವಿಳಂಬವಾಗಿತ್ತು.

ಬಿಗಿ ಭದ್ರತೆ: ಪಾಕ್ ಆಟಗಾರರು ತಂಗಿರುವ ಹೋಟೆಲ್‌ಗೆ ಬಿಗಿ ಭದ್ರತೆ ಏರ್ಪಡಿಸಲಾಗಿದೆ. ಕಂಠೀರವ ಕ್ರೀಡಾಂಗಣ ಹಾಗೂ ಸುತ್ತಮುತ್ತ ಭದ್ರತೆಗಾಗಿ ಕೇಂದ್ರೀಯ ವಿಭಾಗದ ಡಿಸಿಪಿ ನೇತೃತ್ವದಲ್ಲಿ 500 ಪೊಲೀಸರನ್ನು ನಿಯೋಜಿಸಲಾಗಿತ್ತು.

ತೈಪೆ ಓಪನ್: ಪ್ರಣಯ್, ಕಶ್ಯಪ್ ಮುನ್ನಡೆ

ತೈಪೆ (ಪಿಟಿಐ): ಭಾರತದ ಎಚ್.ಎಸ್. ಪ್ರಣಯ್ ಮತ್ತು ಪರುಪಳ್ಳಿ ಕಶ್ಯಪ್ ಅವರು ತೈಪೆ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬುಧವಾರ ತಮ್ಮ ತಮ್ಮ ಎದುರಾಳಿಗಳ ವಿರುದ್ಧ ನೇರ ಸೆಟ್‌ಗಳಿಂದ ಗೆದ್ದು ಪ್ರಿಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.

ವಿಶ್ವದ 9ನೇ ಕ್ರಮಾಂಕದ ಆಟಗಾರ ಪ್ರಣಯ್ ಮೊದಲ ಸುತ್ತಿನ ಪಂದ್ಯದಲ್ಲಿ ಸ್ಥಳೀಯ ಆಟಗಾರ ಲಿನ್ ಯು ಸೀನ್ ಅವರನ್ನು 21–11, 21–10 ರಿಂದ ಸೋಲಿಸಲು ಅಷ್ಟೇನೂ ಬೆವರುಹರಿಸಲಿಲ್ಲ. ಕೇವಲ 26 ನಿಮಿಷಗಳಲ್ಲಿ ಗೆದ್ದ ಮೂರನೇ ಶ್ರೇಯಾಂಕದ ಪ್ರಣಯ್ ಮುಂದಿನ ಸುತ್ತಿನಲ್ಲಿ ಟಾಮಿ ಸುಗಿಯಾರ್ಟೊ ಅವರನ್ನು ಎದುರಿಸಲಿದ್ದಾರೆ. ಇಂಡೊನೇಷ್ಯಾದ ಸುಗಿಯಾರ್ಟೊ ಇನ್ನೊಂದು ಪಂದ್ಯದಲ್ಲಿ ಚೆನ್ ಚಿ ಟಾಂಗ್ ಅವರನ್ನು 18–21, 21–12, 21–17 ರಿಂದ ಸೋಲಿಸಿದರು.

ಕಾಮನ್‌ವೆಲ್ತ್ ಗೇಮ್ಸ್ ಮಾಜಿ ಚಾಂಪಿಯನ್ ಕಶ್ಯಪ್ ಕೂಡ ಹೆಚ್ಚು ಸವಾಲು ಎದುರಿಸದೇ 21–15, 21–16 ರಿಂದ ಜರ್ಮನಿಯ ಸಾಮ್ಯುಯೆಲ್ ಸಿಯೊಆವೊ ಮೇಲೆ ಜಯಗಳಿಸಿದರು. ಅವರ ಪ್ರಿಕ್ವಾರ್ಟರ್‌ಫೈನಲ್ ಎದುರಾಳಿ ಸ್ಥಳೀಯ ಆಟಗಾರ ಸು ಲಿ ಯಾಂಗ್.

ಭಾರತದ ಇನ್ನೊಬ್ಬ ಆಟಗಾರ ಎಸ್. ಶಂಕರ್ ಮುತ್ತುಸಾಮಿ ಸುಬ್ರಮಣಿಯನ್ ಮೊದಲ ಸುತ್ತಿನಲ್ಲೇ ಹೊರಬಿದ್ದರು. ಆರನೇ ಶ್ರೇಯಾಂಕದ ಕಾಂಟಾ ಸುನ್ಯಾಮಾ (ಜಪಾನ್) 21–13, 21–5 ರಿಂದ ಮುತ್ತುಸಾಮಿ ಮೇಲೆ ಜಯಗಳಿಸಿದರು.

ಆದರೆ ಭಾರತದ ಮೀರಬಾ ಮೈಸ್ನಮ್, ಸತೀಶ್ ಕುಮಾರ್ ಕರುಣಾಕರನ್ ಬೇಗನೇ ನಿರ್ಗಮಿಸಿದರು. ಹಾಂಗ್‌ಕಾಂಗ್‌ನ ಯಂಗ್ ಆ್ಯಂಗಸ್ ಲಾಂಗ್ 21–18, 21–17 ರಲ್ಲಿ ಭಾರತದ ಮೀರಬಾ ಲುವಾಂಗ್ ಮೈಸ್ನಮ್ ಮೇಲೆ ಗೆಲುವು ಸಾಧಿಸಿದರು. ಸ್ಥಳೀಯ ನೆಚ್ಚಿನ ಆಟಗಾರ ಚಿ ಯು ಜೆನ್ 21–10, 21–10 ರಲ್ಲಿ ನೇರ ಸೆಟ್‌ಗಳಿಂದ ಸತೀಶ್ ಕುಮಾರ್ ಅವರನ್ನು ಮಣಿಸಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಭಾರತದ ತಾನ್ಯಾ ಹೇಮಂತ್ ಮೊದಲ ಸುತ್ತಿನ ಪಂದ್ಯದಲ್ಲಿ 21–7, 21–17 ರಿಂದ ಹಂಗೆರಿಯ ಆ್ಯಗ್ನೆಸ್ ಕೊರೊಸಿ ಅವರನ್ನು ಸೋಲಿಸಿದರು.

ಖುಷ್ಬಿಕಾ, ಆಕರ್ಷಿಗೆ ಸೋಲು: ತೈವಾನ್‌ನ ಚಿಯು ಪಿನ್ ಚಿಯಾನ್ ಮೊದಲ ಸುತ್ತಿನ ಪಂದ್ಯದಲ್ಲಿ 21–12, 21–5 ರಿಂದ ಗದ್ದೆ ಖುಷ್ಬಿಕಾ ಶಿವಾನಿ ಮೇಲೆ ಯಶಸ್ಸು ಪಡೆದರೆಮ ಹುವಾಂಗ್ ಯು ಸುನ್ 10–21, 21–16, 21–11 ರಲ್ಲಿ ಹುವಾಂಗ್ ಯು ಸುನ್ ಅವರನ್ನು ಹಿಮ್ಮೆಟ್ಟಿಸಿದರು.

ಮಿಕ್ಸೆಡ್ ಡಬಲ್ಸ್‌ನಲ್ಲಿ ಭಾರತದ ರೋಹನ್ ಕಪೂರ್ ಮತ್ತು ಎನ್. ಸಿಕ್ಕಿ ರೆಡ್ಡಿ 21–14, 21–17 ರಿಂದ ಸ್ವದೇಶದ ಬಿ.ನವನೀತ್ ಮತ್ತು ಪ್ರಿಯಾ ಕೊಂಜೆನ್‌ಬಾಮ್ ಮೇಲೆ 31 ನಿಮಿಷಗಳಲ್ಲಿ ಜಯಗಳಿಸಿತು.

ಎಚ್.ಎಸ್. ಪ್ರಣಯ್

ಡೈಮಂಡ್ ಲೀಗ್: ನೀರಜ್ ಸ್ಪರ್ಧೆ ಖಚಿತ

ನವದೆಹಲಿ (ಪಿಟಿಐ): ಒಲಿಂಪಿಕ್ ಚಾಂಪಿಯನ್ ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ ಅವರು ಇದೇ 30ರಂದು ಲಾಸನ್‌ನಲ್ಲಿ ನಡೆಯಲಿರುವ ಡೈಮಂಡ್ ಲೀಗ್ ಆರನೇ ಹಂತದಲ್ಲಿ ಸ್ಪರ್ಧಿಸುವರು.

ಆಯೋಜಕರು ಬಿಡುಗಡೆ ಮಾಡಿರುವ ಸ್ಪರ್ಧಿಗಳ ಪಟ್ಟಿಯಲ್ಲಿ ಭಾರತದ ನೀರಜ್ ಹೆಸರು ಇದೆ. ಭಾರತದ ಅಥ್ಲೀಟ್‌ಗಳಾದ ಜೆಸ್ವಿನ್ ಅಲ್ಡ್ರೀನ್ ಮತ್ತು ಶ್ರೀಶಂಕರ್ ಅವರ ಹೆಸರುಗಳೂ ಲಾಂಗ್ ಜಂಪ್ ವಿಭಾಗದಲ್ಲಿ ಇವೆ.

’ಜಾವೆಲಿನ್ ಥ್ರೋನಲ್ಲಿ ನೀರಜ್ ಅವರಿಗೆ ಜೆಕ್ ಗಣರಾಜ್ಯದ ಜೇಕಬ್ ವಾಡ್ಲೆಚ್ ಮತ್ತು ಜರ್ಮನಿಯ ಜೂಲಿಯನ್ ವೇಬರ್ ಅವರು ಪೈಪೋಟಿಯೊಡ್ಡಲಿದ್ದಾರೆ‘ ಎಂದು ಡೈಮಂಡ್ ಲೀಗ್ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

25 ವರ್ಷದ ನೀರಜ್ ಅವರಿಗೆ ಮಾಂಸಖಂಡದ ಸೆಳೆತ ಇರುವುದರಿಂದಾಗಿ ಜೂನ್ 4ರಂದು ನೆದರ್ಲೆಂಡ್‌ನಲ್ಲಿ ನಡೆದಿದ್ದ ಎಫ್‌ಬಿಕೆ ಗೇಮ್ಸ್ ಹಾಗೂ 13ರಂದು ಫಿನ್ಲೆಂಡ್‌ನಲ್ಲಿ ನಡೆದಿದ್ದ ಪಾವೊ ನುರ್ಮಿ ಕೂಟಗಳಲ್ಲಿ ಭಾಗವಹಿಸಿರಲಿಲ್ಲ.

ಇದೇ 27 ರಂದು ಜೆಕ್ ಗಣರಾಜ್ಯದಲ್ಲಿ ನಡೆಯಲಿರುವ ಗೋಲ್ಡನ್ ಸ್ಪೈಕ್ ಒಸ್ಟ್ರಾವಾ ಕೂಟದಲ್ಲಿಯೂ ಅವರು ಭಾಗವಹಿಸುವ ನಿರೀಕ್ಷೆ ಇದೆ.

ನೀರಜ್ ಚೋಪ್ರಾ

ಡೇವಿಸ್ ಕಪ್ ವಿದಾಯಕ್ಕೆ ರೋಹನ್ ಬೋಪಣ್ಣ ಸಜ್ಜು

ನವದೆಹಲಿ (ಪಿಟಿಐ): ಕನ್ನಡಿಗ ರೋಹನ್ ಬೋಪಣ್ಣ ಅವರು ಡೇವಿಸ್ ಕಪ್ ಟೆನಿಸ್‌ಗೆ ವಿದಾಯ ಹೇಳಲು ನಿರ್ಧರಿಸಿದ್ದಾರೆ.

ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಮೊರಕ್ಕೊ ವಿರುದ್ಧದ ಡೇವಿಸ್ ಕಪ್ ಪಂದ್ಯವು ಅವರಿಗೆ ಕೊನೆಯದ್ದಾಗಲಿದೆ. ಆದರೆ ಈ ಪಂದ್ಯವು ಬೆಂಗಳೂರಿನಲ್ಲಿ ನಡೆದರೆ ತಮಗೆ ಅವಿಸ್ಮರಣೀಯವಾಗಲಿದೆ ಎಂಬ ಇಂಗಿತವನ್ನೂ ಅವರು ವ್ಯಕ್ತಪಡಿಸಿದ್ದಾರೆ. ಆದರೆ ಈ ಟೂರ್ನಿಯನ್ನು ಉತ್ತರಪ್ರದೇಶದ ರಾಜಧಾನಿ ಲಖನೌನಲ್ಲಿ ನಡೆಸಲು ಈ ಮುಂಚೆಯೇ ನಿರ್ಧರಿಸಲಾಗಿದೆ. ಭಾರತ ಮತ್ತು ಮೊರಕ್ಕೊ ತಂಡಗಳು ವಿಶ್ವ ಗುಂಪು ಎರಡರಲ್ಲಿ ಆಡಲಿವೆ.

43 ವರ್ಷದ ಬೋಪಣ್ಣ ಇದುವರೆಗೆ ಭಾರತ ತಂಡವನ್ನು 32 ಡೇವಿಸ್ ಕಪ್ ಟೂರ್ನಿಗಳಲ್ಲಿ ಪ್ರತಿನಿಧಿಸಿದ್ದಾರೆ. 2002ರಲ್ಲಿ ಅವರು ಪದಾರ್ಪಣೆ ಮಾಡಿದ್ದರು. ಎಟಿಪಿ ಟೂರ್‌ಗಳಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

‘2002ರಿಂದ ತಂಡದಲ್ಲಿದ್ದೇನೆ. ಈ ಪಂದ್ಯವು ನನ್ನ ತವರಿನ ಅಂಗಳದಲ್ಲಿ ಆಗಬೇಕೆಂಬ ಆಸೆ ಇತ್ತು. ಅದಕ್ಕಾಗಿ ನಾನು ಎಲ್ಲ ಆಟಗಾರರೊಂದಿಗೆ ಮಾತನಾಡಿದೆ. ಅವರೆಲ್ಲರೂ ಸಮ್ಮತಿಸಿದರು. ಕೆಎಸ್‌ಎಲ್‌ಟಿಎ ಕೂಡ ಸಂತಸಗೊಂಡಿದೆ. ಆದರೆ ಫೆಡರೇಷನ್ ಬೆಂಗಳೂರಿನಲ್ಲಿ ಟೂರ್ನಿ ಆಯೋಜಿಸುವ ಬಗ್ಗೆ ತೀರ್ಮಾನಿಸಬೇಕಿದೆ. ನನ್ನ ಸ್ಥಳೀಯ ಅಭಿಮಾನಿಗಳ ಮುಂದೆ ಕೊನೆಯ ಬಾರಿ ಆಡುವ ಅವಕಾಶ ದೊರೆಯುವ ಭರವಸೆ ಇದೆ’ ಎಂದು ರೋಹನ್ ಹೇಳಿದ್ದಾರೆ.

ರೋಹನ್ ಇದುವರೆಗೆ ನಾಲ್ಕು ಗ್ರ್ಯಾನ್‌ಸ್ಲಾಂ ಪ್ರಶಸ್ತಿಗಳನ್ನು ಜಯಿಸಿದ್ದಾರೆ.

‘ರೋಹನ್ ತಮ್ಮ ತವರಿನಂಗಳದಲ್ಲಿ ಕೊನೆಯ ಪಂದ್ಯ ಆಡುವ ಇಂಗಿತ ವ್ಯಕ್ತಪಡಿಸಿರುವುದು ತಪ್ಪಲ್ಲ. ಪ್ರಾಮಾಣಿಕವಾಗಿ ಹೇಳುವುದಾದರೆ ಇದು ಒಳ್ಳೆಯದು ಕೂಡ. ಆದರೆ ಈಗಾಗಲೇ ಡೇವಿಸ್ ಕಪ್ ಪಂದ್ಯವನ್ನು ಲಖನೌಗೆ ಮಂಜೂರು ಮಾಡಲಾಗಿದೆ’ ಎಂದು ಅಖಿಲ ಭಾರತ ಟೆನಿಸ್ ಸಂಸ್ಥೆ (ಎಐಟಿಎ) ಮಹಾಪ್ರಧಾನ ಕಾರ್ಯದರ್ಶಿ ಅನಿಲ್ ಧೂಪರ್ ಸ್ಪಷ್ಟಪಡಿಸಿದ್ದಾರೆ.

ರೋಹನ್ ಬೋಪಣ್ಣ